# ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 19 ಸಂಚಿಕೆ 41 ಅಕ್ಟೋಬರ್ 6-12, 1997 ಬೆಲೆ ರೂ. 2.00




### ಜನರಿಗೆ ನೀಡಿದ ಆಶ್ವಾಸನೆಗಳನ್ನು ಈಡೇರಿಸಿದರೆ ಮಾತ್ರವೇ ಸ್ಥಿರತೆ

## ಸಂಯುಕ್ತ ರಂಗ ಸರಕಾರಕ್ಕೆ ಮತ್ತೆ ಸಿಪಿಐ(ಎಂ) ಸಲಹೆ

ಕಾಂಗ್ರೆಸ್ ಮತ್ತೊಮ್ಮೆ ಬೆಂಕಿಯುಗಳ 'ಲಾರಂಭಿಸಿದೆ. ಬಿಜೆಪಿ ಮತ್ತೊಮ್ಮೆ ವಿಚ್ಛಿದ್ರಕಾರೀ ಅಯೋಧ್ಯಾ ಪ್ರಶ್ನೆಯನ್ನು ಎತ್ತಿಕೊಳ್ಳುವ ಪ್ರಯತ್ನ ನಡೆಸಿದೆ. ಈ ನಡುವೆ ಪ್ರಧಾನ ಮಂತ್ರಿಗಳು ನ್ಯೂಯಾರ್ಕಿನಿಂದ ಹಿಂದಿರುಗಿದ ಬೆನ್ನಲ್ಲೆ ಹಲವೆಡೆ ಭಯೋತ್ಪಾದಕ ಕೃತ್ಯಗಳು ನಡೆದಿವೆ. ದೇಶದ ಜನ ಎಡ-ಪ್ರಜಾಪ್ರಭುತ್ವವಾದಿ ಶಕ್ತಿಗಳು ಈ ಸವಾಲನ್ನು ಎದುರಿಸಬೇಕಾಗಿದೆ.

ಲಕ್ನೌನ ವಿಶೇಷ ನ್ಯಾಯಾಲಯ ಬಿಜೆಪಿ-ಆರ್.ಎಸ್.ಎಸ್.-ವಿ.ಹೆಚ್.ಪಿ. ಕೂಟದ 49 ಉನ್ನತ ಮುಖಂಡರ ಮೇಲೆ ಕ್ರಿಮಿನಲ್ ಆರೋಪಗಳನ್ನು ದಾಖಲು ಮಾಡಿದರೂ, ಅತ್ತ ಉತ್ತರ ಪ್ರದೇಶದಲ್ಲಿ ಬಿಜೆಪಿ ಮುಖ್ಯಮಂತ್ರಿ ಅಧಿಕಾರ ವಹಿಸಿಕೊಂಡಿರುವ ಹಿನ್ನೆಲೆಯಲ್ಲಿ ಮತ್ತೆ ಅಯೋಧ್ಯಾ ಪ್ರಶ್ನೆಯನ್ನೇ ತಮ್ಮ ಮುಖ್ಯಪ್ರಶ್ನೆಯನ್ನಾಗಿ ಮಾಡುವ ಸಿದ್ಧತೆ ನಡೆಸುತ್ತಿದ್ದಾರೆ. ಈ ಆರೋಪಿಗಳಲ್ಲಿ ಒಬ್ಬರಾದ ಮುಖ್ಯಮಂತ್ರಿ ಕಲ್ಯಾಣ್ ಸಿಂಗ್ ಬಾಬ್ರಿ ಮಸೀದಿ ಧ್ವಂಸ ಮಾಡಿದ ಜಾಗದಲ್ಲಿ ರಾಮದೇವಸ್ಥಾನ ಕಟ್ಟುವ ಆಶ್ವಾಸನೆಯನ್ನು ಬಹಿರಂಗವಾಗಿ ಕೊಟ್ಟಿದ್ದಾರೆ. ಮತ್ತೊಬ್ಬ ಆರೋಪಿ ಬಿಜೆಪಿಯ ಅಧ್ಯಕ್ಷ ಅಡ್ವಾಣಿಯವರು 'ಶ್ರೀರಾಮ ಬಂಧನದಲ್ಲಿದ್ದಾನೆ. ಅವರನ್ನು ಬಿಡುಗಡೆ ಮಾಡಬೇಕು' ಎಂದಿದ್ದಾರೆ. ಆರ್.ಎಸ್.ಎಸ್. ಮುಖಂಡ ರಾಜೇಂದ್ರ ಸಿಂಗ್ ಮತ್ತೊಮ್ಮೆ ಕಾಶಿ, ಮಥುರಾ ಪ್ರಶ್ನೆಗಳನ್ನು ಎತ್ತಿದ್ದಾರೆ. ಕೇಂದ್ರದಲ್ಲಿ ಹೇಗಾದರೂ ಮಾಡಿ ಅಧಿಕಾರಕ್ಕೆ ಬರುವ ಆತುರದಲ್ಲಿ ಬಿಜೆಪಿ ಅದಕ್ಕಾಗಿ ದೇಶದ ಜನಸಾಮಾನ್ಯರನ್ನು ಪ್ರತಿದಿನ ಬಾಧಿಸುತ್ತಿರುವ ಪ್ರಮುಖ ಸಮಸ್ಯೆಗಳನ್ನೆಲ್ಲಾ ಉಪೇಕ್ಷಿಸಿ ಮತ್ತೆ ಅಯೋಧ್ಯಾ ಪ್ರಶ್ನೆಯನ್ನೇ ತನ್ನ ಪ್ರಮುಖ ಪ್ರಚಾರ ವಿಷಯವಾಗಿ ಎತ್ತಿಕೊಳ್ಳುವ ಹುಂಚಿಕೆಯಲ್ಲಿರುವುದು ಇದರಿಂದ ಸ್ಪಷ್ಟ.

ಅತ್ತ ಕಾಂಗ್ರೆಸ್ ಸಮ್ಮಿಶ್ರ ಸರಕಾರಗಳ ಬಗ್ಗೆ ಅಪಲಾಪ ಮಾಡುತ್ತ 'ಸಂಯುಕ್ತ ರಂಕಗ ಸರಕಾರದ ವಿರುದ್ಧ 13 ಆರೋಪಗಳನ್ನು ಹಾಕುತ್ತಾ ಅದೇ ವೇಳೆಗೆ, ಅದರೂ ಸರಕಾರಕ್ಕೆ ಕಾಂಗ್ರೆಸ್ ಬೆಂಬಲ ಮುಂದುವರಿಯುತ್ತದೆ ಏಕೆಂದರೆ ಕಳೆದ ಸಾರ್ವತ್ರಿಕ ಚುನಾವಣೆಗಳಲ್ಲಿ 79% ಜನ ಒಂದು ಜಾತ್ಯಾತೀತ ಸರಕಾರಕ್ಕೆ ಮತ ನೀಡಿದ್ದಾರೆ" ಎಂದಿದ್ದಾರೆ ಕಾಂಗ್ರೆಸ್ ಅಧ್ಯಕ್ಷರು. ಆದರೆ ಅದೇ ಕಾಂಗ್ರೆಸ್ಸನ್ನು ಒಂದು ಅಸಹಾಯಕ ಅಲ್ಪ ಮತಕ್ಕಿಳಿಸುವ ಮೂಲಕ ಜಾತ್ಯಾತೀತ ಸರಕಾರಕ್ಕಾಗಿ ಮಾತ್ರವಲ್ಲ ಒಂದು ಜಾತ್ಯಾತೀತ ಕಾಂಗ್ರೆಸ್ಸೇತರ ಸರಕಾರಕ್ಕಾಗಿ ಮತ ನೀಡಿದ್ದಾರೆ ಎಂಬುದನ್ನು ಸಿಪಿಐ(ಎಂ)ನ ಪೊಲಿಟ್‌ಬ್ಯೂರೋ ಸದಸ್ಯ ಹಾಗೂ ಸಂಯುಕ್ತ ರಂಗ ಚಾಲನಾ ಸಮಿತಿ ಸದಸ್ಯ ಸೀತಾರಾಂ ಯೆಚೂರಿಯವರು ಕಾಂಗ್ರೆಸ್ ಮುಖಂಡರಿಗೆ ನೆನಪಿಸಿದ್ದಾರೆ.

ಕಳೆದ ಚುನಾವಣೆಗಳಲ್ಲಿ ಕಾಂಗ್ರೆಸ್ ಅಭೂತಪೂರ್ವ ಸೋಲುಣ್ಣಲು ಕಾರಣವಾದ ಆರ್ಥಿಕ ನೀತಿಗಳು ಮತ್ತು ಭ್ರಷ್ಟಾಚಾರದ ಪ್ರಶ್ನೆಯ ಮೇಲೆ ಕಾಂಗ್ರೆಸ್ ತನ್ನ ಹಳೆಯ ನಿಲುವಿಗೇ ಬದ್ಧವಾಗಿರುವಾಗ ಅದು ಹೇಗೆ ತಾನೇ ತನ್ನ ಜನಬೆಂಬಲವನ್ನು ಹೆಚ್ಚಿಸಿಕೊಳ್ಳಲು ಸಾಧ್ಯ? ತಾನು ಆರಂಭಿಸಿದ 'ಆರ್ಥಿಕ ಸುಧಾರಣೆ' ಗಳನ್ನೇ ಈಗಿನ ಹಣಕಾಸು ಮಂತ್ರಿಗಳು ಮುಂದುವರಿಸುತ್ತಿದ್ದಾರೆ ಎಂದು ಹೆಮ್ಮೆಯಿಂದ ಹೇಳಿಕೊಳ್ಳುವ ಕಾಂಗ್ರೆಸ್ ಅದರಿಂದಾಗಿ ಜನಗಳ ಜೀವನ ಇನ್ನಷ್ಟು ಹದಗೆಡುತ್ತಿರುವಾಗ, ತನ್ನ ಮುಖಂಡರ ಜಗಜ್ಜಾಹೀರಾದ ಭ್ರಷ್ಟಾಚಾರದ ವಿರುದ್ಧ ಯಾವುದೇ ಕ್ರಮಗಳನ್ನು ಕೈಗೊಳ್ಳಲು ಹಿಂಜರಿಯುತ್ತಿರುವಾಗ ಹೇಗೆ ತಾನೇ ಅದು ಮತ್ತೆ ಜನಬೆಂಬಲವನ್ನು ಪಡೆಯುವ ಬಗ್ಗೆ ಯೋಚಿಸುಲು ಸಾಧ್ಯ? ಆದ್ದರಿಂದಲೇ ತಾನೆ ಗುಜರಾತಿನ ವಾಘೇಲಾ ಸರಕಾರಕ್ಕೆ ನೀಡಿದ ಬೆಂಬಲವನ್ನು ಹಿಂತೆಗೆದು ಕೊಳ್ಳುವುದಾಗಿ ಹಾರಾಡಿದ ಕಾಂಗ್ರೆಸ್ ಮುಖಂಡರು ಈಗ ತೆಪ್ಪಗಾಗಿರುವುದು? ಜನಗಳಿಂದ ಯಾವುದೇ ಹೆಚ್ಚಿನ ಬೆಂಬಲದ ನಿರೀಕ್ಷೆಯಿಲ್ಲದ ಕಾಂಗ್ರೆಸ್ ಏಕ ಪಕ್ಷ ಆಳ್ವಿಕೆಯ ಮಾತನಾಡು ವುದೆಂದರೆ ಕೋಮುವಾದಿ ಶಕ್ತಿಗಳಿಗೆ ಪ್ರಯೋಜನ ನೀಡುವುದೆಂದೇ ಅರ್ಥವಲ್ಲವೇ ಎಂದು ಸೀತಾರಾಂ ಯೆಚೂರಿಯವರು ಸಿಪಿಐ(ಎಂ)ನ ಕೇಂದ್ರ ಸಮಿತಿಯ ವಾರ ಪತ್ರಿಕೆ 'ಪೀಪಲ್ಸ್ ಡೆಮಾಕ್ರಸಿ' ಯಲ್ಲಿನ ಒಂದು ಲೇಖನದಲ್ಲಿ ಕಾಂಗ್ರೆಸ್ ಮುಖಂಡರನ್ನು ಎಚ್ಚರಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ಸಂಯುಕ್ತ ರಂಗದ ಸರಕಾರ ಜನಗಳೊಂದಿಗೆ ತನ್ನ ಸಂಪರ್ಕ ಗಳನ್ನು ಬಲಪಡಿಸಲು ತನ್ನ 'ಸಮಾನ ಕನಿಷ್ಟ ಕಾರ್ಯಕ್ರಮ'ದಲ್ಲಿ ನೀಡಿದ ಭರವಸೆಗಳನ್ನು ಈಡೇರಿಸಬೇಕು, ಇದಕ್ಕಾಗಿ ವಿನಾಶಕಾರಿ ಆರ್ಥಿಕ ನೀತಿಗಳನ್ನು ಬದಲಿಸಬೇಕು ಎಂದು ಸೀತಾರಾಂ ಯೆಚೂರಿಯವರು ಹೇಳಿದ್ದಾರೆ. ಕಳೆದ ಸ್ವಾತಂತ್ರ್ಯ ದಿನದಂದು ಆಗಿನ ಪ್ರಧಾನಿ ದೇವೇಗೌಡರು ಬಡತನದ ರೇಖೆಯ ಕೆಳಗಿರುವ ಜನಗಳಿಗೆ ತುಸುವಾದರೂ ಪರಿಹಾರ ನೀಡುವ ಟಿಪಿಡಿಎಸ್ ಯೋಜನೆ ಯಲ್ಲಿ ಅರ್ಧ ಬೆಲೆಗಳಲ್ಲಿ 20 ಕೆ.ಜಿ. ಆಹಾರ ಧಾನ್ಯಒದಗಿಸುವ ಭರವಸೆ ನೀಡಿದ್ದರು. ಅದಿನ್ನೂ ಜಾರಿಗೆ ಬಂದಿಲ್ಲ. ಇದಕ್ಕೆ ಹಣ ಒದಗಿಸಲಾಗುವುದು ಎಂದಿದ್ದರೂ ಈಗ ಹಣಕಾಸು ಮಂತ್ರಿಗಳು ಹಣದ ಅಭಾವದ ನೆಪವೊಡ್ಡುತ್ತಿದ್ದಾರೆ. ಇದಕ್ಕೆ ಮಾತ್ರವಲ್ಲ ಸಮಾನ ಕನಿಷ್ಟ ಕಾರ್ಯಕ್ರಮದಲ್ಲಿ ಆಶ್ವಾಸನೆ ನೀಡಿದ ಇತರ ಹಲವು ಯೋಜನೆಗಳಿಗೂ ಕಡಿತ ಮಾಡುತ್ತಿದ್ದಾರೆ. ಈ ಕಾರಣಕ್ಕಾಗಿಯೇ ಸಿಪಿಐ(ಎಂ) ವಿವಿಧ ಜನಾಂದೋಲನಗಳ ಮೂಲಕ ಸಂಯುಕ್ತ ರಂಗ ಸರಕಾರದ ಮೇಲೆ ಜನ-ವಿರೋಧಿ ನೀತಿಗಳನ್ನು ಬಿಡುವಂತೆ, ಉನ್ನತ ಸ್ಥಾನಗಳಲ್ಲಿ ಭ್ರಷ್ಟಾಚಾರವನ್ನು ಮುಚ್ಚಿಹಾಕದಂತೆ ಒತ್ತಡ ಹಾಕುತ್ತಿದೆ ಎಂದು ಸೀತಾರಾಂ ಯೆಚೂರಿ ಹೇಳಿದ್ದಾರೆ.

ಸಂಯುಕ್ತ ರಂಗ ಸರಕಾರ ಜನಸಾಮಾನ್ಯ ರಿಗೆ ನೀಡಿದ ವಚನಗಳನ್ನು ಈಡೇರಿಸುವ ಮೂಲಕ ಮಾತ್ರವೇ ಸರಕಾರವನ್ನು ಅಸ್ಥಿರಗೊಳಿಸುವ ಕಾಂಗ್ರೆಸ್‌ನ ಸವಾಲನ್ನು ಹಾಗೂ ಮತ್ತೆ ವಿಚ್ಛಿದ್ರಕಾರಿ ಪ್ರಶ್ನೆಗಳನ್ನು ಎತ್ತಿಕೊಳ್ಳಲು ಮುಂದಾಗುತ್ತಿರುವ ಬಿಜೆಪಿಯ ಸವಾಲನ್ನು ಎದುರಿಸಲು ಸಾಧ್ಯ.

### ಮುಂಗಾರು ಹಿನ್ನಡೆ-ಆಹಾರಧಾನ್ಯ ಉತ್ಪಾದನೆಯಲ್ಲಿ ಕೊರತೆ

## ಬರ ಪರಿಹಾರ ಒದಗಿಸಲು ಸಿದ್ಧರಾಗಿ!

**ಎನ್.ಕೆ.ಉಪಾಧ್ಯಾಯ**

ಭಾರತ ದೇಶ ಫಲವತ್ತಾದ ಉತ್ತಮ ಭೂಮಿಯನ್ನು ಹೊಂದಿದೆ. ಈ ಭೂಮಿಗೆ ನೀರುಣಿಸಿ ದವಸ ಧಾನ್ಯ ಬೆಳೆಯಲು ಗಂಗಾ, ಯಮುನಾ, ಬ್ರಹ್ಮಪುತ್ರ, ಕೃಷ್ಣಾ-ಕಾವೇರಿಗಳಂಥ ನೀರು ತುಂಬಿ ಹರಿಯುವ ನದಿಗಳೂ ಇವೆ. ಆದರೆ ಸ್ವಾತಂತ್ರ್ಯ ಪಡೆದ ಕಳೆದು ಐವತ್ತು ವರ್ಷಗಳಲ್ಲಿ ಒಮ್ಮೆಯಾದರೂ ನಾವು ಆಹಾರ ಧಾನ್ಯದಲ್ಲಿ ಸ್ವಾವಲಂಬಿಗಳಾಗಿದ್ದೇವೆಂದು ಹೆಮ್ಮೆಯಿಂದ ಹೇಳಲು ಸಾಧ್ಯವಾಗಿಲ್ಲ, ಲಾಲ್ ಬಹದ್ದೂರ್ ಶಾಸ್ತ್ರಿಯವರು ಪ್ರಧಾನ ಮಂತ್ರಿಯಾಗಿದ್ದಾಗ 'ಜೈ ಜವಾನ್, ಜೈ ಕಿಸಾನ್' ಘೋಷಣೆ ಮೊಳಗಿಸಿದರು. ಆದರೆ ಬಂಡವಾಳಶಾಹಿ ಭೂಮಾಲಕರ ಪರವಾಗಿರುವ ಸರಕಾರಗಳು ಲಾಲ್ ಬಹದ್ದೂರ್ ಶಾಸ್ತ್ರಿಯವರ ಘೋಷಣೆಯಿಂದ ಸ್ಫೂರ್ತಿಪಡೆಯಲಿಲ್ಲ. ಲಾಲ್‌ಬಹದ್ದೂರ್ ಪಕ್ಷದವರಲ್ಲದ, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನೇತೃತ್ವದ ಎಡರಂಗ ಸರ್ಕಾರ ಪಶ್ಚಿಮ ಬಂಗಾಲದಲ್ಲಿ ಭೂಸುಧಾರಣೆ ಮೂಲಕ ಬಡ ರೈತರಿಗೆ, ಕೃಷಿಕಾರ್ಮಿಕರಿಗೆ ಭೂಮಿ ಕೊಡಿಸಿ, ಮಧ್ಯಮ-ಶ್ರೀಮಂತ ರೈತರ ಅವರ ಅವಶ್ಯಕತೆಗಳಿಗೆ ಸ್ಪಂದಿಸಿ, ರೈತ ಸಮುದಾಯವನ್ನು ವಿಶ್ವಾಸಕ್ಕೊಳಪಡುವಂತೆ ಮಾಡಿ ಇಡೀ ದೇಶದಲ್ಲಿಯೇ ಪಶ್ಚಿಮ ಬಂಗಾಲ ಸರಕಾರ ಆಹಾರ ಧಾನ್ಯ ಉತ್ಪಾದನೆಯಲ್ಲಿ ಸ್ವಾವಲಂಬಿಯಾಗಿರುವುದು ಮಾತ್ರವಲ್ಲ, ಹೆಚ್ಚುವರಿ ಬೆಳೆದ ಆಹಾರ ಧಾನ್ಯವನ್ನು ದೇಶದ ಜನರಿಗೆ ಕೊಡುಗೆಯಾಗಿ ಕೊಡಲೂ ಮುಂದಾಗಿದೆಂಬುದನ್ನು ಗಮನಿಸಿದಾಗ, ಬಂಡವಾಳಶಾಹಿ ಭೂಮಾಲಕರ ಪರ ಕಾಂಗ್ರೆ, ಜನತಾಪಕ್ಷ, ಜನತಾದಳ ಹಾಗೆಯೇ ಇತರ ಪಕ್ಷಗಳ ಸರಕಾರಗಳು ಭೂಮಿ-ನೀರನ್ನು ಉಪಯೋಗಿಸುವದರಲ್ಲಿ ಎಡವುತ್ತಿದ್ದಾರೆಂಬ ಅಂಶ ಎದ್ದುಕಾಣುತ್ತಿದೆ.

ಇದರಲ್ಲಿ ಮುಖ್ಯಅಂಶಗಳನ್ನು ಗಮನಿಸಬಹುದಾಗಿದೆ. ದೇಶದ ಬೇರೆ ಬೇರೆ ಪ್ರದೇಶಗಳ ಹವಾಮಾನ, ಮಳೆಯ ಪ್ರಮಾಣದಲ್ಲಿ ಏರುಪೇರುಗಳಿರುವುದರಿಂದ ನಮ್ಮ ದೇಶದಲ್ಲಿ ನಿರಂತರ ಹರಿಯುತ್ತಿರುವ, ಮಳೆಗಾಲದಲ್ಲಿ ನೆರೆ ಹಾವಳಿಯಿಂದಾಗಿ ಲಕ್ಷಾವಧಿ ಎಕರೆ ಭೂಮಿಯನ್ನು ಮುಳುಗಡೆ ಮಾಡಿ ಕೋಟ್ಯಾವಧಿ ರೂಪಾಯಿ ಹಾನಿ ಉಂಟುಮಾಡಿ, ಸಾವಿರಾರು ಜೀವಹಾನಿಗೊಳಪಡಿಸುತ್ತಿರುವ ನದಿಗಳನ್ನು ಜೋಡಿಸುವ ಬಗ್ಗೆ ಗಂಭೀರವಾಗಿ ಯೋಚಿಸುತ್ತಿಲ್ಲ. ಈಗ ಪ್ರಚಲಿತ ಚರ್ಚೆಯಲ್ಲಿರುವ ಗಂಗಾ-ಕಾವೇರಿ ನದಿಗಳ ಜೋಡಣೆಯನ್ನು ಹಿಂದೆ ಆಳಿದ-ಈಗ ಆಳುತ್ತಿರುವ ಸರಕಾರಗಳು ಗಂಭೀರವಾಗಿ ಪರಿಗಣಿಸುತ್ತಿಲ್ಲ. ಎರಡನೆಯದಾಗಿ, ಸ್ವಾತಂತ್ರ್ಯ ಹೋರಾಟ ನಡೆಯುತ್ತಿರುವಾಗಲೇ ದೇಶದ ರೈತ ಸಮುದಾಯಕ್ಕಿತ್ತ ಆಶ್ವಾಸನೆ ಅಂದರೆ ಸ್ವಾತಂತ್ರ್ಯ ಸಿಕ್ಕ ನಂತರ "ಉಳುವವನನ್ನೇ ಭೂಮಿಯ ಒಡೆಯನನ್ನಾಗಿ ಮಾಡುವ" ಜಮಿನುದಾರರರ, ದೊಡ್ಡ ಭೂಮಾಲಕರ ಭೂಮಿಯನ್ನು ಭೂಮಸೂದೆ ಮೂಲಕ ಬಡ ರೈತರಿಗೆ, ಕೃಷಿ ಕಾರ್ಮಿಕರಿಗೆ ಹಂಚಿಕೊಡುವ ಘೋಷಣೆಯನ್ನು ಕಾರ್ಯರೂಪದಲ್ಲಿ ತರಲು ವಿಫಲಗೊಂಡವು. ಆ ಘೋಷಣೆಯನ್ನೆ ಮರೆತಿದ್ದಾರೆ. ಮೂರನೆಯದಾಗಿ, ಆಯಾ ರಾಜ್ಯಗಳಲ್ಲಿಯ ನೀರಾವರಿ ಯೋಜನೆಗಳನ್ನು ನಿರ್ಲಕ್ಷಿಸಿ ರೈತರನ್ನು ಮೋಸಗೊಳಿಸಿರುವುದು.

ಈ ಕಾರಣಗಳಿಂದಾಗಿಯೇ ನಮ್ಮ ದೇಶದ ಹಲವಾರು ರಾಜ್ಯಗಳು ಹಾಗೆಯೆ ನಮ್ಮ ರಾಜ್ಯ 2-3 ವರ್ಷಗಳಿಗೊಮ್ಮೆ ಬರಗಾಲದ ಬವಣೆಯನ್ನೆದುರಿಸಬೇಕಾದಂಥ ಗಂಭೀರ ಪರಿಸ್ಥಿತಿಯನ್ನು ಕಾಣುತ್ತೇವೆ. ಮೇಲಿನ ಮೂರು ಕ್ರಮಗಳತ್ತ ಗಮನ ಹರಿಸಿ ಕಾರ್ಯೋನ್ಮುಖರಾದರೆ ಸಂಪೂರ್ಣವಾಗಿ ಆಗದಿದ್ದರೂ, ಹೆಚ್ಚಿನ ಮಟ್ಟಿಗೆ ಅಭಾವ, ಬರಗಾಲದಂಥ ಪರಸ್ಥಿತಿಯಿಂದ ಹೊರಗೆ ಬರಲು ಸಾಧ್ಯವಾಗಬಹುದಾಗಿದೆ.

ಈ ವರ್ಷ ಮುಂಗಾರು ಹಂಗಾಮಿನಲ್ಲಿ ಮಳೆಯ ಪ್ರಮಾಣ ಬಹಳಷ್ಟು ಕಡಿಮೆ ಆಗಿರುವುದರಿಂದ ಹೆಚ್ಚಾಗಿ ಅಕ್ಕಿ ಬೆಳೆಯುತ್ತಿರುವ ಹಾಗೆಯೇ ಮುಂಗಾರಿಗೆ ಪ್ರಾಧಾನ್ಯತೆ ಇರುವ ದಕ್ಷಿಣ ಭಾರತದ ಕರ್ನಾಟಕ, ತಮಿಳುನಾಡು, ಆಂಧ್ರ, ಮಹಾರಾಷ್ಟ್ರಗಳಲ್ಲಿ ಮೇ, ಜೂನ್ ತಿಂಗಳಲ್ಲಿ ಮಳೆ ಪ್ರಮಾಣ ಕಡಿಮೆಯಾಗಿರುವುದರಿಂದ, ಕೃಷಿ ಕೆಲಸ ಕೈಗೊಳ್ಳಲಾಗದೆ, ಭೂಮಿಯಲ್ಲಿ ಬಿತ್ತನೆಯಾಗದಿರುವುದರಿಂದ ಕೃಷಿ ಉತ್ಪನ್ನದ ಮೇಲೆ ಯಾವ ರೀತಿ ಪರಿಣಾಮ ಬೀರಬಹುದೆಂಬುದನ್ನು ಕಂಡು ಹಿಡಿಯುವ ಸಲುವಾಗಿ ಸಮೀಕ್ಷೆ ನಡೆಸಿದ ವರದಿ ಈ ವರ್ಷ ಮುಂಗಾರು ಫಸಲಿನಲ್ಲಿ20 ಲಕ್ಷ ಟನ್ ಕೊರತೆ ಬೀಳಲಿದೆ ಎಂದು ಅಭಿಪ್ರಾಯ ಪಟ್ಟಿದೆ. ಭಾರತದಲ್ಲಿ ಮಳೆ ಆಶ್ರಿತ ಕೃಷಿ ಭೂಮಿಯೇ ಹೆಚ್ಚಾಗಿರುವುದರಿಂದಾಗಿ, ಮುಂಗಾರು ಮಳೆ ಕೈಕೊಟ್ಟಿರುವುದರಿಂದಾಗಿ ಒಟ್ಟು ಉತ್ಪಾದನೆ 103.5 ದಶಟನ್‌ಗೆ ಇಳಿಯಬಹುದೆಂದೂ ದಕ್ಷಿಣ ಭಾರತದ ಪ್ರಮುಖ ಆಹಾರವಾದ ಭತ್ತದ ಉತ್ಪಾದನೆ 73.1 ದಶಲಕ್ಷ ಟನ್ ಮೀರಲಾರದೆಂದೂ ಸಮೀಕ್ಷೆ ಹೇಳಿದೆ.

ಕರ್ನಾಟಕ, ಮಹಾರಾಷ್ಟ್ರ, ಆಂಧ್ರಪ್ರದೇಶ ಮತ್ತು ತಮಿಳುನಾಡು ರಾಜ್ಯಗಳಲ್ಲಿ ಮುಂಗಾರು ಮಳೆ ಕಡಿಮೆಯಾಗಿರುವ ಕಾರಣ ಕೇಂದ್ರ ಸರಕಾರದ ಸಂಗ್ರಹದ ಮೇಲೆ ಕೆಟ್ಟ ಪರಿಣಾಮ ಬೀರಲಿದೆ. ಈ ರೀತಿಯ ಆಹಾರ ಉತ್ಪಾದನೆಯ ಕೊರತೆ ಆಹಾರ ಧಾನ್ಯಗಳ ಬೆಲೆಯ ಮೇಲೆ ಪರಿಣಾಮ ಬೀರಿ ಬೆಲೆ ಹೆಚ್ಚಳಕ್ಕೆ ಕಾರಣವಾಗಿ ಸಾರ್ವಜನಿಕರನ್ನು ಮುಖ್ಯವಾಗಿ, ಬಡ ಮಧ್ಯಮ ವರ್ಗದವರನ್ನು ಸಂಕಷ್ಟಕ್ಕೆ ಗುರಿಪಡಿಸಬಹುದಾಗಿದೆ.

ಈ ಮಧ್ಯೆ ಅಂತರ್ರಾಷ್ಟ್ರೀಯ ಹಣಕಾಸು ಸಂಸ್ಥೆಯ ಒತ್ತಡಕ್ಕೆ ಮಣಿದ

ಪುಟ 2 ನೋಡಿ

### ಗುತ್ತಿಗೆ ಕಾರ್ಮಿಕರ ರಾಜ್ಯ ಸಮಾವೇಶ

## ಗುತ್ತಿಗೆ ಪದ್ಧತಿ ವಿರೋಧಿಸಿ ಆಂದೋಲನ

ಉದಾರೀಕರಣ ಪ್ರಕ್ರಿಯೆ ಪ್ರಾರಂಭಗೊಂಡ ನಂತರ ಗುತ್ತಿಗೆ ಕಾರ್ಮಿಕ ಪದ್ಧತಿಯು ಹೆಚ್ಚುತ್ತಿದ್ದು ಖಾಯಂ ಕಾರ್ಮಿಕರ ಪ್ರಮಾಣವು ಹೆಚ್ಚುತ್ತಿರುವ ಸಂದರ್ಭದಲ್ಲಿ ಸಿಐಟಿಯು ರಾಜ್ಯ ಸಮಿತಿಯು ಗುತ್ತಿಗೆ ಕಾರ್ಮಿಕ ಪದ್ಧತಿ ರದ್ಧತಿಗೆ ಆಗ್ರಹಿಸಿ ಸೆಪ್ಟೆಂಬರ್ 30 ರಂದು ಬೆಂಗಳೂರಿನಲ್ಲಿ ಗುತ್ತಿಗೆ ಕಾರ್ಮಿಕರ ರಾಜ್ಯ ಸಮಾವೇಶವನ್ನು ಏರ್ಪಡಿಸಿತ್ತು.

ರಾಜ್ಯದ ಕೈಗಾರಿಕೆಗಳಲ್ಲಿರುವ ಕಾರ್ಮಿಕರಲ್ಲಿ ಶೇ 33 ರಷ್ಟು ಗುತ್ತಿಗೆ ಕಾರ್ಮಿಕರಿದ್ದಾರೆಂಬ ಅಂಶ ಕಾರ್ಮಿಕ ಸಂಘಟನೆಗಳ ಮುಂದಿರುವ ಗಂಭೀರ ಸಮಸ್ಯೆಯಾಗಿರುವ ಹಿನ್ನಲೆಯಲ್ಲಿ ಸಿಐಟಿಯುವಿನ ಕಳೆದ ರಾಜ್ಯ ಸಮ್ಮೇಳನವು ಗುತ್ತಿಗೆ ಕಾರ್ಮಿಕ ಪದ್ಧತಿಯ ಸಮಸ್ಯೆಯು ತನ್ನ ಎಲ್ಲೆ ಮೀರುತ್ತಿರುವುದನ್ನು ಮನಗಂಡು ಮುನ್ನೆಚ್ಚರಿಕಾ ಕ್ರಮಕ್ಕೆ ಕರೆ ನೀಡಿದ್ದು ಇಲ್ಲಿ ಉಲ್ಲೇಖಾರ್ಹ.

ಈ ವರ್ಷದ ಮೇ ತಿಂಗಳ ವರೆಗೆ ರಾಜ್ಯದ 1992 ಉದ್ದಿಮೆಗಳಲ್ಲಿ 2,44,851 ಗುತ್ತಿಗೆ ಕಾರ್ಮಿಕರು ಕಾರ್ಯನಿರ್ವಹಿಸುತ್ತಿರುವುದು ಅಧಿಕೃತ ದಾಖಲೆಗಳಿಂದಲೇ ತಿಳಿದು ಬಂದಿದೆ. ಸುಪ್ರಿಂ ಕೋರ್ಟಿನ ಆದೇಶಕ್ಕೆ ವಿರುದ್ಧವಾಗಿ ರಾಜ್ಯದಲ್ಲಿ ಗುತ್ತಿಗೆ ಕಾರ್ಮಿಕರ ಸಂಖ್ಯೆ ಹೆಚ್ಚುತ್ತಲೇ ಸಾಗಿದೆ. ರಾಜ್ಯದಲ್ಲಿರುವ ಸರ್ಕಾರಿ ಸ್ವಾಮ್ಯದ ಹಾಗೂ ಖಾಸಗಿ ಉದ್ದಿಮೆಗಳು ಕಾರ್ಮಿಕ ಕಾನೂನಿನ ವಿರುದ್ಧವಾಗಿ ಗುತ್ತಿಗೆ ಕಾರ್ಮಿಕರನ್ನು ನೇಮಕ ಮಾಡಿಕೊಂಡು ಅವರಿಗೆ ಯಾವುದೇ ಸೌಲಭ್ಯ ನೀಡದೆ ಶೋಷಣೆ ಮಾಡುತ್ತಿವೆ ಎಂದು ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ವಿ.ಜೆ.ಕೆ.ನಾಯರ್ ಹೇಳಿದರು.

ಸಮಾವೇಶವನ್ನು ಉದ್ಘಾಟಿಸಿ, ಮಾತನಾಡಿದ ಕಾರ್ಮಿಕ ರಾಜ್ಯ ಸಚಿವ ಸತ್ಯನಾರಾಯಣ ಸುಪ್ರೀಂ ಕೋರ್ಟ್ ಆದೇಶದ ಮೇರೆಗೆ ರಾಜ್ಯ ಸರ್ಕಾರವು ರಾಜ್ಯದಲ್ಲಿ ಗುತ್ತಿಗೆ ಕಾರ್ಮಿಕ ಪದ್ಧತಿಯನ್ನು ರದ್ದು ಪಡಿಸಲು ಅಗತ್ಯ ಕ್ರಮವನ್ನು ಕೈ ಗೊಳ್ಳಲಿದೆ ಎಂದು ತಿಳಿಸಿದರು.

ಈಗಾಗಲೇ ಆಸ್ಪತ್ರೆ-ನರ್ಸಿಂಗ್ ಹೋಂ, ಸ್ಟೀಲ್ ರೀರೋಲಿಂಗ್, ಕ್ಯಾಂಟೀನ್ ಹಾಗೂ ಇನ್ನು ಎರಡು ಖಾಸಗಿ ಕಾರ್ಖಾನೆಗಳಲ್ಲಿ ಗುತ್ತಿಗೆ ಪದ್ಧತಿಯನ್ನು ರದ್ದು ಮಾಡುವಂತೆ ರಾಜ್ಯ ಸರ್ಕಾರದ ಆದೇಶ ನೀಡಿದೆ. ಇವುಗಳಲ್ಲಿ 4 ಉದ್ದಿಮೆಗಳು ಹೈಕೋರ್ಟಿಗೆ ಮೇಲ್ಮನವಿ ಸಲ್ಲಿಸಿ ಈ ಆದೇಶದ ವಿರುದ್ಧ ತಡೆಯಾಜ್ಞೆ ಪಡೆದಿವೆ ಎಂದು ಸಚಿವರು ತಿಳಿಸಿದರು.

ಸುಪ್ರೀಂ ಕೋರ್ಟ್ 2 ದಿಕ್ಕು ಸೂಚಿಸುವ ತೀರ್ಪುಗಳನ್ನು ನೀಡಿದ್ದು, ಗುತ್ತಿಗೆ ಪದ್ಧತಿಯ ಬೆಳವಣಿಗೆಯನ್ನು ಹಿಮ್ಮೆಟ್ಟಿಸಿದ್ದು, ಗುತ್ತಿಗೆ ಕಾರ್ಮಿಕರ ನಿಷೇಧ ಹಾಗೂ ಖಾಯಮಾತಿಗೆ ಅವಕಾಶ ಮಾಡಿ ಕೊಟ್ಟಿದೆ. ಮೊದಲ ತೀರ್ಪಿನ ಪ್ರಕಾರ ಕಾರ್ಮಿಕರ ಕಾಂಟ್ರಾಕ್ಟ್ ಕಪಟದಿಂದ ಕೂಡಿದ್ದೆಂದು ಆರೋಪಿಸಿದ್ದಲ್ಲಿ, ಕಾರ್ಮಿಕರು ತಮಗೆ ಸಮರ್ಪಕ ಸೇವಾ ಸೌಲಭ್ಯಗಳನ್ನು ಕಲ್ಪಿಸಲು ಕೋರಿ ವ್ಯಾಜ್ಯ ಹೂಡಬಹುದಾಗಿದೆ.

ಎರಡನೇ ತೀರ್ಪಿನ ಪ್ರಕಾರ ಗುತ್ತಿಗೆ ಪದ್ಧತಿಯಡಿಯಲ್ಲಿದ್ದ ಕಾರ್ಮಿಕರನ್ನು ಖಾಯಂ ಆಗಿ ಕೆಲಸಕ್ಕೆ ತೆಗೆದುಕೊಳ್ಳಬಹುದಾಗಿದೆ ಎಂದು ವಿಜೆಕೆ ನಾಯರ್ ತಿಳಿಸಿದರು.

ಕೇಂದ್ರ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿರುವ ಬಿ.ಇ.ಎಲ್. ಮತ್ತಿತರ ಪ್ರತಿಷ್ಠಿತ ಉದ್ದಿಮೆಗಳಲ್ಲಿ ಕೂಡ ಗುತ್ತಿಗೆ ಕಾರ್ಮಿಕ ಪದ್ಧತಿ ಮುಂದುವರಿಯುತ್ತಿರುವುದು ನಾಚಿಕೆಗೇಡಿತನ ಎಂದು ಸಮಾವೇಶದ ಅಧ್ಯಕ್ಷತೆ ವಹಿಸಿದ ರಾಜ್ಯ ಸಿಐಟಿಯು ಅಧ್ಯಕ್ಷರಾದ ಕಾಂ. ಸೂರ್ಯನಾರಾಯಣ ರಾವ್ ಹೇಳಿದರು.

ಸಮಾವೇಶವು ಗುತ್ತಿಗೆ ಕಾರ್ಮಿಕ ಪದ್ಧತಿ ರದ್ದಿಗೆ ಒತ್ತಾಯಿಸಿ ಕೆಲವು ನಿರ್ಣಯಗಳನ್ನು ಕೈಗೊಂಡಿದೆ.

1. ಅಕ್ಟೋಬರ್ 20 ರಿಂದ 25 ರ ವರೆಗೆ ಪ್ರತಿಭಟನಾ ವಾರಾಚರಣೆ.
2. ನಿರಂತರ ಕೆಲಸದಲ್ಲಿರುವ ಕಾರ್ಮಿಕರ ಖಾಯಂಗೆ ಒತ್ತಾಯ ಗೊಳಿಸುವುದು.
3. ಗುತ್ತಿಗೆ ಕಾರ್ಮಿಕರ ಬೇಡಿಕೆಗಳನ್ನು ಮುಂದಿಟ್ಟು ಬ್ಯಾಡ್ಜ್ ಧರಿಸಿ, ಜಿಲ್ಲಾ ಕೇಂದ್ರ ಮತ್ತು ಕೈಗಾರಿಕಾ ಪ್ರದೇಶಗಳಲ್ಲಿ ಪ್ರತಿಭಟನೆ ನಡೆಸಿ ಮನವಿ ಸಲ್ಲಿಸುವುದು.
4. 3 ತಿಂಗಳ ನಂತರ 1 ದಿನದ ಮುಷ್ಕರ.

ಸಮಾವೇಶವು ಕಾಂ. ಮೀನಾಕ್ಷಿ ಸುಂದರಂ ಸಂಚಾಲಕತ್ವದ 24 ಸದಸ್ಯರ ಒಂದು ಸಮಿತಿಯನ್ನು ರಚಿಸಿತು.

ರಾಟೆಯ ಚಕ್ರ ಗಾಂಧೀಜಿ ಕಂಡರಿಸಿದ ಅಭಿವೃದ್ಧಿಯ ಆದರ್ಶವಾಗಿದ್ದರೆ 'ಕೈಗಾರೀಕರಣ ಹೊಂದಿ ಇಲ್ಲವೇ ನಾಶವಾಗಿ' ಎಂಬ ಘೋಷಣೆ ನೀಡಿದ ವಿಶ್ವೇಶ್ವರಯ್ಯನವರಿಗೆ ಮೋಟಾರು ಗಾಲಿಯ ಚಕ್ರ ಆದರ್ಶವಾಗಿತ್ತು. ಔದ್ಯೋಗೀಕರಣದಿಂದಾಗುವ ಅನಾಹುತಗಳಿಗೆ ಅಂಜುತ್ತಿದ್ದ ಗಾಂಧೀಜಿ 'ಕೈಗಾರೀಕರಣ ಹೊಂದಿ ಮತ್ತು ನಾಶವಾಗಿ' ಎಂದರು. ಆದರೆ ಇಬ್ಬರೂ ಪರಸ್ಪರರನ್ನು ಗೌರವಿಸುತ್ತಿದ್ದರು. ಇಬ್ಬರೂ ಸ್ವದೇಶ ಪ್ರೇಮಿಗಳಾಗಿದ್ದರು. ಆದರೆ ದೇಶದ ಅಭಿವೃದ್ಧಿಯನ್ನು ಆಳುವ ವರ್ಗದ ದೃಷ್ಟಿಕೋನದಿಂದ ನೋಡಿದವರು.

## ಗ್ರಾಮೀಣಾಭಿವೃದ್ಧಿಯ ಬಗ್ಗೆ ಎರಡು ಭಿನ್ನ ದೃಷ್ಟಿಕೋನಗಳು

# ಗಾಂಧೀಜಿ ಮತ್ತು ವಿಶ್ವೇಶ್ವರಯ್ಯ

- ಸಿ.ಯತಿರಾಜು

ಗ್ರಾಮೀಣಾಭಿವೃದ್ಧಿಯ ಬಗ್ಗೆ ಇದ್ದ ತಮ್ಮ ದೇಅದ ಕನಸುಗಳನ್ನು ನನಸಾಗಿಸಲು ಮಹಾತ್ಮ ಗಾಂಧಿಯವರು "ಅಖಿಲ ಭಾರತ ಗ್ರಾಮೋದ್ಯೋಗ ಸಂಘ" ಸ್ಥಾಪಿಸಿ ಅದಕ್ಕೆ ತಾವೇ ಅಧ್ಯಕ್ಷರಾದರು. ಈ ಸಂಘದ ಸಲಹಾ ಸಮಿತಿಯ ಸದಸ್ಯರಾಗಲು ಅವರು ಸರ್ ಎಂ ವಿಶ್ವೇಶ್ವರಯ್ಯನವರನ್ನು ಆಹ್ವಾನಿಸಿದರು. ಈ ಆಹ್ವಾನವನ್ನು ಅವರು ಅತ್ಯಂತ ಸೌಜನ್ಯಪೂರ್ವಕವಾಗಿ ಕಳುಹಿಸಿದರು. ಎಲ್ಲಾ ಸಭೆಗಳಿಗೂ ಬರಬೇಕಾಗಿಲ್ಲ, ಅವರ ಪರಿಣತಿ ಇರುವ ವಿಷಯಗಳ ಬಗ್ಗೆ ಚರ್ಚಿಸಿ ತೀರ್ಮಾನಿಸಬೇಕಾದಾಗ ತಮ್ಮ ಸಲಹೆ ನೀಡಿದರೆ ಸಾಕೆಂಬ ರಿಯಾಯತಿ. ಇಂತಹ ಆಹ್ವಾನವನ್ನು ವಿಶ್ವೇಶ್ವರಯ್ಯನವರು ಅತ್ಯಂತ ವಿನಯಪೂರ್ವಕವಾಗಿಯೇ ನಿರಾಕರಿಸಿದರು. ರಾಷ್ಟ್ರಪಿತನ ಮನವಿಯನ್ನು ತಿರಸ್ಕರಿಸಲು ವಿಶ್ವೇಶ್ವರಯ್ಯನವರಿಗೆ ತಮ್ಮದೆ ಆದ ಪ್ರಬಲ ಕಾರಣಗಳಿದ್ದವು. ಭಾರತ ಉದ್ಧಾರವಾಗಬೇಕಾದರೆ ಅದರ ಹಳ್ಳಿಗಳು ಅಭಿವೃದ್ಧಿ ಹೊಂದಬೇಕೆಂದು ಇಬ್ಬರೂ ಬಲವಾಗಿ ನಂಬಿದ್ದರೂ ಅದಕ್ಕಾಗಿ ಅನುಸರಿಸಬೇಕಾದ ಮಾರ್ಗಗಳ ಬಗ್ಗೆ ಈ ಎರಡು ಮಹಾಚೇತನಗಳಿಗೂ ಪರಸ್ಪರ ವಿರುದ್ಧವಾದ ಅಭಿಪ್ರಾಯಗಳಿದ್ದವು. ಈ ಅಭಿಪ್ರಾಯಭೇದಗಳಿಂದಾಗಿ ಅವರಿಬ್ಬರೂ ಒಟ್ಟಾಗಿ ಕೆಲಸ ಮಾಡಲಾಗಲಿಲ್ಲ.

ಗಾಂಧೀಜಿ ರಾಮರಾಜ್ಯದ ಸ್ಥಾಪನೆಗೆ "ಆದರ್ಶ ಗ್ರಾಮಗಳನ್ನು" ರೂಪಿಸಲು ಬಯಸಿದರೆ ವಿಶ್ವೇಶ್ವರಯ್ಯನವರು "ಆತ್ಮಗೌರವ ಗ್ರಾಮದ" ಪರಿಕಲ್ಪನೆ ನೀಡಿದರು. ಈ ಆತ್ಮಗೌರವದ ಗ್ರಾಮ ಪರಾವಲಂಬಿಯಾಗಿರದೆ ಸ್ವಪರಿಪೂರ್ಣವಾಗಿ ಬಾಳುತ್ತಿದ್ದೇವೆ ಎಂದು ಹೆಮ್ಮೆಪಡುವ ಗ್ರಾಮ. ಪ್ರತಿ ಗ್ರಾಮದಲ್ಲೂ ಕಮ್ಮಾರ, ಚಮ್ಮಾರ, ಬಡಗಿ ಇರಬೇಕು. ಗಾಡಿಯ ಗಾಲಿ ಗ್ರಾಮದಲ್ಲೇ ಆಗಬೇಕು. ಪ್ರತಿಯೊಂದು ಕುಟುಂಬವೂ ಉಪಕಸುಬು ಕಲಿತಿರಬೇಕು. 250 ಪ್ರಜಾಸಂಖ್ಯೆಗೆ ಒಂದು ಕೈಗಾರಿಕೆ, ಪ್ರತಿ ಸಂಸಾರವು 2 ವರ್ಷಗಳಿಗೆ ಸಾಕಾಗುವ ಧಾನ್ಯ ಸಂಗ್ರಹಿಸಬೇಕು. ಪ್ರತಿಫಲ ಕೊಡುವ ಉದ್ದೇಶಗಳಿಗಲ್ಲದೇ ಸಾಲ ಮಾಡಬಾರದು. ಗ್ರಾಮದ ವಾರ್ಷಿಕ ಉತ್ಪಾದನಾ ಸಾಮರ್ಥ್ಯ ಅಳೆಯಬೇಕು. ಸರಾಸರಿ ತಲಾ 33 ರೂ ವರಮಾನ ಕೊಡಲಾಗದ ಗ್ರಾಮ ಆರ್ಥಿಕವಾಗಿ ಸುರಕ್ಷಿತವಲ್ಲ. ವರ್ಷಾಂತ್ಯದಲ್ಲಿ ಪ್ರತಿ ಗ್ರಾಮವು ಜನನ ಮರಣ ಸಂಖ್ಯೆ, ದನಗಳ ಸಂಖ್ಯೆ, ಪ್ರಮುಖ ಕೈಗಾರಿಕೆ, ಗ್ರಾಮದ ಹೆಸರು ವಿಸ್ತೀರ್ಣ ಇವುಗಳನ್ನು ಗ್ರಾಮದ ಹೊರಗೆ ಪ್ರದರ್ಶಿಸಬೇಕು. ಅಭಿವೃದ್ಧಿ ಕಾರ್ಯಗಳ ವರದಿ ಪ್ರಕಟಿಸಬೇಕು. ಕನಿಷ್ಠ 2 ವರ್ತಮಾನ ಪತ್ರಿಕೆಗಳನ್ನು ತರಿಸಿಕೊಂಡು ಪ್ರಪಂಚದ ಆಗು ಹೋಗುಗಳ ಅರಿವು ಮಾಡಿಕೊಳ್ಳಬೇಕು. ವಿಶ್ವೇಶ್ವರಯ್ಯನವರು ಗ್ರಾಮಾಭಿವೃದ್ಧಿಗಾಗಿ 6 ವಿಭಾಗಗಳನ್ನು ಮಾಡಿಕೊಳ್ಳಲು ಸಲಹೆ ಮಾಡಿದರು. ಅವುಗಳೆಂದರೆ 1. ವ್ಯವಸಾಯ 2. ಉಪಕಸುಬು 3. ಶಿಕ್ಷಣ 4. ಕೈಗಾರಿಕೆ 5. ವ್ಯವಸಾಯ 6. ಆಡಳಿತ ನಿರ್ವಹಣೆ ಮತ್ತು ಶಾಂತಿಪಾಲನೆ.

### ವಿಜ್ಞಾನ ತಂತ್ರಜ್ಞಾನದ ಬಳಕೆ

ವಿಶ್ವೇಶ್ವರಯ್ಯನವರು ಪ್ರತಿಗ್ರಾಮವು ತನ್ನ ಅಭಿವೃದ್ಧಿಯನ್ನು ತಾನೇ ಸಾಧಿಸುವಂತಾಗಬೇಕು, ಅದಕ್ಕಾಗಿ ಗ್ರಾಮಾಭಿವೃದ್ಧಿಯ ಯೋಜನೆಯನ್ನು ಆ ಗ್ರಾಮದ ಜನರೇ ರೂಪಿಸುವಂತಾಗಬೇಕೆಂದು ಬಯಸಿದರು. ತಾವು ದಿವಾನರಾಗಿದ್ದಾಗ ತಮ್ಮ ಪರಿಕಲ್ಪನೆಗಳನ್ನು ಜಾರಿಗೊಳಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸಿದರು. ಪ್ರತಿಯೊಂದಕ್ಕೂ ಸರ್ಕಾರವನ್ನು ಅವಲಂಬಿಸದೆ ಸ್ವಂತ ಜವಾಬ್ದಾರಿಯ ಮೇಲೆ ಕೆಲಸ ನಡೆಸುವಂತೆ ಗ್ರಾಮೀಣರನ್ನು ವಿಶ್ವೇಶ್ವರಯ್ಯನವರು ಹುರಿದುಂಬಿಸುತ್ತಿದ್ದರು. ಹಳ್ಳಿಗಳು, ಕೆರೆಯ, ನಾಲೆಯ, ಹೂಳುತೆಗೆಯುವುದು, ಗ್ರಾಮನೈರ್ಮಲ್ಯ, ದೇವಾಲಯ ಮಂಟಪಗಳ ದುರಸ್ತಿ, ರಸ್ತೆ ನಿರ್ಮಾಣ ಮೊದಲಾದ ಕೆಲಸಗಳನ್ನು ಸಾಮೂಹಿಕವಾಗಿ ಇಡೀ ಊರಿನ ಜನತೆ ಒಟ್ಟಾಗಿ ಕೂಡ ಮಾಡಬೇಕೆಂದು ಕರೆ ನೀಡಿದರು. ವಾರದ ಪ್ರತಿ ಸೋಮವಾರ ಗ್ರಾಮದ ಪ್ರತಿಕುಟುಂಬದವರೂ ಒಟ್ಟಾಗಿ ಸೇರಿ ಮೇಲೆ ತಿಳಿಸಿದ ಸಾಮುದಾಯಿಕ ಕೆಲಸಗಳನ್ನು ನಿರ್ವಹಿಸಬೇಕೆಂದು ಕರೆ ನೀಡಿದರು. ಇದರಿಂದ ಪರಸ್ಪರ ಪರಿಚಯ ಮತ್ತು ಐಕ್ಯತೆ ಬೆಳೆಯುತ್ತದೆಂದು ವಿಶ್ವೇಶ್ವರಯ್ಯನವರು ಬಲವಾಗಿ ನಂಬಿದ್ದರು. ಶ್ರಮದಾನ ಮಾಡಲಾಗದ, ಸಾಮೂಹಿಕ ಕಾರ್ಯಗಳಲ್ಲಿ ಕಾರಣಾಂತರಗಳಿಂದ ಭಾಗವಹಿಸಲು ಸಾಧ್ಯವಾಗದ ವ್ಯಕ್ತಿ ಅಥವಾ ಕುಟುಂಬ ತದನುಗುಣವಾಗಿ ಪರಿಹಾರಕೊಡಬೇಕೆಂದರು. ಬಡವ ಭಾಗ್ಯವಂತ ಭೇದವಿಲ್ಲದೆ ಎಲ್ಲರೂ ಒಟ್ಟಾಗಿ ಕಾರ್ಯನಿರತರಾಗಬೇಕು-ಇದು ಅವರ ಉದ್ದೇಶ. ತಮ್ಮ ಆಡಳಿತದ 2 ವರ್ಷಗಳ ಅವಧಿಯಲ್ಲಿ 13,360 ಗ್ರಾಮಗಳ ಪೈಕಿ 7,745 ಗ್ರಾಮಗಳಲ್ಲಿ ಇಂತಹ ಗ್ರಾಮಾಭಿವೃದ್ಧಿಯ ಸಮಿತಿಗಳನ್ನು ರಚಿಸಿ ಅವು ಕ್ರಿಯಾಶೀಲವಾಗಲು ಪ್ರಯತ್ನಿಸಿದರು. ತಮ್ಮ ಆದರ್ಶಗಳನ್ನು ಸಾಕಾರಗೊಳಿಸಲು ಅವರು ವಿದೇಶಿ ವಿಜ್ಞಾನಿಗಳ ಮಾರ್ಗದರ್ಶನ ಪಡೆಯಲೂ ಹಿಂದೆ ಮುಂದೆ ನೋಡಲಿಲ್ಲ. ಕೃಷಿಯಲ್ಲಿ ಆಧುನಿಕ ವಿಧಾನಗಳನ್ನು ಅನುಸರಿಸಲು ಅಗತ್ಯ ಸಲಹೆ ನೀಡಲು ಕೃಷಿ ವಿಜ್ಞಾನಿಯಾದ ಲೆಸ್ಲಿ ಕೋಲ್‌ಮನ್‌ರ ಸೇವೆಯನ್ನು ಪಡೆದರು. ವಿಶ್ವೇಶ್ವರಯ್ಯನವರು ಕೃಷಿಯ ಉಪಾಂಗಗಳ ಅಭಿವೃದ್ಧಿಗೆ ಅತಿ ಹೆಚ್ಚಿನ ಆದ್ಯತೆ ನೀಡುತ್ತಿದ್ದರು. ಇಟಲಿಯಿಂದ ವಾಷಿಂಗ್‌ಟನ್ ಮಾರಿ ಎಂಬ ತಜ್ಞರನ್ನು ಬರಮಾಡಿಕೊಂಡು ಚೆನ್ನಪಟ್ಟಣದಲ್ಲಿ ರೇಷ್ಮೆ ಫಾರಂ ಸ್ಥಾಪಿಸಿದರು. ಹೈನುಗಾರಿಕೆ, ಕುರಿ, ಕೋಳಿ ಸಾಕಾಣಿಕೆ ಮುಂತಾದವುಗಳನ್ನು ವೈಜ್ಞಾನಿಕವಾಗಿ ಅಭಿವೃದ್ಧಿಪಡಿಸಲು ಡೇವಿಸನ್ ನೆರವು ಪಡೆಯಲಾಯಿತು. ಬೆಂಗಳೂರಿನ ಹವಾಗುಣ, ಹಣ್ಣು ಹಂಪಲು ತರಕಾರಿ ಫಲಪುಷ್ಪ ಬೆಳೆಗೆ ಉತ್ತಮವಾಗಿರುವುದರಿಂದ ಶಾಸ್ತ್ರೀಯವಾಗಿ ಇವುಗಳನ್ನು ಅಭಿವೃದ್ಧಿಪಡಿಸಲು ತಜ್ಞ ಕ್ರಂಬಿಗಲ್ ಅವರನ್ನು ಆಹ್ವಾನಿಸಿ ಅಧಿಕಾರಿಯಾಗಿ ನೇಮಿಸಿಕೊಳ್ಳಲಾಯಿತು. ಹೀಗೆ ವಿಶ್ವೇಶ್ವರಯ್ಯನವರು ಗ್ರಾಮಾಭಿವೃದ್ಧಿಗೆ ಆಧುನಿಕ ವಿಜ್ಞಾನ ತಂತ್ರಜ್ಞಾನಗಳನ್ನು ಬಳಸಿಕೊಳ್ಳಲು ಹಿಂದೆ ಮುಂದೆ ನೋಡಲಿಲ್ಲ.

### ಆಹಾರ ಸ್ವಾವಲಂಬನೆ

ಜೀವನಾಧಾರಕ್ಕೆ ಅಗತ್ಯವಾದ ಅನ್ನ, ಕೈಗಾರಿಕೆಗೆ ಬೇಕಾಗುವ ಕಚ್ಚಾಮಾಲು, ರಫ್ತು ಮಾಡಲು ಸರಕು ವ್ಯವಸಾಯದಿಂದ ದೊರಕುತ್ತದೆ. ಪರಿಪೂರ್ಣ ರಾಷ್ಟ್ರ ಬೇಸಾಯವಿಲ್ಲದೆ ಬಾಳದು. ಅದಿಲ್ಲದಿದ್ದರೆ ಬದುಕಿಗೆ ಅವು ಪರದೇಶಗಳನ್ನು ಅವಲಂಬಿಸಿರಬೇಕಾಗುತ್ತದೆ.

ಆದ ಕಾರಣ ಪ್ರತಿಯೊಂದು ರಾಷ್ಟ್ರವು ಆಹಾರದಲ್ಲಿ ಸ್ವಾವಲಂಬಿಯಾಗಬೇಕಾದುದು ಅತಿಮುಖ್ಯ. ಆದರೆ ಆಧುನಿಕ ಕಾಲದಲ್ಲಿ ದೇಶ ಬೇಸಾಯದಿಂದಲೇ ಸಿರಿವಂತವಾಗದು. ನಾಗರೀಕತೆ ಬೆಳೆದಂತೆಲ್ಲಾ ಮಾನವನ ನಿತ್ಯಜೀವನದ ಅಗತ್ಯಗಳು ಅಧಿಕವಾಗುತ್ತವೆ. ಭೋಗವಸ್ತುಗಳೆನ್ನಿಸುವವು ಶೀಘ್ರವಾಗಿ ನಿತ್ಯಾವಶ್ಯಕ ವಸ್ತುಗಳಾಗುತ್ತವೆ.

### ಯೋಜನೆಯ ಅಗತ್ಯ

ಅವಶ್ಯಕತೆಗಳು ಹೆಚ್ಚಿದಂತೆ ಕೈಗಾರಿಕೆ ಮತ್ತು ಯಂತ್ರೋತ್ಪಾದನೆಯ ಉದ್ಯಮಗಳಿಗೆ ಹೆಚ್ಚು ಪ್ರಾಮುಖ್ಯತೆ ದೊರೆಯುತ್ತದೆ. ಆಧುನಿಕ ನಾಗರೀಕತೆ ಕೈಗಾರಿಕೋದ್ಯಮಗಳನ್ನು ಅವಲಂಬಿಸಿರುತ್ತದೆ. ನಾಗಾಲೋಟದಿಂದ ಮುಂದುವರಿಯುತ್ತಿರುವ ರಾಷ್ಟ್ರಗಳೊಡನೆ ಪೈಪೋಟಿ ಮಾಡಲು ನಮ್ಮ ದೇಶವು ಕೈಗಾರಿಕೋದ್ಯಮಗಳಲ್ಲಿ ಹೆಚ್ಚು ಹೆಚ್ಚಾಗಿ ತೊಡಗಬೇಕು. ಬಹು ಸಂಖ್ಯಾತರು ಬೇಸಾಯವನ್ನು ನಂಬಿಕೊಂಡು ಬಾಳುವುದು ನಾಗರೀಕತೆಯ ಲಕ್ಷಣವಲ್ಲ. ಭಾರತವು ನಾಗರೀಕತೆಯ ಈ ಲಕ್ಷಣವನ್ನು ಇನ್ನೂ ಮನವರಿಕೆ ಮಾಡಿಕೊಂಡಿಲ್ಲ. ಇದು ವಿಶ್ವೇಶ್ವರಯ್ಯನವರ ಖಚಿತ ಅಭಿಪ್ರಾಯ. ಅದಕ್ಕಾಗಿ ಅವರು ನೀಡಿದ ಘೋಷಣೆ "ಕೈಗಾರಿಕೀಕರಣ ಹೊಂದಿ ಇಲ್ಲವೆ ನಾಶ ಹೊಂದಿ". ಬ್ರಿಟೀಷರು ತಮ್ಮ ಸಿದ್ಧ ವಸ್ತುಗಳನ್ನು ತಂದು ನಮ್ಮ ದೇಶದಲ್ಲಿ ಮಾರುವುದರಿಂದ ನಮ್ಮ ದೇಶದಲ್ಲಿ ಉದ್ಯಮ ಬೆಳೆಯುವುದಿಲ್ಲ. ಅವರ ಪ್ರಕಾರ ವಿದೇಶಗಳಿಂದ ಸಿದ್ಧ ಸಾಮಗ್ರಿ ಆಮದು ಮಾಡಿಕೊಳ್ಳುವುದರಿಂದ 2 ಬಗೆಯ ಹಾನಿ ಸಂಭವಿಸುತ್ತದೆ. ನಮ್ಮ ಹಣ ಹೊರಕ್ಕೆ ಹರಿದು ಹೋಗುವುದು. ಇಲ್ಲಿಯ ಕೈಗಾರಿಕಾ ಬೆಳವಣಿಗೆಯಿಂದ ಆಗುತ್ತಿದ್ದ ಗಳಿಕೆ ಅನುಭವ ಕಳೆದುಕೊಳ್ಳುವುದು, ಶ್ರಮಜೀವಿಗೆ ದೊರೆಯುತ್ತಿದ್ದ ಅನ್ನಕ್ಕೆ ಸಂಚಕಾರ. ದೇಶರಕ್ಷಣೆ ಮಾಡಿಕೊಳ್ಳುವ ಸಾಮರ್ಥ್ಯಕ್ಕೆ ಕುಂದುಂಟು ಮಾಡುತ್ತದೆ. ರಾಷ್ಟ್ರೀಯ ವರಮಾನ ದ್ವಿಗುಣಗೊಳಿಸಿಕೊಳ್ಳಲು ರಾಜ್ಯಗಳಿಗೆ ಪಂಚವಾರ್ಷಿಕ ಯೋಜನೆ ಮತ್ತು ದೇಶಕ್ಕೆ ದಶವಾರ್ಷಿಕ ಯೋಜನೆ ಅಗತ್ಯ ಇದು ಅವರ ಸಲಹೆ. ಪ್ರತಿಯೊಂದು ಪ್ರಾಂತ ಅಥವಾ ರಾಜ್ಯಕ್ಕೆ ಕನಿಷ್ಠ ಒಂದಾದರೂ ಮೂಲ ಕೈಗಾರಿಕೆ, ಪ್ರತಿ ಜಿಲ್ಲೆಗೂ ಎರಡಾದರೂ ದೊಡ್ಡ ಕೈಗಾರಿಕೆ, ಪ್ರತಿ ತಾಲೂಕಿಗೂ ಒಂದು ಕೈಗಾರಿಕಾ ಘಟಕ ಆಗಬೇಕು. ಒಂದೇ ಪ್ರದೇಶದಲ್ಲಿ ಕೈಗಾರಿಕೆಗಳ ಕೇಂದ್ರೀಕರಣ ಆಗಬಾರದು. ಯಾವ ರಾಜ್ಯದಲ್ಲಿ ಯಾವ ಕೈಗಾರಿಕೆ ಸ್ಥಾಪಿಸುವುದರಿಂದ ಆ ರಾಜ್ಯಕ್ಕೆ ಮಾತ್ರವಲ್ಲದೆ ಇಡೀ ದೇಶಕ್ಕೆ ಅನುಕೂಲವಾದೀತು ಎಂಬ ಈ ದೃಷ್ಟಿಯಿಂದ ಪೂರ್ವ ಪರಿಶೀಲನೆ ನಡೆಯಬೇಕು. ಅಲ್ಲಿ ದೊರೆಯುವ ಖನಿಜ, ಭೂಜಲ, ಹವಾಗುಣ, ವಿದ್ಯುತ್ ಸೌಲಭ್ಯ, ವ್ಯವಸಾಯೋತ್ಪನ್ನ, ಸಂಚಾರ ಸೌಲಭ್ಯ ಇವೆಲ್ಲಾ ಗಮನಿಸಿ ಕೈಗಾರಿಕೆಗಳು ಸ್ಥಾಪಿತವಾಗಬೇಕು. ದೇಶದ ದಶವಾರ್ಷಿಕ ಯೋಜನೆಗಳಲ್ಲಿ ಉಕ್ಕು, ವಿದ್ಯುತ್ ಸಲಕರಣೆ, ಮೋಟಾರು ವಾಹನ, ಹಡಗು ನಿರ್ಮಾಣ, ರಾಸಾಯನಿಕ ವಸ್ತು ಉತ್ಪಾದನೆ ಬಟ್ಟೆ ತಯಾರಿಕೆ ಇವುಗಳಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡಬೇಕೆಂದು ಅವರ ಸಲಹೆ. ರಷ್ಯಾ ಈ ರೀತಿಯ ಪಂಚವಾರ್ಷಿಕ ಯೋಜನೆಗಳನ್ನು ಅನುಸರಿಸಿ ಆರ್ಥಿಕ ಪ್ರಗತಿ ಸಾಧಿಸಲು ಪ್ರಯತ್ನಿಸುತ್ತಿದ್ದುದರಿಂದ ವಿಶ್ವೇಶ್ವರಯ್ಯನವರು ಕಮ್ಯುನಿಷ್ಟರ ಮಾರ್ಗ ಅನುಸರಿಸಲು ಸೂಚಿಸುತ್ತಿರುವರೆಂಬ ಆಪಾದನೆಗೆ ಗುರಿಯಾಗಿದ್ದರು. ಆದರೆ ಅವರು ಕಮ್ಯುನಿಷ್ಟರ ವರ್ಗ ಸಿದ್ಧಾಂತವನ್ನು ಒಪ್ಪಿರಲಿಲ್ಲ. ಅವರು ದೇಶದಲ್ಲಿ ಕೈಗಾರಿಕೀಕರಣವನ್ನು ಬಂಡವಾಳಶಾಹಿ ಪಥದಲ್ಲಿ ಮಾಡಲು ಪ್ರಯತ್ನಿಸುತ್ತಿದ್ದರು. ಸಾರ್ವಜನಿಕ ವಲಯದಲ್ಲಿ ಸರ್ಕಾರದ ಬಂಡವಾಳ ಭಿಸಿ, ಅವು ಲಾಭದಾಯಕವಾಗಿ ನಡೆಯುವಂತೆ ಮಾಡಿ ಅವುಗಳನ್ನು ಖಾಸಗೀ ವಲಯಕ್ಕೆ ಬಿಟ್ಟುಕೊಡಬೇಕೆಂದು ಪ್ರತಿಪಾದಿಸಿದರು. ಉಳುವವನಿಗೆ ಭೂಮಿಯ ಒಡೆತನವನ್ನು ವಿಶ್ವೇಶ್ವರಯ್ಯನವರು ಪ್ರತಿಪಾದಿಸಲಿಲ್ಲ. ದೇಶದ ಅಭಿವೃದ್ಧಿಯನ್ನು ಅವರು ದುಡಿಯುವ ವರ್ಗ ದೃಷ್ಟಿಕೋನದಿಂದ ನೋಡದೆ ಬಂಡವಾಳಶಾಹಿ ದೃಷ್ಟಿಕೋನದಿಂದ ನೋಡಿದರು.

### ಕೈಗಾರೀಕರಣ

ಆದರೂ ವಿಶ್ವೇಶ್ವರಯ್ಯನವರು ಗಾಂಧೀಜಿಯವರಷ್ಟೇ ಸ್ವದೇಶಿ ಪ್ರೇಮಿಯಾಗಿದ್ದರು. ಆದರೆ ಅವರು ಗಾಂಧೀಜಿಯವರಂತೆ ಅಭಾವ ವೈರಾಗ್ಯ ತಾಳಲಿಲ್ಲ. 'ತುಂಡು ಮುಂಡಿನ' ಫಕೀರಾದರ್ಶವನ್ನು ನಿರಾಕರಿಸಿದರು. ರಾಟೆಯ ಚಕ್ರ ಗಾಂಧಿಯವರ ಆದರ್ಶವಾದದ ಸಂಕೇತವಾದರೆ, ಮೋಟಾರು ಗಾಲಿಯ ಚಕ್ರ ವಿಶ್ವೇಶ್ವರಯ್ಯನವರ ಆದರ್ಶದ ಸಂಕೇತ. ಔದ್ಯೋಗೀಕರಣದಿಂದಾಗುವ ಅನಾಹುತಗಳಿಗೆ ಗಾಂಧೀಜಿ ಅಂಜುತ್ತಿದ್ದರು. ಯಂತ್ರದ ಅತಿಬಳಕೆ, ಔದ್ಯೋಗೀಕರಣ ಇವುಗಳ ಕಟ್ಟಾ ವಿರೋಧಿ ಗಾಂಧಿ. ಅದಕ್ಕಾಗಿಯೇ ಗಾಂಧೀಜಿಯವರು "ಕೈಗಾರಿಕೀಕರಣ ಹೊಂದಿ ಮತ್ತು ನಾಶವಾಗಿ" ಎಂಬ ಘೋಷಣೆ ನೀಡಿದರು. ಅವರ ಪ್ರಕಾರ ಯಂತ್ರೋದ್ಯಮ, ಯಂತ್ರಸಮೂಹ ಕೇಂದ್ರೀಕರಣಕ್ಕೆ ಎಡೆಕೊಡುತ್ತದೆ. ಯಂತ್ರೋದ್ಯಮವು ಅದರ ಮಾಲಿಕನಿಗೆ ಸಾವಿರಾರು ಜನರ ಶಕ್ತಿ ಶೋಷಿಸಲು ನೆರವಾಗುತ್ತದೆ. ಅದರ ಮಾಲೀಕತ್ವ ಕೆಲವೇ ವ್ಯಕ್ತಿಗಳು ಬಹುಜನರನ್ನು ಶೋಷಿಸಲು ಅವಕಾಶ ನೀಡುತ್ತದೆ. ಯಂತ್ರ ಮಾನವನ ಸೇವಕನಾಗುವುದಕ್ಕೆ ಬದಲಾಗಿ ಮಾನವನೇ ಯಂತ್ರದ ಗುಲಾಮನಾಗುವನೆಂಬ ಆತಂಕ ಗಾಂಧೀಜಿಯವರಿಗೆ. ಗಾಂಧೀಜಿಗೆ ಗ್ರಾಮಕೈಗಾರಿಕೆಗಳಲ್ಲಿ ಮಾತ್ರ ವಿಶ್ವಾಸ. ನಿಶಸ್ತ್ರವಾಗಿ ಅಹಿಂಸಾತ್ಮಕ ಕ್ರಮದಿಂದ ದೇಶರಕ್ಷಣೆ, ಶಾಂತಿಪಾಲನೆ ಸಾಧ್ಯ ಎಂಬ ಮಹಾತ್ಮರ ವಾದದಲ್ಲಿ ವಿಶ್ವೇಶ್ವರಯ್ಯನವರಿಗೆ ವಿಶ್ವಾಸವಿರಲಿಲ್ಲ. ಸಕಲ ವಿಧದ ಶಸ್ತ್ರಗಳಿಂದ ಸಜ್ಜಿತವಾಗಿ ಸೇನೆ ದೇಶ ಸದಾಸಿದ್ಧವಾಗಿರಬೇಕು. ದೀರ್ಘಾವಧಿಯ ನಿರಶನ ಕೈಗೊಂಡು ಗಾಂಧೀಜಿ ತಮ್ಮ ದೇಹಾರೋಗ್ಯ ಕೆಡಿಸಿಕೊಳ್ಳುವುದನ್ನು ವಿಶ್ವೇಶ್ವರಯ್ಯನವರು ಒಪ್ಪುತ್ತಿರಲಿಲ್ಲ. "ತಾವು ದೇಶದ ಆಸ್ತಿ. ದೇಶದ ಹಿತದೃಷ್ಟಿಯಿಂದ ಈ ರೀತಿ ದೇಹಾರೋಗ್ಯ ಕೆಡಿಸಿಕೊಳ್ಳುವುದು ವಿಹಿತವಲ್ಲ" ಎಂದು ವಿಶ್ವೇಶ್ವರಯ್ಯನವರ ಸಲಹೆ. ಹೀಗೆ ಗಾಂಧೀಜಿ ಮತ್ತು ವಿಶ್ವೇಶ್ವರಯ್ಯನವರಲ್ಲಿ ದೇಶದ ಅಭಿವೃದ್ಧಿಯ ಬಗ್ಗೆ ಪರಸ್ಪರ ವಿರುದ್ಧವಾದ ಅಭಿಪ್ರಾಯಗಳಿದ್ದವು. ಅವುಗಳನ್ನು ಅವರು ಸಮರ್ಥವಾಗಿ ಪ್ರತಿಪಾದಿಸುತ್ತಿದ್ದರು. ಗಾಂಧೀಜಿಯ ಜೀವಿತಕಾಲದಲ್ಲಿಯೇ ಅವರನ್ನು ತಾತ್ವಿಕವಾಗಿ ವಿರೋಧಿಸಿದವರು ವಿಶ್ವೇಶ್ವರಯ್ಯನವರು. ಗಾಂಧೀಜಿಯವರ ಅದೇ ಹಳಸಲು ವಾದಗಳನ್ನು ಇಂದಿನ ಪರಿಸರದ ಎಲ್ಲಾ ಸಮಸ್ಯೆಗಳಿಗೂ ಸಂಜೀವಿನಿಯೆಂದು ಪ್ರತಿಪಾದಿಸುವ ನಮ್ಮ ಅಭಿವೃದ್ಧಿಯ ಎಲ್ಲಾ ಯೋಜನೆಗಳನ್ನು ಒಂದಲ್ಲ ಒಂದು ನೆಪ ಮಾಡಿ ವಿರೋಧಿಸುವ ನಮ್ಮ ಇಂದಿನ ಪರಿಸರವಾದಿಗಳು ವಿಶ್ವೇಶ್ವರಯ್ಯ ಮತ್ತು ಗಾಂಧೀಜಿಯವರ ಈ ವಿವಾದಗಳ ಬೆಳಕಿನಲ್ಲಿ ನೋಡುವುದು ಅಗತ್ಯವಾಗಿದೆ.

---

# ಬರ ಪರಿಹಾರ ಒದಗಿಸಲು..........

ಪುಟ ಒಂದರಿಂದ

ಗುಜ್ರಾಲ್ ಸರ್ಕಾರ ಪೆಟ್ರೋಲ್, ಡೀಸೆಲ್, ಅಡಿಗೆ ಅನಿಲ, ರಾಸಾಯನಿಕ ಗೊಬ್ಬರ, ಪಡಿತರ ಅಂಗಡಿಗಳಲ್ಲಿ ಮಾರಾಟ ಮಾಡುವ ಸಕ್ಕರೆ, ಅಕ್ಕಿ, ಗೋಧಿ ಪದಾರ್ಥಗಳ ಮೇಲಿನ ಸಬ್ಸಿಡಿಯನ್ನು ರದ್ದು ಮಾಡಬೇಕೆಂದು ಒತ್ತಾಯ ಪಡಿಸುತ್ತಿದ್ದು, ಗುಜ್ರಾಲ್ ಸರಕಾರ ಈ ಒತ್ತಡಕ್ಕೆ ಮಣಿದದ್ದಾದರೆ ಇವುಗಳ ಬೆಲೆ ಕೈಗೆಟುಕದಷ್ಟು ಹೆಚ್ಚಾಗಿ ಜನರನ್ನು ಕಂಗಾಲ ಪರಿಸ್ಥಿತಿಗಟ್ಟುವುದರಲ್ಲಿ ಸಂಶಯವಿಲ್ಲ. ಅದೇ ಸಮಯದಲ್ಲಿ ಹಸಿರು ಕಾರ್ಡುದಾರರಿಗೆ ಕಡಿಮೆ ಬೆಲೆಯಲ್ಲಿ ಹೆಚ್ಚು ಆಹಾರಧಾನ್ಯ ಒದಗಿಸಬೇಕೆಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಸಂಯುಕ್ತ ಸರಕಾರದ ಒತ್ತಾಯ ತರುತ್ತಿದ್ದು ಈಗ ಕೇಂದ್ರ ಸರಕಾರ ಬಡತನ ರೇಖೆಗಿಂತ ಕೆಳಗಿರುವ ಹಸಿರು ಕಾರ್ಡುದಾರರಿಗೆ ಕಡಿಮೆ ದರದಲ್ಲಿ 10 ಕೆ.ಜಿ. 'ರೇಶನ್ ಅಕ್ಕಿಕೊಡುವ ನಿರ್ಧಾರದ ಹಿನ್ನೆಲೆಯಲ್ಲಿ ಆಹಾರ ಧಾನ್ಯದ ಉತ್ಪಾದನೆಯಲ್ಲಿ ಉಂಟಾಗಬಹುದಾದ ಕಡಿತ ಇದರ ಮೇಲೆ ಕೂಡ ಕೆಟ್ಟ ಪರಿಣಾಮ ಬೀರುತ್ತದೆ. ಇಂಥ ಪರಿಸ್ಥಿತಿಯಲ್ಲಿ ಸರಕಾರ ಆಹಾರ ಧಾನ್ಯ ಸಂಗ್ರಹ ಮಾಡಲಿಕ್ಕೆ ಸಾಧ್ಯವಾಗದೇ, ರೇಶನ್ ಅಂಗಡಿಗಳಲ್ಲಿ ಪಡಿತರ ಮೂಲಕ ಕಡಿಮೆ ದರದಿಂದ ಆಹಾರ ಧಾನ್ಯ ಒದಗಿಸುವುದರಲ್ಲಿ ವಿಫಲವಾದರೆ, ಮುಕ್ತ ಮಾರುಕಟ್ಟೆಯಲ್ಲಿ ಬೆಲೆ ಹೆಚ್ಚಾಗಿ ಸಾರ್ವಜನಿಕರು ಹೆಚ್ಚಿನ ಹೊರೆ ಹೊರಬೇಕಾದಂಥ ಪರಿಸ್ಥಿತಿ ಉಂಟಾಗುತ್ತದೆ.

ನಮ್ಮ ರಾಜ್ಯದಲ್ಲಿ ಮುಂಗಾರು ಮಳೆ ಸಂಪೂರ್ಣ ವಿಫಲವಾಗಿದೆ. ಕರಾವಳಿ ಪ್ರದೇಶಗಳಲ್ಲಿ ಹೆಚ್ಚು ಮಳೆ ಬಿದ್ದಿದ್ದರೂ ಸರಕಾರದ ಪ್ರಕಾರ 69 ತಾಲ್ಲೂಕುಗಳಲ್ಲಿ ಜನರು ಮಳೆಯ ಅಭಾವದಿಂದಾಗಿ ಕುಡಿಯಲಿಕ್ಕೆ ನೀರೂ ಸಿಗದೆ ಕಂಗಾಲಾಗಿದ್ದಾರೆ. ಜೂನ್ ಮೊದಲ ವಾರದಲ್ಲಿ ಸ್ವಲ್ಪ ಮಳೆಯನ್ನು ಆಶ್ರಯಿಸಿ ಕೆಲವು ಕಡೆ ಬಿತ್ತನೆಯಾಗಿದೆ. ಮೂರು ನಾಲ್ಕಕ್ಕಿಂತಲೂ ಹೆಚ್ಚಿನ ಪ್ರದೇಶದಲ್ಲಿ ಬಿತ್ತನೆ ಆಗದೆ ಹೊಲಗಳಲ್ಲಿ ರಣ ರಣ ಕಾಯುತ್ತಿದೆ. ಬಿತ್ತಿದ ಪ್ರದೇಶದಲ್ಲಿ ಮೇಲೆದ್ದ ಮೊಳಕೆಗಳೆಲ್ಲ ನೀರಿಲ್ಲದೆ ಸುಟ್ಟು ಹೋಗಿವೆ. ಹಿಂಗಾರು ಬೆಳೆ ಕೂಡ ಆಶಾದಾಯಕವಾಗಿಲ್ಲ. ಹಿಂಗಾರಿಗೆ ಅವಶ್ಯ ಬೇಕಾದ ಉತ್ತರಿ ಮಳೆ ಕೈಕೊಟ್ಟಿದೆ. ಹಸ್ತ, ಚಿತ್ತಿ ಮಳೆಗಳೂ ದೂರ ಸರಿದಿವೆ. ಹೀಗಾಗಿ ಈ ವರ್ಷ ಕುಡಿಯುವ ನೀರು, ದನಕರುಗಳಿಗೆ ಮೇವು, ಜನರಿಗೆ ಆಹಾರ ಧಾನ್ಯ ಕೊರತೆಯುಂಟಾಗಿ ಗಂಭೀರ ಪರಿಸ್ಥಿತಿಯನ್ನೆದುರಿಸಬೇಕಾದ ಪರಿಸ್ಥಿತಿ ಉಂಟಾಗುವುದರಲ್ಲಿ ಸಂಶಯವಿಲ್ಲ. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ಮತ್ತು ರೈತ ಸಂಘದವರು ಇದರತ್ತ ಈಗಾಗಲೇ ರಾಜ್ಯ ಸರಕಾರದ ಗಮನ ಸೆಳೆದಿದ್ದಾರೆ. ಬಿಜಾಪುರದಲ್ಲಿ ಮುಖ್ಯಮಂತ್ರಿ ಜೆ.ಹೆಚ್.ಪಟೇಲರಿಗೆ ಭೇಟಿಯಾಗಿ ಸುದೀರ್ಘ ಮನವಿ ಅರ್ಪಿಸಿದ್ದಾರೆ.

### ಈಗಿನಿಂದಲೇ ಕಾರ್ಯಪ್ರವೃತ್ತರಾಗಬೇಕು

ಅಷ್ಟೇ ಸಾಲದು. ಸರಕಾರ ಕೋಟ್ಯಾವಧಿ ರೂಪಾಯಿ ವ್ಯಯ ಮಾಡಿ ರಾಜ್ಯಾದ್ಯಂತ ಪಕ್ಷದ ಸಂಘಟನೆ ಬಲಪಡಿಸಲು ದಂಡಯಾತ್ರೆ ನಡೆಸಿದೆ. ಮಳೆಯ ಅಭಾದಿಂದಾಗಿ ಮುಂದೆ ಉಂಟಾಗಬಹುದಾದ ಗಂಭೀರ ಪರಿಸ್ಥಿತಿ ಕುರಿತು ಸರಕಾರ ಚಿಂತನೆ ನಡೆಸಲಿಕ್ಕೂ ತಯಾರಿಲ್ಲ. ಆದ್ದರಿಂದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ, ರೈತ-ಕೃಷಿ ಕೂಲಿಕಾರ ಸಂಘಗಳು ಕೂಡಲೇ ಈ ಗಂಭೀರ ಸಮಸ್ಯೆಯತ್ತ ತೀವ್ರ ಗಮನ ಹರಿಸಿ, ಸರಕಾರ ಕಣ್ಣು ತೆರೆದು, ಪರಿಹಾರ ಕಾರ್ಯಗಳನ್ನು ಕೈಗೊಳ್ಳುವಂತೆ ಒತ್ತಾಯ ಮಾಡಲೇಬೇಕು. ನಾವು ಈಗಿನಿಂದಲೇ ಈ ದಿಸೆಯಲ್ಲಿ ಕಾರ್ಯಪ್ರವೃತ್ತರಾಗದಿದ್ದರೆ, ಬಿಜೆಪಿ, ಕಾಂಗ್ರೆಸ್‌ಗಳು ಇತರ ಛಿದ್ರಕಾರಿ ಶಕ್ತಿಗಳು ರಾಜ್ಯದಲ್ಲಿ ಉಂಟಾಗಬಹುದಾದ ಗಂಭೀರ ಸಮಸ್ಯೆಯ ದುರುಪಯೋಗ ಪಡಿಸಿಕೊಳ್ಳುವ ಸಾಧ್ಯತೆಯಿದೆ. ರಾಜ್ಯದ ಜನರನ್ನು ಅಂಥ ಶಕ್ತಿಗಳಿಂದ ರಕ್ಷಿಸಿ, ಎಡ, ಜಾತ್ಯಾತೀತ ಪ್ರಜಾಪ್ರಭುತ್ವ ಶಕ್ತಿಗಳ ಮೂಲಕ ಸಂಕಷ್ಟಕ್ಕೊಳಗಾಗಲಿರುವ ರಾಜ್ಯದ ಜನತೆಗೆ ಪರಿಹಾರ ಒದಗಿಸುವ ಮಹಾ ಕರ್ತವ್ಯದಲ್ಲಿ ತೊಡಗುವಂತೆ ಎಲ್ಲರನ್ನೂ ಹುರಿದುಂಬಿಸೋಣ. ○

## ಜೆಎಂಎಸ್ ಅಧ್ಯಯನ ಶಿಬಿರ

# "ಹತ್ತು ಬೇಡ ಒಂದು ರೂ ಸಾಕು"

ಕಲ್ಬುರ್ಗಿ ನಗರಕ್ಕೆ ಅಂದು ವಿಶೇಷ ಅನುಭವ.ಬೇಡ ಒಂದೇ ರೂಪಾಯಿ ಸಾಕು ಎಂದು ಮನೆಗೆ ಬಂದವರ ಹಠ. ಹತ್ತು ರೂ ಬೇಡ ಎನ್ನುವವರು ಇವರ್‍ಯಾರು ಎಂದು ಕಲ್ಬುರ್ಗಿಯ ಜನರಿಗೆ ಆಶ್ಚರ್ಯ. ಜನವಾದಿ ಮಹಿಳಾ ಸಂಘಟನೆ ಕಲ್ಬುರ್ಗಿಯಲ್ಲಿ ಹಮ್ಮಿಕ್ಕೊಂಡಿದ್ದ ಮೂರು ದಿನಗಳ ವಿಭಾಗೀಯ ಅಧ್ಯಯನ ಶಿಬಿರದ ವಿಶೇಷ ಇದು.

'ಕೇಳಿ ತಿಳಿ ಮಾಡಿ ಕಲಿ' ಎಂಬುದನ್ನು ನೇರವಾಗಿ ಕಾರ್ಯಕ್ಕಿಳಿಸಲು ಜನವಾದಿಯ ಶಿಬಿರಕ್ಕೆ ಬಂದ ಮಹಿಳೆಯರು ಸಜ್ಜಾದರು. ಜನವಾದಿ ಮಹಿಳಾ ಸಂಘಟನೆಗೆ ಸದಸ್ಯರನ್ನು ಮಾಡಿಸುವುದು ಹೇಗೆ ಎಂಬ ಬಗ್ಗೆ ಪಾಠ ಕೇಳಿದವರು ಸದಸ್ಯತ್ವ ಮಾಡಲೂ ಮುಂದಾದರು.

ಶಿಬಿರಕ್ಕೆ ಬಂದ ಮಹಿಳೆಯರನ್ನು ಆರು ತಂಡಗಳಾಗಿಸಿ ಆರು ಪ್ರದೇಶಕ್ಕೆ ಕಳಿಸಲಾಯಿತು. ರಸೀತಿ ಹಿಡಿದು ಹೇಗೋ ಏನ್ನುತ್ತಾ ಮನೆಮನೆಗೆ ಹೋದವರು ಅನುಭವಗಳ ಮೂಟೆಯನ್ನೇ ಹೊತ್ತು ತಂದರು. ಶಿಬಿರದಲ್ಲಿ ತಮ್ಮ ಅನುಭವಗಳನ್ನು ಮಂಡಿಸಿದರು.


ಕಲ್ಬುರ್ಗಿಯ ಸಿಪಿಐ(ಎಂ) ಕಚೇರಿಯ ಮಗ್ಗುಲಿಗೇ ಇರುವ ಪಂಚಶೀಲನಗರ ಕೊಳಗೇರಿಯಲ್ಲಿ 50 ಹೊಸ ಸದಸ್ಯರು. ವೆಂಕಟೇಶ್ವರ ನಗರದಂತಹ ಮೇಲ್ವರ್ಗದ ಜನರ ಪ್ರದೇಶದಲ್ಲಿ ಇದು ಚಂದಾ ಕತೆ ಎಂದು ಬಾಗಿಲು ಮುಚ್ಚಿದವರೇ ಸದಸ್ಯತ್ವ ನೀಡಿ ಚಹಾ ಕೊಟ್ಟು ಕಳಿಸಿದರು. ಶಿಬಿರದಲ್ಲಿ ಅಡುಗೆ ಮಾಡಲು ಹುಮ್ನಾಬಾದ್ ನಿಂದ ಬಂದಿದ್ದಾಕೆ ಅಡುಗೆ ಪಾತ್ರೆ ತೊಳೆದು ಮುಗಿಸಿ ರಸೀದಿ ಹಿಡಿದು ಶಿಬಿರ ನಡೆದ ಜಾಗದ ಅಕ್ಕಪಕ್ಕದ ಮನೆಯವರನ್ನು ಸದಸ್ಯರನ್ನಾಗಿ ಮಾಡಿಸಿಯೇ ಬಿಟ್ಟರು.

ಇವೆಲ್ಲವೂ ಜನವಾದಿ ಮಹಿಳಾ ಸಂಘಟನೆಯ ಬಗ್ಗೆ ಮತ್ತಷ್ಟು ಹೆಮ್ಮೆಯನ್ನು ಸದಸ್ಯರಲ್ಲಿ ಹುಟ್ಟುಹಾಕಿಸಿ, ಒಂದು ದಿನದಲ್ಲಿ ನೂರಕ್ಕೂ ಹೆಚ್ಚು ಸದಸ್ಯರಾದರು.

ಆರು ಜಿಲ್ಲೆಗಳಿಂದ 64 ಜನ ಶಿಬಿರಾರ್ಥಿಗಳು ಭಾಗವಹಿಸಿದ್ದರು. ಈ ಅಧ್ಯಯನ ಶಿಬಿರದ ಉದ್ಘಾಟನೆಯನ್ನು ನಗರದ ಖ್ಯಾತ ವಕೀಲರಾದ ಶ್ರೀ ಸುಭಾಷ್ ಚಂದ್ರ ಭಾಣೆಯವರು ನೆರವೇರಿಸಿದರು. "ಪುರುಷ ಪ್ರಧಾನ ವ್ಯವಸ್ಥೆಯು ಮಹಿಳೆಯರನ್ನು ಅತ್ಯಂತ ವ್ಯವಸ್ಥಿತವಾಗಿ ಮೂಲೆಗೆ ತಳ್ಳುವ ಎಲ್ಲ ಕುತಂತ್ರಗಳನ್ನು ಹೆಣೆದಿದೆ. ಮಹಿಳಾ ಚಳುವಳಿ ಈ ಎಲ್ಲ ಕುತಂತ್ರಗಳ ಕೋಟೆಯನ್ನು ಕೆಡುವುತ್ತಲೇ ಬೆಳಕ ಬೀದಿಗೆ ಬರಬೇಕಿದೆ" ಎಂದು ಹೇಳಿದರು.

AIDWA ಇತಿಹಾಸದ ಕುರಿತು ಕೇಂದ್ರ ಕಾರ್ಯದರ್ಶಿಗಳಾದ ಮೈಥಿಲಿ ಶಿವರಾಮನ್ ಇವರು ಉಪನ್ಯಾಸ ನೀಡಿದರು. ಕರ್ನಾಟಕದ ಮಹಿಳೆಯರ ಸಾಮಾಜಿಕ ಪರಿಸ್ಥಿತಿ ಮತ್ತು ಭೂಸಂಬಂಧಗಳು ಕುರಿತು ಕೃಷಿ-ಕೂಲಿಕಾರ ಸಂಘದ ರಾಜ್ಯ ಅಧ್ಯಕ್ಷರಾದ ಜಿ.ಎನ್. ನಾಗರಾಜ್, ಕುಟುಂಬ, ಖಾಸಗಿ ಆಸ್ತಿಯ ಉಗಮ ಮತ್ತು ವೈಜ್ಞಾನಿಕ ಚಿಂತನೆ ಕುರಿತು ರೈತ ಸಂಘದ ರಾಜ್ಯ ಮುಖಂಡರಾದ ಪಿ.ರಾಮಚಂದ್ರರಾವ್ ಉಪನ್ಯಾಸ ನೀಡಿದರು.

ಘಟಕ ರಚನೆ ಮತ್ತು ನಿರಂತರವಾಗಿ ಘಟಕದ ಸಭೆಸೇರಿಸುವ, ಸಭೆಯಲ್ಲಿ ಚರ್ಚಿಸುವ ವಿಷಯಗಳ ಕುರಿತು ಪ್ರಯೋಗಿಕ ಕಾರ್ಯ ಮಾಡಲಾಯಿತು. ರಾಜ್ಯ ಸಮಿತಿ ಸದಸ್ಯರು ಮತ್ತು ಪದಾಧಿಕಾರಿಗಳು ಪ್ರಯೋಗಿಕ ಕಾರ್ಯಕ್ಕೆ ಸಲಹೆಗಾರರಾಗಿ ಕೆಲಸ ನಿಭಾಯಿಸಿದರು. ಕ್ಷೇತ್ರದಲ್ಲಿ ಕೆಲಸ ಮಾಡುವಾಗ ಎದುರಾಗುವ ಸಮಸ್ಯೆಗಳು-ಸಮಸ್ಯೆಗಳನ್ನು ಗುರುತಿಸುವ- ಬಗೆಹರಿಸುವ ಕುರಿತು ರೈತ ಸಂಘದ ರಾಜ್ಯ ಅಧ್ಯಕ್ಷರಾದ ಮಾರುತಿ ಮಾನ್ಪಡೆಯವರು ಹೇಳಿದರು. ಸಂಘಟನೆ, ಪತ್ರಿಕೋದ್ಯಮ, ಸಮೂಹ ಮಾಧ್ಯಮಗಳ ಕುರಿತು ಮತ್ತು ಕರಪತ್ರ-ಮನವಿ ಪತ್ರಗಳನ್ನು ಬರೆಯುವ ಕುರಿತು ಸಂಪೂರ್ಣ ಮಾಹಿತಿಯನ್ನು ಎಸ್. ಸತ್ಯಾ ನೀಡಿದರು. ಕಾನೂನು ಮತ್ತು ಮಹಿಳೆ ಕುರಿತು ಮಂಜುಳಾ ಪಂಡಿತ್, ಸಂಘಟನೆ-ಸಂವಿಧಾನ ಕಾರ್ಯಕ್ರಮ ಕುರಿತು ನೀಲಾ.ಕೆ. ಉಪನ್ಯಾಸ ನೀಡಿದರು.



## ಆರು ತಿಂಗಳಲ್ಲಿ ಮೊಕದ್ದಮೆ ಇತ್ಯರ್ಥಕ್ಕೆ ಕರೆ

ಬಾಲಕಿಯರ ಮತ್ತು ಮಹಿಳೆಯರ ಮೇಲೆ ಹೆಚ್ಚುತ್ತಿರುವ ದೌರ್ಜನ್ಯ, ಬಹಿಷ್ಕಾರ, ಹತ್ಯೆಯ ಬಗ್ಗೆ ಮೊಕದ್ದಮೆ ದಾಖಲಾದ ಆರು ತಿಂಗಳೊಳಗೆ ಇತ್ಯರ್ಥವಾಗಬೇಕು ಎಂದು ಜನವಾದಿ ಮಹಿಳಾ ಸಂಘಟನೆಯ ರಾಷ್ಟ್ರ ಕಾರ್ಯದರ್ಶಿ ಮೈಥಿಲಿ ಶಿವರಾಮನ್ ಅವರು ಒತ್ತಾಯಿಸಿದರು.

ಜನವಾದಿ ಮಹಿಳಾ ಸಂಘಟನೆ ಕಲುಬುರ್ಗಿಯಲ್ಲಿ ಹಮ್ಮಿಕ್ಕೊಂಡಿದ್ದ ಅಧ್ಯಯನ ಶಿಬಿರದಲ್ಲಿ ಭಾಗವಹಿಸಲು ಆಗಮಿಸಿದ್ದ ಅವರು ನಂತರ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡುತ್ತಿದ್ದರು.

ಕರ್ನಾಟಕದಲ್ಲಿ ವಿಶೇಷವಾಗಿ ಹೈದ್ರಾಬಾದ್ ಕರ್ನಾಟಕದಲ್ಲಿ ಮಹಿಳೆಯರು ದಲಿತರು ಅತ್ಯಂತ ದೌರ್ಜನ್ಯಕ್ಕೆ ಒಳಗಾಗುತ್ತಿರುವುದು ಕಣ್ಣ ಮುಂದಿನ ಸತ್ಯವಾಗಿದೆ. ವರದಿಯಾಗದ ಹಲವಾರು ಘಟನೆಗಳು ಗ್ರಾಮೀಣ ಪ್ರದೇಶಗಳಲ್ಲಿ ಘಟಿಸುತ್ತಿವೆ. ಸಮಾನ ಕೂಲಿಗಾಗಿ ಹೋರಾಟ ಸಂಘಟಿಸುತ್ತಿರುವ ಜೆಎಂಎಸ್ ಮಹಿಳೆಯರ ಮೇಲಿನ ದೌರ್ಜನ್ಯ ಬಲತ್ಕಾರಗಳ ವಿರುದ್ಧವೂ ವ್ಯಾಪಕ ಆಂದೋಲನಕ್ಕೆ ಕರೆ ಕೊಟ್ಟಿದೆ ಎಂದು ಅವರು ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಹೇಳಿದರು.

ಈಚೆಗೆ ಗುಲ್ಬರ್ಗಾ ಜಿಲ್ಲೆಯ ಶಹಾಪೂರದಲ್ಲಾದ ಘಟನೆಯನ್ನು ವಿವರಿಸಿದ ನೀಲಾ. ಕೆ. ಇವರು, ಬಾಲಕಿಯನ್ನು ನಡುರಸ್ತೆಯಲ್ಲಿ ಅಪಮಾನಗೊಳಿಸಿದ ಯುವಕನ ಮೇಲೆ ಕಾನೂನು ರೀತ್ಯ ಕಠಿಣ ಕ್ರಮ ಕೈಕೊಳ್ಳಲೇಬೇಕು, ಹಾಗೂ ಜೊತೆಗೆ ಅಮಾಯಕ ದಲಿತರ ಮನೆಗಳನ್ನು ಹಾಗೂ ಆಸ್ತಿ ಪಾಸ್ತಿಗಳನ್ನು ಹಾನಿ ಮಾಡಿದವರ ಮೇಲೂ ಉಗ್ರಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ಒಬ್ಬ ಮಹಿಳೆಯು ಮೇಲಾದ ಅನ್ಯಾಯವನ್ನು ಕೋಮುದಳ್ಳುರಿಗೆ ಬಳಸಿಕೊಳ್ಳುವ ಪಟ್ಟಭದ್ರ ಹಿತಾಸಕ್ತಿಗಳ ಅಮಾನವೀಯ ಕ್ರೂರ ನೀತಿಯನ್ನು ಜೆಎಂಎಸ್ ಖಂಡಿಸುತ್ತದೆ ಎಂದು ಅವರು ಹೇಳಿದರು. ಚುನಾಯಿತ ಜನತಾದಳ ಪ್ರತಿನಿಧಿಗಳ ಒಡೆದು ಆಳುವ ನೀತಿಯನ್ನು ಟೀಕಿಸಿದರು. ಪ್ರಾಮಾಣಿಕ ಕಳಕಳಿಯಿಲ್ಲದೆ ಪ್ರಕರಣವನ್ನು ರಾಜಕೀಯ ದಾಳವಾಗಿಸಿ ಕೊಳ್ಳುವುದು ಸರಿಯಲ್ಲ ಎಂದು ಅಭಿಪ್ರಾಯ ಪ್ರಕಟಿಸಿದರು.

ಜನಸಂಖ್ಯಾ ನಿಯಂತ್ರಣಕ್ಕಾಗಿ ತರುವ ಕುಟುಂಬ ಕಲ್ಯಾಣ ಯೋಜನೆಗಳು 'ಮಹಿಳೆ' ಮಾತ್ರ ಸಂತಾನ ನಿಯಂತ್ರಿಸಬೇಕೆಂಬ ದೃಷ್ಟಿಯಿಂದ ಅನೇಕ ಸಂತಾನ ನಿಯಂತ್ರಣ ಸಾಧನಗಳನ್ನು ತರುತಿವೆ. ವಿದೇಶಗಳಲ್ಲಿ ನಿಷೇಧಿಸಲ್ಪಟ್ಟ ಅನೇಕ ವಿಧಾನಗಳ ಬಳಕೆಯನ್ನು ಭಾರತದ ಬಡ ಮಹಿಳೆಯರ ಮೇಲೆ ಪ್ರಯೋಗಿಸಲಾಗುತ್ತಿದೆ. ಕ್ವಿನ್‌ಕ್ರೈನ್ ಎಂಬ ಸಂತಾನ ನಿಯಂತ್ರಣ ಸಾಧನ ಮಹಿಳೆಯ ಆರೋಗ್ಯಕ್ಕೆ ಅತ್ಯಂತ ಅಪಾಯಕಾರಿಯಾಗಿದೆ ಎಂದರು.

## ಭಾಸ್ಕರ್ ಕುಂಬ್ಳೆ ಗ್ರಂಥಾಲಯ ಉದ್ಘಾಟನೆ

ಕಳೆದ ಮೇ ತಿಂಗಳಲ್ಲಿ B.J.P., R.S.S. ಗೂಂಡಾಗಳಿಂದ ಕೊಲೆಯಾದ ಕುಂಬಳೆ ಪ್ರದೇಶ DYFI ಕಾರ್ಯದರ್ಶಿ ಕಾಂ. ಭಾಸ್ಕರ್ ಕುಂಬ್ಳೆ ಸ್ಮರಣಾರ್ಥ SFI-DYFI ದ.ಕ. ಜಿಲ್ಲಾ ಸಮಿತಿ ರೂಪಿಸಿಕೊಂಡಿರುವ ಭಾಸ್ಕರ್ ಕುಂಬ್ಳೆ ಸ್ಮಾರಕ ಗ್ರಂಥಾಲಯವನ್ನು ಸೆ.22 ರಂದು ûÄY(Uª) ರಾಜ್ಯ ಸಮಿತಿ ಕಾರ್ಯ ದರ್ಶಿ ಪಿ. ರಾಮಚಂದ್ರ ರಾವ್ ರು ಉದ್ಘಾಟಿಸಿದರು.

ನೂರಾರು ಸಂಖ್ಯೆಯಲ್ಲಿ ಸೇರಿದ್ದ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದ ಪಿ.ರಾಮಚಂದ್ರ ರಾವ್ ರವರು ಭಾಸ್ಕರ್ ರವರ ಕನಸಿನ ಸಮಾಜವನ್ನು ನನಸಾಗಿಸಲು ನಾವೆಲ್ಲ ದುಡಿಯೋಣ, ಜಾತಿ, ಮತ ಧರ್ಮಗಳ ಭೇಧವಿಲ್ಲದೆ ಸರ್ವರಿಗೂ ಅವಕಾಶವಿರುವ, ಹೊಸ ಸಮಾಜವನ್ನು ನಿರ್ಮಿಸೋಣ ಎಂದು ಕರೆ ನೀಡಿದರು.

ಭಾಸ್ಕರ್ ಕುಂಬ್ಳೆಯವರ ತಂದೆ ಕೆ. ಪೂವಪ್ಪ ಪೂಜಾರಿಯವರು ಭಾಸ್ಕರ್ ಕುಂಬ್ಳೆಯವರ ಭಾವಚಿತ್ರ ಅನಾವರಣ ಮಾಡಿದರು. ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಡಾ. ಬಿ.ಎಸ್. ನಂದ ಗ್ರಂಥಾಲಯದ ಮಹತ್ವದ ಬಗ್ಗೆ ತಿಳಿಸಿದರು. ಮಂಜೇಶ್ವರ ಪ್ರದೇಶ ರೈತ ಕಾರ್ಮಿಕರ ಮುಂದಾಳು ಬಿ.ಎಂ. ರಾಮಯ್ಯ ಶೆಟ್ಟಿ, ದ.ಕ. ಮತ್ತು ಕಾಸರಗೋಡು ಪ್ರದೇಶಗಳಲ್ಲಿ ಎಡ ಪ್ರಜಾಪ್ರಭುತ್ವ ಚಳವಳಿಯನ್ನು ಬಲಿಷ್ಟಗೊಳಿಸಲು ಭಾಸ್ಕರ್ ರವರು ನೀಡಿದ ಕೊಡುಗೆಯನ್ನು ಸ್ಮರಿಸುತ್ತಾ ಅದನ್ನು ಮುಂದುವರಿಸಬೇಕೆಂದು ಹೇಳಿದರು.

ಅಧ್ಯಕ್ಷತೆಯನ್ನು DYFI ನ ಜಿಲ್ಲಾ ಸಮಿತಿ ಅಧ್ಯಕ್ಷರಾದ ಕೃಷ್ಣಪ್ಪ ಕೊಂಚಾಡಿ ವಹಿಸಿದ್ದರು. ಕೆ. ಯಾದವ ಶೆಟ್ಟಿ ಸ್ವಾಗತಿಸಿದರು. ಗ್ರಂಥಾಲಯದ ಸಂಚಾಲಕರುಗಳಲ್ಲಿ ಓರ್ವರಾದ ನಾಗೇಶ್ ಕುಮಾರ್.ಕೆ ಪ್ರಸ್ತಾವಿಕ ಭಾಷಣ ಮಾಡಿದರು. KRVP ಜಿಲ್ಲಾ ಕಾರ್ಯದರ್ಶಿ ಹಾಗೂ ಗ್ರಂಥಾಲಯದ ಸಂಚಾಲಕರುಗಳಲ್ಲಿ ಓರ್ವರಾದ ತಾರನಾಡೆ ಕಾರ್ಯಕ್ರಮ ನಿರ್ವಹಿಸಿದರು. ಸುನೀಲ್ ಕುಮಾರ್ ಬಜಾಲ್ ವಂದಿಸಿದರು.

ಗ್ರಂಥಾಲಯಕ್ಕೆ ಭಾಸ್ಕರ್ ಕುಂಬ್ಳೆ ಕುಟುಂಬದವರು 2001/- ರೂ.ಗಳ ಕೊಡುಗೆಯನ್ನು ಈ ಸಮಯದಲ್ಲಿ ಗ್ರಂಥಾಲಯ ಸಮಿತಿಗೆ ನೀಡಿದರು.

## ರೈತ ಸಂಘ ಶಿಬಿರ

ಸೆಪ್ಟೆಂಬರ್ 22-23 ರಂದು ಕರ್ನಾಟಕ ಪ್ರಾಂತ ರೈತ ಸಂಘದ 2 ದಿನಗಳ ಅಧ್ಯಯನ ಶಿಬಿರವು ಕಾಂ. ಹಸನ್ ಖಾನ್ ಸ್ಮಾರಕ ಭವನ ಗುಲ್ಬರ್ಗದಲ್ಲಿ ನಡೆಯಿತು.

ಅಧ್ಯಯನ ಶಿಬಿರದ ಪ್ರಾರಂಭದಲ್ಲಿ ಪ್ರಾಂತ ರೈತ ಸಂಘದ ಜಿಲ್ಲಾ ಕಾರ್ಯದರ್ಶಿಯಾದ ಕಾಂ. ಚನ್ನಪ್ಪ ಆನೆಗುಂದಿ ಇವರು ರೈತ ಸಂಘವು 60 ನೇ ವಾರ್ಷಿಕಾಚರಣೆ ಆಚರಿಸುತ್ತಿರುವ ಸಂದರ್ಭದಲ್ಲಿ ರೈತ ಸಂಘದ ಮಹತ್ವ ಮತ್ತು ಶಿಬಿರದ ಉದ್ದೇಶಗಳನ್ನು ಕುರಿತು ಪ್ರಾಸ್ತಾವಿಕವಾಗಿ ಮಾತನಾಡಿದರು.

ಗುಲ್ಬರ್ಗಾ ಜಿಲ್ಲೆಯ ಚಿಂಚೋಳಿ, ಆಳಂದ, ಜೇವರ್ಗಿ ಚಿತ್ತಾಪೂರ, ಶಹಬಾದ ಮತ್ತು ಯಾದಗಿರಿ ತಾಲೂಕುಗಳಿಂದ 60 ಜನ ಪ್ರತಿನಿಧಿಗಳು ಅಧ್ಯಯನ ಶಿಬಿರದಲ್ಲಿ ಪಾಲ್ಗೊಂಡಿದ್ದರು.

"ಭೂ ಸಂಬಂಧಗಳು" ವಿಷಯದ ಕುರಿತು ಕೃಷಿ ಕೂಲಿಕಾರರ ಸಂಘಟನೆಯ ರಾಜ್ಯ ಮುಖಂಡರಾದ ಕಾಂ. ಜಿ.ಎನ್. ನಾಗರಾಜ್ ಅವರು ಉಪನ್ಯಾಸ ನೀಡಿದರು. ಕಾಂ. ಮಾರುತಿ ಮಾನ್ಪಡೆ ಪ್ರಾಂತ ರೈತ ಸಂಘದ ರಾಜ್ಯ ಅಧ್ಯಕ್ಷರು "ಪಂಚಾಯತ್ ವ್ಯವಸ್ಥೆ-ರೈತ ಸಂಘದ ಮಧ್ಯ ಪ್ರವೇಶ" ಕುರಿತಂತೆ ಉಪನ್ಯಾಸ ನೀಡಿದರು.

2ನೇ ದಿನ "ಹೊಸ ಆರ್ಥಿಕ ನೀತಿ-ರೈತರ ಮೇಲೆ ಪರಿಣಾಮ" ಕುರಿತಂತೆ ಜೆ.ಎಂ.ಎಸ್. ನ ರಾಜ್ಯ ಕಾರ್ಯದರ್ಶಿಯಾದ ಕಾಂ. ನೀಲಾ.ಕೆ ಹಾಗೂ "ರೈತ ಸಂಘಟನೆ ಬೆಳೆದು ಬಂದ ದಾರಿ" ಕುರಿತು ಪ್ರಾಂತ ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿಯಾದ ಕಾಂ. ಜಗನ್ನಾಥ್ ಇವರು ಉಪನ್ಯಾಸ ನೀಡಿದರು.

ಮುಕ್ತಾಯ ಸಮಾರಂಭದಲ್ಲಿ ಗುಲ್ಬರ್ಗಾದಲ್ಲಿ ಸಾಮೂಹಿಕ ಸಂಘಟನೆಗಳು, ರೈತ ಸಂಘ ಬೆಳೆಸುವಲ್ಲಿ ಮುಂಚೂಣಿ ಪಾತ್ರ ವಹಿಸಿದ ಹಿರಿಯ ಮುಖಂಡರಾಗಿದ್ದ ಕಾಂ. ಮಹಮೂದ ಜಲಾಲ ಇವರಿಗೆ ಸನ್ಮಾನ ಮಾಡಲಾಯಿತು. ಸಭೆಯಲ್ಲಿ ಕಾರ್ಮಿಕ ಧುರೀಣ ಕಾಂ. ಹಸ್ನೂಭಾಯಿ ಪಾಲ್ಗೊಂಡಿದ್ದರು.

## ಸಿ.ಪಿ.ಐ (ಎಂ) ಶಾಖಾ ಸಮ್ಮೇಳನಗಳು

ಸಿಂಧನೂರು ತಾಲ್ಲೂಕಿನ ಮಹಬೂಬ ಕಾಲೋನಿಯ ಪಕ್ಷದ ಉತ್ತರ ಶಾಖೆಯ ನಾಲ್ಕನೇ ಸಮ್ಮೇಳನ ಸೆಪ್ಟೆಂಬರ್ 8 ರಂದು ಯಶಸ್ವಿಯಾಗಿ ಜರುಗಿತು.

ಸಮ್ಮೇಳನದ ಉದ್ಘಾಟನೆಯನ್ನು ಸಿ.ಪಿ.ಐ (ಎಂ) ನ ಜಿಲ್ಲಾ ಸಮಿತಿ ಸದಸ್ಯರಾದ ಕಾಂ. ಕರಿಯಪ್ಪ ಅಚ್ಚೊಳ್ಳಿಯವರು ನೆರವೇರಿಸಿದ ಮಾತನಾಡಿ ಕೇಂದ್ರ ಸರ್ಕಾರ ಪೆಟ್ರೋಲ್ ಬೆಲೆ ಏರಿಸಿರುವುದನ್ನು ಖಂಡಿಸಿದರು. ಮುಖ್ಯ ಅತಿಥಿಗಳಾಗಿ ಜಿಲ್ಲಾ ಕಾರ್ಯದರ್ಶಿಯಾದ ಕಾಂ. ಬಿ.ಲಿಂಗಪ್ಪ ಮಾತನಾಡುತ್ತಾ ಪಕ್ಷದ ಸಮ್ಮೇಳನದ ಉದ್ದೇಶ ಮತ್ತು ಮಹತ್ವದ ಬಗ್ಗೆ ತಿಳಿಸಿದರು.

ಕೊನೆಯಲ್ಲಿ ಬಹಿರಂಗ ಸಭೆಯನ್ನು ನಡೆಸಲಾಯ್ತು. ಸಭೆಯನ್ನು ಉದ್ದೇಶಿಸಿ ಕಾಂ. ನರಸಿಂಹಪ್ಪ ಶೇಕ್ಷಾಖಾದ್ರಿ, ಶರಬಣ್ಣ ನಾಗಲಾಪೂರ ಮಾತನಾಡಿದರು. ಮಹಬೂಬ ಕಾಲೋನಿಯ ನಿವಾಸಿಗಳಿಗೆ ಸದರೀ ಭಾಗದಲ್ಲಿ ಹಕ್ಕು ಪತ್ರ ನೀಡಲು ಸಮ್ಮೇಳನವು ನಿರ್ಣಯ ಕೈಗೊಂಡಿತು.

ಪ್ರಾರಂಭದಲ್ಲಿ ಕಾಂ. ಮಹೇಶ ಸ್ವಾಗತಿಸಿದರು. ಅಪ್ಪಣ್ಣ ಕಾಂಬಳೆ ವಂದನಾರ್ಪಣೆ ಮಾಡಿದರು.

**ಶಿರಸಿ:** ಸೆಪ್ಟೆಂಬರ್ 14 ರಂದು ಸಿಪಿಐ(ಎಂ) ಪಕ್ಷದ ಶಿರಸಿ ಶಾಖೆಯ ಸಮ್ಮೇಳನವು ನಡೆಯಿತು. ಇದೇ ಸಂದರ್ಭದಲ್ಲಿ ಸಮ್ಮೇಳನವು ಸ್ಥಳೀಯ ವಾಗಿರುವ ಹಲವಾರು ಸಮಸ್ಯೆಗಳಾದ ನಗರದ ಸ್ವಚ್ಛತೆ. ರಸ್ತೆಗಳ ರೀಪೇರಿ, ಬೀದಿ ದೀಪಗಳ ವ್ಯವಸ್ಥೆ ಸರಿಪಡಿಸುವ ಕಡೆ ಗಮನ ಹರಿಸಿದೆ. ನಗರ ಸಭೆ ಸದಸ್ಯರು ತಮ್ಮ ತಮ್ಮಲ್ಲೆ ಗುಂಪುಗಾರಿಕೆ ನಡೆಸದೆ ನಾಗರೀಕ ಸಮಸ್ಯೆಗಳತ್ತ ಗಮನ ಹರಿಸುವಂತೆ ನಿರ್ಣಯದ ಮುಖಾಂತರ ಒತ್ತಾಯಿಸಿದೆ. ನಗರದ ಆಸ್ಪತ್ರೆಯ ಅವ್ಯವಸ್ಥೆಯನ್ನು ಸರಿಪಡಿಸುವಂತೆ ಸಂಬಂಧಪಟ್ಟ ಅಧಿಕಾರಿಗಳನ್ನು ಒತ್ತಾಯಿಸಿದೆ. ಶಿರಸಿ ಶಾಖೆಯ ಕಾರ್ಯದರ್ಶಿಗಳಾದ ಪಿ.ಜಿ. ಮಶಾಲ್ದಿಯವರು ಪುನರಾಯ್ಕೆಗೊಂಡಿದ್ದಾರೆ. ಸಮ್ಮೇಳನದಲ್ಲಿ ಜಿಲ್ಲಾ ಕಾರ್ಯದರ್ಶಿ ಟಿ.ಎಸ್. ನಾಯ್ಕ ಮತ್ತು ಸಿ.ಆರ್. ಶಾನ ಭಾಗ್ ಉಪಸ್ಥಿತರಿದ್ದರು.

### ಶ್ರೀರಾಮಪುರ: ನೂರಾರು ಜನ ಬಂಧನ

ಶ್ರೀರಾಮಪುರ ಡಿ.ವೈ.ಎಫ್.ಐ. ಸ್ಥಳೀಯ ಸಮಿತಿಯ ನೂರಾರು ಕಾರ್ಯಕರ್ತರು ಸುಜಾತ ಚಿತ್ರಮಂದಿರದ ಬಳಿ 'ರಸ್ತೆ ತಡೆ' ನಡೆಸಿ ಬಂಧನಕ್ಕೊಳಗಾದರು. ಜಿಲ್ಲಾ ಕಾರ್ಯದರ್ಶಿ ಗೋಪಾಲಕೃಷ್ಣ, ಗೋಪಾಲ್, ಎನ್. ಮೂರ್ತಿ ಮುನಿರಾಜ್, ಪಿ.ಮಹೇಂದ್ರನ್, ಸಿ. ನಾರಾಯಣ ಮೊದಲಾದವರು ಬಂಧನಕ್ಕೊಳಗಾದ ಪ್ರಮುಖರು.

**ಬೆಂಗಳೂರಿನಲ್ಲಿ ಕತ್ತೆ ಮೆರವಣಿಗೆ :** ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪೆಟ್ರೋಲ್ ಮತ್ತು ಬಸ್ ದರಗಳನ್ನು ಏರಿಸಿರುವುದನ್ನು ವಿರೋಧಿಸಿ ಡಿ.ವೈ.ಎಫ್.ಐ ನ ನೂರಾರು ಕಾರ್ಯ ಕರ್ತರು ನಗರದ ಮಿನರ್ವ ವೃತ್ತದಲ್ಲಿ 'ರಸ್ತೆ ತಡೆ' 'ಕತ್ತೆ ಮೆರವಣಿಗೆ' ನಡೆಸಿದರು. ರಾಜ್ಯ ಸರ್ಕಾರ ಕೂಡಲೇ ಬಸ್ ದರ ಇಳಿಸಬೇಕೆಂದು ಪ್ರತಿಭಟನಕಾರರನ್ನೇ ಉದ್ದೇಶಿಸಿ ಮಾತನ್ನಾಡಿದ ಜಿಲ್ಲಾಕಾರ್ಯದರ್ಶಿ ಗೋಪಾಲ ಕೃಷ್ಣ, ರವಿಚಂದ್ರನ್ ಮತ್ತು ಲಕ್ಷ್ಮಣ ಕುಮಾರ್ ಒತ್ತಾಯಿಸಿದರು.

### ಪ್ರಯಾಣ ದರ ಏರಿಕೆ: ಕಲ್ಬುರ್ಗಿಯಲ್ಲಿ ಪಿಕೆಟಿಂಗ್

ಬಸ್ ಪ್ರಯಾಣ ದರವನ್ನು ಹೆಚ್ಚಿಸಿರುವುದರ ವಿರುದ್ಧ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಸದಸ್ಯರು ಕಲ್ಬುರ್ಗಿಯ ಕೆಎಸ್‌ಆರ್‌ಟಿಸಿ ಡಿಪೋಗೆ ಲಗ್ಗೆ ಹಾಕಿ ಒಂದು ಗಂಟೆಗೂ ಹೆಚ್ಚು ಕಾಲ ಪಿಕೆಟಿಂಗ್ ನಡೆಸಿದರು.ನೂರಕ್ಕೂ ಹೆಚ್ಚು ಕಾರ್ಯಕರ್ತರನ್ನು ಪೋಲೀಸರು ಬಂಧಿಸಿ ನಂತರ ಬಿಡುಗಡೆ ಮಾಡಿದರು.

ಜನತಾದಳ ಸರ್ಕಾರದ ಬಸ್ ಟಿಕೆಟ್ ದರ ಹೆಚ್ಚಳ ನೀತಿಯನ್ನು ಕೈ ಬಿಡುವಂತೆ ಒತ್ತಾಯಿಸಿ ಡಿಪೋ ಬಾಗಿಲಿಗೆ ಬೀಗ ಜಡಿಯಲಾಯಿತು.

ಪ್ರತಿ ಭಟನೆಯ ನೇತೃತ್ವವನ್ನು ಸಿಪಿಎಂನ ಜಿಲ್ಲಾ ಕಾರ್ಯದರ್ಶಿ ಮಾರುತಿ ಮಾನ್ಪಡೆ, ರಾಜ್ಯ ಸಮಿತಿ ಸದಸ್ಯರಾದ ಪಿ.ಜಗನ್ನಾಥ್, ಚನ್ನಪ್ಪ ಆನೆಗುಂದಿ, ಮೇಘರಾಜ ಕಠಾರೆ, ನೀಲಾ. ಕೆ. ಅಪ್ಪಯ್ಯ, ಹೀರೇ ಮಠ, ಬಾಬೂ ಹಿರಮುಸೆಟ್ಟೆ ವಹಿಸಿದ್ದರು. ರಾಜ್ಯ ಸಮಿತಿ ಸದಸ್ಯ ಪಿ.ಜಗನ್ನಾಥ್ ಅವರು ಮಾತನಾಡಿ ಸರಕಾರಕ್ಕೆ ಎಚ್ಚರಿಕೆ ನೀಡಿದರು.

## ಪೆಟ್ರೋಲ್ ಮತ್ತು ಬಸ್ ದರ ಹೆಚ್ಚಳ ವಿರುದ್ಧ ಎಸ್.ಎಫ್.ಐ ಮತ್ತು ಡಿ.ವೈ.ಎಫ್.ಐ ವ್ಯಾಪಕ ಪ್ರತಿಭಟನೆ.



ಮಂಗಳೂರಿನಲ್ಲಿ ತೀವ್ರ ಪ್ರತಿಭಟನೆ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಖಾಸಗಿ ಬಸ್ ದರವನ್ನು ಕಡಿಮೆ ಮಾಡಬೇಕೆಂದು ಅಗ್ರಹಿಸಿ ಭಾರತ ವಿದ್ಯಾರ್ಥಿ ಫೆಡರೇಷನ್ ಮತ್ತು ಸರ್ವ ಕಾಲೇಜು ವಿದ್ಯಾರ್ಥಿ ಸಂಘ ನೀಡಿದ ಬಂದ್ ಪರಿಣಾಮವಾಗಿ ಮಂಗಳೂರು ಹಾಗೂ ಜಿಲ್ಲೆಯ ಇತರ ಕಡೆಗಳಲ್ಲಿ ಸೆ. 29 ರಂದು ಬಸ್ ಸಂಚಾರ ಸಂಪೂರ್ಣ ಸ್ಥಗಿತ ಗೊಂಡಿತು.

ಕೇಂದ್ರ ಸರ್ಕಾರವು ಪೆಟ್ರೋಲಿಯಂ ಉತ್ಪನ್ನಗಳ ಬೆಲೆಯನ್ನು ಜಾಸ್ತಿ ಮಾಡಿದ ಹಿನ್ನೆಲೆಯಲ್ಲಿ ಖಾಸಗಿ ಬಸ್ಸುಗಳ ಪ್ರಯಾಣ ದರವನ್ನು ಗರಿಷ್ಠ ಶೇ. 20 ರಷ್ಟು ಏರಿಸಿದ್ದನ್ನು ಪ್ರತಿಭಟಿಸಲು ಬಂದ್ ಗೆ ಕರೆ ನೀಡಲಾಗಿತ್ತು. ಇದರಿಂದಾಗಿ ಮಂಗಳೂರು, ಹೊರ ವಲಯ, ಹಾಗೂ ಮಂಗಳೂರು-ಉಡುಪಿ ನಡುವೆ ಬಸ್ ಸಂಚಾರ ಸ್ಥಗಿತ ಗೊಂಡಿತು.

ಕೇಂದ್ರ ಸರ್ಕಾರವು ಪೆಟ್ರೋಲಿಯಂ ಉತ್ಪನ್ನಗಳ ಬೆಲೆಯನ್ನು ಜಾಸ್ತಿ ಮಾಡಿದ ಹಿನ್ನೆಲೆಯಲ್ಲಿ ಖಾಸಗಿ ಬಸ್ಸುಗಳ ಪ್ರಯಾಣ ದರವನ್ನು ಗರಿಷ್ಠ ಏರಿಸಿದ್ದನ್ನು ವಿರೋಧಿಸಿ ಮಂಗಳೂರು, ತೊಕ್ಕೊಟ್, ಸುರತ್ಕಲ್ ಗುರುಪುರ ಮುಂತಾದ ಕಡೆಗಳಲ್ಲಿ ಸಾವಿರಾರು ವಿದ್ಯಾರ್ಥಿಗಳ ಮೆರವಣಿಗೆ ನಡೆಸಿ, ಬಸ್ ದರವನ್ನು ಇಳಿಸುವಂತೆ ಒತ್ತಾಯಿಸಿ ಜಿಲ್ಲಾಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಿ, ಬಸ್ ದರ ಕಡಿಮೆಯಾಗದಿದ್ದರೆ ಜಿಲ್ಲಾದ್ಯಂತ ವಿದ್ಯಾರ್ಥಿಗಳು ಇನ್ನೂ ವ್ಯಾಪಕ ಪ್ರತಿಭಟನೆ ನಡೆಸಲು ಕರೆ ನೀಡಲಾಗಿದೆ ಎಂದು ಜಿಲ್ಲಾ ಆಡಳಿತಕ್ಕೆ ಎಸ್.ಎಫ್.ಐ.ನ ಜಿಲ್ಲಾ ಮುಖಂಡರು ತಿಳಿಸಿದ್ದಾರೆ. ಜಿಲ್ಲೆಯ ಇತರ ತಾಲೂಕು ಕೇಂದ್ರಗಳಾದ ಕುಂದಾಪುರ, ಉಡುಪಿ, ಹಳೆಯಂಗಡಿ, ಬಿಜೈ, ಪುತ್ತೂರು, ಬಂಟ್ವಾಳ, ಸುಳ್ಯ, ಬೆಳ್ತಂಗಡಿ ಮತ್ತಿತರ ಕಡೆಗಳಲ್ಲಿ ಎಸ್.ಎಫ್.ಐ ನೇತೃತ್ವದಲ್ಲಿ ಪ್ರತಿಭಟನೆ ನಡೆಯಿತು.

ಜಿಲ್ಲಾಡಳಿತವು ವಿದ್ಯಾರ್ಥಿಗಳಿಗೆ ಶೇ. 5 ರಷ್ಟು ರಿಯಾಯ್ತಿ ನೀಡುತ್ತೇವೆ ಎಂಬ ಭರವಸೆ ನೀಡಿದ್ದರೂ, ಈ ರಿಯಾಯ್ತಿ ಕೇವಲ ವಿದ್ಯಾರ್ಥಿಗಳಿಗೆ ಮಾತ್ರವಲ್ಲ ಸಾರ್ವಜನಿಕರಿಗೂ ಅನ್ವಯ ಮಾಡಬೇಕೆಂದು ಮನವಿಯಲ್ಲಿ ಒತ್ತಾಯಿಸಲಾಗಿದೆ.

ನಿಯೋಗದಲ್ಲಿ ಎಸ್.ಎಫ್.ಐ.ನ ಹರಿಪ್ರಸಾದ ರೈ, ಸುನೀಲ್ ಕುಮಾರ್, ಹಿದಾಯತುಲ್ಲಾ, ಪ್ರಶಾಂತ್ ಕೊಂಚಾಡಿ, ವಿನಾಯಕ ಮಂಗಳೂರು, ವಿನಯನೇತ್ರ, ಪ್ರಮಿಳಾ ಆಶಾ.ಡಿ. ಮಹಮ್ಮದ್ ಇಕ್ಬಾಲ್ ಮತ್ತು ಅಬ್ದುಲ್ ಅಜೀಜ್ ಮುಂತಾದವರು ಇದ್ದರು.

**ರಾಯಚೂರು:** ಎಸ್.ಎಫ್.ಐ. ನೇತೃತ್ವದಲ್ಲಿ ನೂರಾರು ವಿದ್ಯಾರ್ಥಿಗಳು ಅಂಬೇಡ್ಕರ್ ವೃತ್ತದಲ್ಲಿ 45 ನಿಮಿಷಗಳ ಕಾಲ ರಸ್ತೆ ತಡೆ ನಡೆಸಿದರು. ಜಿಲ್ಲಾ ಕಾರ್ಯದರ್ಶಿ ಯಲ್ಲಪ್ಪ ಮಾತನ್ನಾಡಿ ಪೆಟ್ರೋಲ್ ಮತ್ತು ಬಸ್ ದರ ಏರಿಕೆಯನ್ನು ಖಂಡಿಸಿದರು. ಶರಣ ಬಸವ ಮಾತನ್ನಾಡಿ ಬಸ್ ದರ ಏರಿಕೆಯಿಂದ ಗ್ರಾಮೀಣ ವಿದ್ಯಾರ್ಥಿಗಳಿಗೆ ತೊಂದರೆಯಾಗುವುದಲ್ಲದೆ, ಮುಂದಿನ ಹಂತದಲ್ಲಿ ಬಸ್ ಪಾಸ್ ರದ್ದುಗೊಳಿಸುವ ಹುನ್ನಾರವಾಗಿದೆ ಎಂದರು.



# ಭಾರತೀಯ ವಿಮೋಚನಾ ಸಮರ

ಸುಮಾರು ಎರಡು ಶತಮಾನಗಳ (1757-1947)

ವಸಾಹತುಶಾಹಿ ವಿರೋಧಿ ಸಮರದಲ್ಲಿ ಭಾರತ ಒಂದು ಆಧುನಿಕ ರಾಷ್ಟ್ರವಾಗಿ ಬೆಸೆದುಕೊಂಡ, ಭಾರತೀಯ ಜನಗಳ ಅಪಾರ ತ್ಯಾಗ-ಬಲಿದಾನಗಳ ಒಂದು ಪಕ್ಷಿನೋಟ.

ಒರಿಸ್ಸಾದ **ಸುರೇಂದ್ರ ಸೈನ್** 1840 ರ ಬಂಡಾಯದಲ್ಲಿ ಬಂಧಿಯಾಗಿದ್ದ. 1857 ರಲ್ಲಿ ಬಂಡಾಯಗಾರ ಸಿಪಾಯಿಗಳು ಆತನನ್ನು ಮುಕ್ತಗೊಳಿಸಿದ ಕೂಡಲೇ ಬ್ರಿಟಿಶರ ವಿರುದ್ಧ ಗೆರಿಲ್ಲಾ ಯುದ್ಧ ಆರಂಭಿಸಿದ. ಬಂಡಾಯ ವಿಫಲವಾದ ನಂತರ 1861 ರ ವರೆಗೂ ಬಂಧನದಿಂದ ತಪ್ಪಿಸಿಕೊಳ್ಳುವಲ್ಲಿ ಯಶಸ್ವಿಯಾದ. ಕೊನೆಗೂ ಬ್ರಿಟಿಶರು ಆತನನ್ನು ಬಂಧಿಸಿ ಜೀವಾವಧಿ ಜೈಲಿಗೆ ಹಾಕಿದರು. ಅಲ್ಲೇ ಕುರುಡಾಗಿ 1884 ರಲ್ಲಿ ಅಸು ನೀಗಿದ. ಇದೇ ರೀತಿ ಅಸ್ಸಾಂನಲ್ಲಿ **ಮನಿರಾಂ ದೀವಾನ್** ಹಾಗೂ **ಪಿಯಾಲ ಬರುವಾ** ಎಂಬುವರನ್ನು ನೇಣು ಹಾಕಲಾಯಿತು.



**ಬೇಗಮ್ ಹಜರತ್ ಮಹಲ್** ಅನೇಕ ತಾಲ್ಲೂಕುದಾರರು, ಸೇನಾ ನಾಯಕರು ಹಾಗೂ ಸುತ್ತಲಿನ ರಾಜರುಗಳನ್ನು ಅಣಿನೆರಸಿ ಬಹಳ ಸಮಯದವರೆಗೆ ಬ್ರಿಟಿಷರು ಲಖನೌ ಪ್ರವೇಶಿಸದಂತೆ ತಡೆದಿಟ್ಟ ಅವಧ್‌ನ ಧೀರ ರಾಣಿ. ಕೊನೆಗೂ ಲಖನೌ ತ್ಯಜಿಸಲೇ ಬೇಕಾಗಿ ಬಂದಾಗ ತನ್ನ ನಾರೀ ಸೈನ್ಯದೊಂದಿಗೆ ಖಡ್ಗಧಾರಿಯಾಗಿ ರಣರಂಗದಲ್ಲಿ ಇಳಿದಳು. ಲಖನೌ ಬಿಡಬೇಕಾಗಿ ಬಂದ ಮೇಲೂ ನಾನಾ ಸಾಹೇಬ್ ಮತ್ತಿತರರ ಜತೆ ಸೇರಿ ಯುದ್ಧ ಮುಂದುವರಿಸಿದಳು. ಕೊನೆಗೆ ನೇಪಾಳದಲ್ಲಿ ಹೋಗಿ ನೆಲೆಸಿ ಅಲ್ಲೆ ನಿಧನಳಾದಳು.

ಇವರಲ್ಲದೆ **ಭಕ್ತ್‌ಖಾನ್, ಅಜೀಮುಲ್ಲಾ ಖಾನ್, ಬಹಾದ್ದೂರ್‌ಖಾನ್** ಈ ಬಂಡಾಯದ ಪ್ರಮುಖರಲ್ಲಿ ಹೆಸರಿಸಬೇಕಾದ ಮುಖಂಡರು.

ಬಂಡಾಯ ವಿಫಲವಾದರೂ, ಅದನ್ನು ಅತ್ಯಂತ ರಾಕ್ಷಸೀ ರೀತಿಯಲ್ಲಿ ದಮನ ಮಾಡಿದರೂ ಬ್ರಿಟಿಶರನ್ನು ಅದು ಸಂಪೂರ್ಣವಾಗಿ ಅಲುಗಾಡಿಸಿ ಬಿಟ್ಟಿತು. ಅದನ್ನು ಪೂರ್ಣವಾಗಿ ದಮನ ಮಾಡುವ ಮೊದಲೇ ಆಗಸ್ಟ್ 2, 1858 ರಂದು ಬ್ರಿಟಿಶ್ ಪಾರ್ಲಿಮೆಂಟು ಒಂದು ಶಾಸನ ಅಂಗೀಕರಿಸಿ ಈಸ್ಟ್ ಇಂಡಿಯಾ ಕಂಪನಿಯ ಆಳ್ವಿಕೆಯನ್ನು ಅಂತ್ಯಗೊಳಿಸಿತು. ಬ್ರಿಟನ್ನಿನ ರಾಣಿ ಭಾರತ ರಾಣಿಯೂ ಆದಳು. ಬಂಡಾಯಗಾರರಿಗೆ ವಿಶ್ವಾಸಘಾತ ಬಗೆದ ರಾಜರು-ನವಾಬರುಗಳಿಗೆ ಪಾಳೆಯಗಾರರಿಗೆ ಅವರು ಆಸ್ತಿ-ಹಕ್ಕುಗಳನ್ನು ರಕ್ಷಿಸುವ ವಚನ ನೀಡಲಾಯಿತು. ಅಂದಿನಿಂದ ಭಾರತದ ರಾಜ-ಮಹಾರಾಜರುಗಳು, ನವಾಬರುಗಳು, ಊಳಿಗಮಾನ್ಯ ಪ್ರಭುಗಳು ಬ್ರಿಟಿಶರ ವಿಧೇಯ ಬೆಂಬಲಿಗರಾದರು.

ಅವರ ಸಂಸ್ಥಾನಗಳನ್ನು 'ಸ್ವತಂತ್ರ' ವಾಗಿಡಲು ಬ್ರಿಟಿಶರು ಪ್ರಯತ್ನಿಸಿದರು. ಕಂಪನಿ ಆಳ್ವಿಕೆ ಹೋಗಿ ರಾಣಿಯ ಆಳ್ವಿಕೆ ಬಂದಾಗ ದಮನಕಾರ್ಯ ಇನ್ನಷ್ಟು ತೀವ್ರಗೊಂಡಿತು. ಸಮಕಾಲೀನ ಖ್ಯಾತ ಉರ್ದು ಕವಿ ಘಾಲಿಬ್ "ನನ್ನೆದುರು ರಕ್ತದ ಹೊಳೆ ಹರಿಯುತ್ತಿದೆ' ಎನ್ನುತ್ತಾ "ಅದೆಷ್ಟು ಜನರನ್ನು ನೇಣಿಗೆ ಹಾಕಿದರೋ ದೇವರಿಗೇ ಗೊತ್ತು. ಜಯಶಾಲೀ ಸೇನೆ ನಗರವನ್ನು ಪ್ರವೇಶಿಸಿ ಹೆದ್ದಾರಿಯಲ್ಲಿ ಸಿಕ್ಕ-ಸಿಕ್ಕ ಮುಗ್ಧರನ್ನು ಕೊಚ್ಚಿಹಾಕಿತು. ಎರಡು ಮೂರು ಮೊಹಲ್ಲಾಗಳಲ್ಲಿ ಲೂಟಿ, ಕೊಲೆ ಎರಡನ್ನೂ ಇಂಗ್ಲೀಷರು ನಡೆಸಿದರು" ಎಂದು ಆತ ಬೇಸರದಿಂದ ವರ್ಣಿಸಿದ್ದಾನೆ.



ಇಂಗ್ಲೀಷ್‌ನ ಖ್ಯಾತ ವ್ಯಂಗ್ಯ ಪತ್ರಿಕೆ 'ಪಂಚ್'ನಲ್ಲಿ 1857 ರ ಬಂಡಾಯದ ಅಮಾನುಷ ದಮನ ವನ್ನು ಟೀಕಿಸುವ ವ್ಯಂಗ್ಯಚಿತ್ರ 'ನ್ಯಾಯ'

ಸಾಮೂಹಿಕ ಹತ್ಯಾಕಾಂಡ, ಸಾಮೂಹಿಕ ನೇಣು, ಕೊಲೆ, ಸುಲಿಗೆ, ಇಂಗ್ಲೀಷ್ ಸೈನಿಕರ ಅಮಾನುಷ ಕೃತ್ಯಗಳು ಇಂಗ್ಲೀಷರೇ ನಾಚುವಂತೆ ಮಾಡಿತು. ಅವಧ್ ಸಂಸ್ಥಾನವೊಂದರಲ್ಲೇ ಒಂದೂವರೆ ಲಕ್ಷ ಮಂದಿಯನ್ನು ಕೊಲ್ಲಲಾಯಿತು ಎನ್ನಲಾಗಿದೆ. ಇದರಲ್ಲಿ 1 ಲಕ್ಷ ಮಂದಿ ನಾಗರೀಕರು. ಚಾರ್ಟಿಸ್ಟ್ ಮುಖಂಡ ಅರ್ನೆಸ್ಟ್ ಜಾನ್ಸ್ ಈ ಬಗ್ಗೆ ತನ್ನ ರಕ್ತದಿಂದಲೇ 'ಹಿಂದೂಸ್ತಾನದ ಬಂಡಾಯ ಅಥವಾ ಹೊಸ ಜಗತ್ತು' ಎಂಬ ಕವನ ಬರೆದ.

ಮೇ 8, 1858 ರಂದು ಲಕ್ನೌ ಪತನವಾದಾಗ ಫ್ರೆಡರಿಕ್ ಎಂಗೆಲ್ಸ್ "ಬ್ರಿಟಿಶರಷ್ಟು ಅಮಾನುಷತೆಯ ಸೇನೆ ಯುರೋಪ್ ಹಾಗೂ ಅಮೆರಿಕಾದಲ್ಲಿ ಬೇರಿಲ್ಲ..... 1858 ರ ಲಕ್ನೌ ಪತನ ಬ್ರಿಟಿಶ್ ಮಿಲಿಟರಿಯ ಮೇಲೆ ಶಾಶ್ವತ ಕಳಂಕ" ಎಂದಿದ್ದರು.


ರಾಷ್ಟ್ರೀಯ ಆಂದೋಲನವೂ ಇದರಿಂದ ಪಾಠ ಕಲಿಯಿತು. ಪಾಳೆಯಗಾರಿ ವಿರೋಧಿ ಹೋರಾಟವಿಲ್ಲದೆ ಭಾರತದ ಸ್ವಾತಂತ್ರ್ಯ ಹೋರಾಟ ಯಶಸ್ವಿಯಾಗದು ಎಂಬುದು ಹಲವರಿಗೆ ಸ್ಪಷ್ಟವಾಯಿತು. ವಾಸ್ತವವಾಗಿ ಇಲ್ಲಿಂದ ರಾಷ್ಟ್ರೀಯ ಆಂದೋಲನದ ಒಂದು ಹೊಸ ಘಟ್ಟವೇ ಆರಂಭವಾಯಿತು. ಬಂಡಾಯದ ದಾರಿ ಬಿಟ್ಟು ಸಾಂವಿಧಾನಿಕ, ಶಾಂತಿಯುತ ಮಾರ್ಗ ಹಿಡಿಯಲಾಯಿತು. ಬ್ರಿಟಿಶರ ವಿರುದ್ಧ ಶಸ್ತ್ರವೆತ್ತಿದವರ ಮುಖಂಡ ವರ್ಗ ಅಂದರೆ ಪಾಳೆಯಗಾರಿ ವರ್ಗ ಬ್ರಿಟಿಶರ ಪರ ನಿಂತಿತು. ಹೊಸದೊಂದು ವರ್ಗ ಅಂದರೆ ಉದಯವಾಗುತ್ತಿದ್ದ ಬಂಡವಾಳಶಾಹಿ ವರ್ಗ ರಾಷ್ಟ್ರೀಯ ಆಂದೋಲನದ ಮುಖಂಡತ್ವ ವಹಿಸಿತು.

1857 ರ ಮಹಾನ್ ಬಂಡಾಯದ ದಮನದ ನಂತರವೂ ದೇಶದ ಇತರ ಹಲವೆಡೆ ಬ್ರಿಟಿಶ್ ಆಳ್ವಿಕೆಯ ವಿರುದ್ಧ ಜನತೆಯ ಅಸಂತೃಪ್ತಿ ಇನ್ನಷ್ಟು ಸಶಸ್ತ್ರ ದಂಗೆಗಳ ಮೂಲಕ ವ್ಯಕ್ತಗೊಂಡಿತು. 19ನೇ ಶತಮಾನದ ಅಂತ್ಯದ ವರೆಗೂ ಅಲ್ಲಲ್ಲಿ ಇವು ಭುಗಿಲೆದ್ದವು.

ಬಂಗಾಳದ **'ನೀಲಿ ಬಂಡಾಯ'**(1859-62) ಇದರಲ್ಲಿ ಪ್ರಮುಖ. ಬ್ರಿಟಿಶ್ ಪ್ಲಾಂಟರುಗಳು ತಮ್ಮ ಲಾಭಕ್ಕಾಗಿ ರೈತರು ನೀಲಿ ಗಿಡಗಳನ್ನೇ ನೆಡಬೇಕು, ಅವನ್ನು ಪ್ಲಾಂಟರುಗಳಿಗೆ ಅಗ್ಗ ದರದಲ್ಲಿ ಮಾರಬೇಕು ಎಂದು ಒತ್ತಡ ಹೇರಿದಾಗ ರೈತರು ನಿರಾಕರಿಸಿದರು. ಆಗ ಅವರನ್ನು ಅಮಾನುಷ ರೀತಿಯಲ್ಲಿ ಹಿಂಸಿಸಲಾಯಿತು. ಇದರ ವಿರುದ್ಧ 1859 ರಲ್ಲಿ ಬ್ರಿಟಿಶ್ ಪ್ಲಾಂಟರುಗಳ ವಿರುದ್ಧ ಒಂದು ಸಾಮೂಹಿಕ ಆಂದೋಲನ ಎದ್ದು ಬಂತು. "ಪ್ರಾಣವನ್ನೇ ಕೊಟ್ಟೇವು ನೀಲಿ ಗಿಡ ಬೆಳೆಸೆವು" ಎಂಬ ಸಮರ ಕೂಗು ಮೊಳಗಿತು. ಉತ್ತರ ಬಿಹಾರದಲ್ಲೂ (1866-68) ಇಂತಹುದೇ ಚಳುವಳಿ ಎದ್ದುಬಂತು. ವಿದ್ಯಾವಂತ ಮಧ್ಯಮ ವರ್ಗದ ಕೆಲವರು ಚಳುವಳಿಯ ಬೆಂಬಲಕ್ಕೆ ನಿಂತರು.



**"ಕೂಕಾ ಬಂಡಾಯ"** (1868-92) 1857ರ ಬಂಡಾಯದ ದಮನವಾಗುತ್ತಿದ್ದಂತೆ ಪಂಜಾಬಿನಲ್ಲಿ ಕೂಕಾ ಬಂಡಾಯಕ್ಕೆ ಸಿದ್ಧತೆ ಆರಂಭವಾಯಿತು. 1872 ರ ವರೆಗೂ ಅದು ಮುಂದುವರೆಯಿತು. 1866 ರಲ್ಲಿ ಇದು ತಾರಕ್ಕೇರಿತು. ಬ್ರಿಟಿಶರೊಡನೆ ಅಸಹಕಾರ ನಡೆಸಿ ಎಂದು ಬೋಧಿಸಿದ ಗುರು ರಾಮ್‌ಸಿಂಗ್ ಈ ದಂಗೆಯ ನಾಯಕ. ಆತ ತಾಷ್ಕೆಂಟ್‌ಗೆ ತನ್ನ ಪ್ರತಿನಿಧಿ ಗುರು ಚರಣ್‌ಸಿಂಗ್‌ನ್ನು ಕಳಿಸಿ ರಶ್ಯದ ನೆರವನ್ನು ಕೇಳಿದ. ಹಲವಾರು ಕೂಕಾಗಳನ್ನು ಹತ್ಯೆ ಮಾಡಲಾಯಿತು. ಗುರು ರಾಮ್‌ಸಿಂಗ್‌ನನ್ನು ಬರ್ಮಾಕ್ಕೆ ಗಡಿಪಾರು ಮಾಡಲಾಯಿತು.



# ಗಾಂಧೀಜಿ ಸ್ವತಂತ್ರ ಭಾರತದ ಮೊದಲ ಹಾಗೂ ಏಕೈಕ ಪ್ರತಿಪಕ್ಷ ನಾಯಕ

## ಹೀಗೆಂದು ವಿಶ್ಲೇಷಿಸಿರುವವರು ಹಿರಿಯ ಮಾರ್ಕ್ಸ್‌ವಾದಿ ಚಿಂತಕ ಇ.ಎಂ.ಎಸ್. ನಂಬೂದರಿಪಾಡ್

ಗಾಂಧೀ ಜಯಂತಿಯ ಸಂದರ್ಭದಲ್ಲಿ ಸಿಪಿಐ(ಎಂ) ನ ಕೇಂದ್ರ ಸಮಿತಿ ... 'ಪೀಪಲ್ಸ್ ಡೆಮಾಕ್ರಸಿ' ಯಲ್ಲಿ ಬರೆದ 'ರಾಷ್ಟ್ರಪಿತ' ಶಿರೋನಾಮೆಯ ಲೇಖ... ಸ್ವಾತಂತ್ರ್ಯ ಹೋರಾಟದ ಮುಖಂಡರಾಗಿದ್ದ ಮಹಾತ್ಮರು ಸ್ವತಂತ್ರ ಭಾರತದ ಮೊ... ಹಾಗೂ ಏಕೈಕ ಪ್ರತಿಪಕ್ಷ ನಾಯಕರಾಗಿದ್ದರು ಎನ್ನಬಹುದು' ಎಂದು ... ಹೇಳಿದ್ದಾರೆ.



"ಸ್ವಾತಂತ್ರ್ಯ ಗಳಿಸಿದ ನಂತರ ಅವರು ಕಳೆದ ಕೆಲವು ವಾರಗಳು ಅವರ ಇಡೀ ಜೀವಮಾನದ ಅತ್ಯಂತ ಮಹಾನ್ ಕ್ಷಣಗಳು. ಈ ಅವಧಿಯಲ್ಲಿ ಅವರು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ಬೂರ್ಜ್ವಾ ರಾಜಕೀಯ ಮುಖಂಡರಾಗಿರಲಿಲ್ಲ, ದೇಶ ಎಂತಹ ಅವನತಿಗೆ ಇಳಿದಿದೆ ಎಂದು ಕಳವಳ ಪಡುತ್ತಿದ್ದ ಒಬ್ಬ ಮಾನವೀಯ ವ್ಯಕ್ತಿಯಾಗಿದ್ದರು. ಸ್ವಾತಂತ್ರ್ಯ ಗಳಿಸಿದ ನಂತರ ತನ್ನ ಕೊನೆಯ ದಿನಗಳಲ್ಲಿ ಭೀಕರ ಕೋಮು ಗಲಭೆಗಳಲ್ಲಿ ನೊಂದ ಗಂಡಸರು, ಹೆಂಗಸರು, ಮಕ್ಕಳನ್ನು ಸಂತೈಸುತ್ತಾ ಹಳ್ಳಿಯಿಂದ ಹಳ್ಳಿಗೆ ಸಂಚರಿಸುತ್ತಿದಾಗ ಅವರೊಂದಿಗೆ ಈ ಮಾನವತಾವಾದಿ ಚಟುವಟಿಕೆಗಳಲ್ಲಿ ಸಹಕರಿಸಲು ಅವರ ಯಾವ ಕಟ್ಟಾ ಅನುಯಾಯಿಗಳೂ, ಶಿಷ್ಯನೂ ಜತೆಗೆ ಬರಲಿಲ್ಲ. **ಅವರು ತಮ್ಮಜೀವನದ ಕೊನೆಯ ಉಪವಾಸ ಸತ್ಯಾಗ್ರಹವನ್ನು ನೆಹರೂ ಸರಕಾರ, ಅದರಲ್ಲೂ ಮುಖ್ಯವಾಗಿ ಗೃಹಮಂತ್ರಿ ಸರ್ದಾರ್ ಪಟೇಲರ ಮುಸ್ಲಿಂ-ವಿರೋಧಿ, ಪಾಕಿಸ್ತಾನ ವಿರೋಧಿ ನಿಲುವಿನ ವಿರುದ್ಧ ಕೈಗೊಳ್ಳಬೇಕಾಯಿತು** ಎಂದು ಇ.ಎಂ.ಎಸ್. ತಮ್ಮ ಲೇಖನದಲ್ಲಿ ನೆನಪಿಸಿದ್ದಾರೆ.

### ಉದಾತ್ತ ಆಶಯಗಳೇನೇ ಇದ್ದರೂ .............

"ತನ್ನ ಜೀವನದ ಕೊನೆಯ ಕೆಲವು ತಿಂಗಳಲ್ಲಿ ಗಾಂಧೀಜಿಯ ಈ ಚಿತ್ರ ಅವರು ಭಾರತದ ಸ್ವಾತಂತ್ರ್ಯ ಹೋರಾಟದ ಮುಖಂಡರಾಗಿ ಅಧಿಕಾರ ವಹಿಸಿಕೊಂಡಾಗ ಇದ್ದ ಮಹಾತ್ಮನ ಚಿತ್ರಕ್ಕೆ ಸಂಪೂರ್ಣ ವ್ಯತಿರಿಕ್ತವಾದದ್ದು. ಅವರನ್ನು ನಾವು, ಹಿಂದೆ ಗಾಂಧೀವಾದಿಗಳಾಗಿದ್ದು, ಕಮ್ಯುನಿಸ್ಟ ರಾದವರು, ಕಾಲು ಶತಮಾನ ಕಾಲ ಅವರು ಸ್ವಾತಂತ್ರ್ಯ ಹೋರಾಟಕ್ಕೆ, ನೇತೃತ್ವ ನೀಡುತ್ತಿದ್ದಾಗ ವಿರೋಧಿಸುತ್ತಿದ್ದೆವು. ಏಕೆಂದರೆ ಸಾಮೂಹಿಕ ಆಂದೋಲನಕ್ಕೆ ನೇತೃತ್ವ ನೀಡುವಾಗ ಅವರು ಅಹಿಂಸೆ, ಟ್ರಸ್ಟೀಶಿಪ್‌ಗಳ ಮೇಲೆ ಒತ್ತು ನೀಡಿ ಅದನ್ನು ಶಿಥಿಲಗೊಳಿಸುತ್ತಿರುವುದನ್ನು ನಾವು ಕಂಡಿದ್ದೆವು. ಆದರೆ ಈಗ ತನ್ನ ನಂಬಿಕಸ್ತ ಸಹಯೋಗಿಗಳು ಕೈಬಿಟ್ಟರೂ ತನ್ನ ನೀತಿಗಳಿಗೆ ಗಟ್ಟಿಯಾಗಿ ಬದ್ಧರಾದ ಒಬ್ಬ ವ್ಯಕ್ತಿಯಾಗಿ ಅವರನ್ನು ಕಂಡೆವು" ಎಂದು ಇಎಂಎಸ್ ನೆನಪಿಸಿಕೊಂಡಿದ್ದಾರೆ.

ಸ್ವಾತಂತ್ರ್ಯ ಹೋರಾಟದ ವರ್ಷಗಳಲ್ಲಿ ನಾವು ಗಾಂಧೀಜಿಯವರನ್ನು ಒಬ್ಬ ಬೂರ್ಜ್ವಾ ಮುಖಂಡರೆಂದು ಟೀಕಿಸಿದೆವು. ಈ ರೀತಿಯ ಟೀಕೆಯಲ್ಲಿ ತಪ್ಪಿರಲಿಲ್ಲ. ಏಕೆಂದರೆ ಅವರ ಉದಾತ್ತ ಆಶಯಗಳೇನೇ ಇದ್ದರೂ ವಸ್ತುತಃ ಅವರು ಬೂರ್ಜ್ವಾ ವರ್ಗವನ್ನು ಬಲಪಡಿಸುವ ಧೋರಣೆ ಗಳನ್ನೇ, ಕಾರ್ಯತಂತ್ರಗಳನ್ನೇ ಅನುಸರಿಸುತ್ತಿದ್ದರು. ಅವರ ಅಹಿಂಸೆಯ ಸಿದ್ಧಾಂತ, ಭೂ ಮಾಲಕರು ಮತ್ತು ಬಂಡವಾಳಶಾಹಿಗಳು ತಮ್ಮ ಒಡೆತನ ದಲ್ಲಿರುವ ಆಸ್ತಿಗಳ 'ಟ್ರಸ್ಟೀ'ಗಳು ಎಂಬ ಸಿದ್ಧಾಂತ ಇತ್ಯಾದಿಗಳು ಬೂರ್ಜ್ವಾ ವರ್ಗಕ್ಕೆ ಭಾರತೀಯ ಜನತೆಯನ್ನು ಸ್ವಾತಂತ್ರ್ಯ ಬೇಡಿಕೆಯ ಸುತ್ತ ಅಣಿನೆರೆಸಲು ನೆರವಾದವು. ಅದೇ ವೇಳೆಗೆ ಜನತೆ ಯಾವುದೇ ಕ್ರಾಂತಿಕಾರಿ ಸಾಮೂಹಿಕ ಕಾರ್ಯಾಚರಣೆಗೆ ಇಳಿಯದಂತೆ ಅವರನ್ನು ತಡೆಹಿಡಿದವು" ಎಂದು ಇ.ಎಂ.ಎಸ್. ಹೇಳುತ್ತಾರೆ.

### ಅವಾಸ್ತವಿಕ ಪ್ರಸ್ತಾಪ

1919-21, 1930-33 ಹಾಗೂ 1942 ರಲ್ಲಿ ಗಾಂಧೀಜಿಯ ನೇತೃತ್ವದಲ್ಲಿ ಸಾಮೂಹಿಕ ಕಾರ್ಯಾಚರಣೆಯ ಮೂರು ಅಲೆಗಳನ್ನು ನಾವು ಗುರುತಿಸಬಹುದು. ಇವು ಬೂರ್ಜ್ವಾ-ಭೂಮಾಲಕ ವರ್ಗಗಳಿಗೆ 'ದರಿದ್ರ ನಾರಾಯಣ' ರನ್ನು ಬ್ರಿಟಿಶ್ ಆಳರಸರ ಮೇಲೆ ಒತ್ತಡ ತರುವ ರೀತಿಯಲ್ಲಿ ಅಣಿನೆರೆಸಲು ನೆರವಾದವು. ಇದರಿಂದ ಬ್ರಿಟಿಶ್ ಆಳರಸರು ಅಧಿಕಾರವನ್ನು ಭಾರತೀಯ ಬೂರ್ಜ್ವಾ ಭೂಮಾಲಕ ವರ್ಗಗಳಿಗೆ ಹಸ್ತಾಂತರಿಸಲು ಅವರು ಮಾತುಕತೆಗೆ ಬರುವಂತೆ ಒತ್ತಡ ಹಾಕಲು ಸಾಧ್ಯವಾಯಿತು. ಗಾಂಧೀಜಿಯ ನೇತೃತ್ವದ ಅತ್ಯಂತ-ವ್ಯಾಪಕ ಹಾಗೂ ಸಮರಧೀರ ಹೋರಾಟವಾದ 1942 ರ 'ಕ್ವಿಟ್ ಇಂಡಿಯಾ' ಚಳುವಳಿ ಒಂದೆಡೆ ಬ್ರಿಟಿಶ್ ಆಳರಸರು, ಇನ್ನೊಂದೆಡೆ ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್ ನಡುವೆ ಮಾತುಕತೆಗೆ ಆಧಾರವಾಯಿತು. ಕೊನೆಗೆ ಬ್ರಿಟಿಶ್ ಆಳರಸರೊಂದಿಗೆ ರಾಜಿ ಮಾಡಿಕೊಂಡು ದೇಶದ ವಿಭಜನೆಯೊಂದಿಗೆ ಅದು ಮುಕ್ತಾಯಗೊಂಡಿತು ಎನ್ನುವ ಇ.ಎಂ. ಎಸ್.ರವರು ಈ ಬೆಳವಣಿಗೆಯ ವರ್ಗ ಮತ್ತು ರಾಜಕೀಯ ಮಹತ್ವವನ್ನು ಅವರು ಸರಿಯಾಗಿ ಗ್ರಹಿಸಲಿಲ್ಲ ಎಂಬುದು ಸನ್ನಿವೇಶದ ದುರಂತ' ಎನ್ನುತ್ತಾರೆ.

ಆದ್ದರಿಂದಲೇ ಅವರು ಆಗಸ್ಟ್ 15, 1947 ರಂದು ಬೂರ್ಜ್ವಾ-ಭೂಮಾಲಕ ಮುಖಂಡರು ಸ್ವಾತಂತ್ರ್ಯವನ್ನು ಗೆದ್ದು ಕೊಂಡಾಗ ಅಧಿಕಾರದ ಸ್ಥಾನಗಳನ್ನು ಪಡೆಯದೆ ಕಾಂಗ್ರೆಸ್‌ನ್ನು ವಿಸರ್ಜಿಸಿ ಲೋಕಸೇವಕರಾಗಬೇಕೆಂಬ ಅವಾಸ್ತವಿಕ

ಪುಟ 8 ನೋಡಿ



# "ನನಗೆ ಬೇಸರವಾಗುತ್ತಿದೆ ..."

## ಎನ್ನುತ್ತಾರೆ ಭಾರತದ ಪ್ರಖ್ಯಾತ ಕೃಷಿ ವಿಜ್ಞಾನಿ ಪ್ರೊ.ಎಂ.ಎಸ್.ಸ್ವಾಮಿನಾಥನ್

ಸ್ವಾತಂತ್ರ್ಯ 50ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ಅವರಿಗೆ ಏನನ್ನಿಸುತ್ತದೆ ಓದಿ ನೋಡಿ.

ನಮ್ಮ ರೈತರು ಕಳೆದ 30 ವರ್ಷಗಳಲ್ಲಿ ವಿಜ್ಞಾನಿಗಳು ಹಾಗೂ ರಾಜಕೀಯ ಮುಖಂಡರ ಬೆಂಬಲದಿಂದ ಮಾಡಿದ ಸಾಧನೆಗಳ ಬಗ್ಗೆ ನನಗೆ ಹೆಮ್ಮೆಯಿದೆ. ಅವರು ನಮಗೆ ರಾಷ್ಟ್ರೀಯ ಘನತೆ ನೀಡಿದ್ದಾರಷ್ಟೆ ಅಲ್ಲ, ಸಿ.ಟಿ.ಬಿ.ಟಿ. ಮಾತುಕತೆಯಂತಹ ಸಂದರ್ಭಗಳಲ್ಲಿ ನಮ್ಮ ರಾಜಕೀಯ ವ್ಯವಸ್ಥೆಗೆ ಅಗತ್ಯವಾದ ಒಂದು ಸ್ವತಂತ್ರ ವಿದೇಶಾಂಗ ನೀತಿಯನ್ನು ಅನುಸರಿಸಲು ಸಾಧ್ಯವಾಗುವಂತ ಸನ್ನಿವೇಶವನ್ನು ನಿರ್ಮಿಸಿದ್ದಾರೆ.

ಆದರೆ ಸ್ವಾತಂತ್ರ್ಯದ 50ನೇ ವಾರ್ಷಿಕೋತ್ಸವದಂದು ನನಗೆ ಬೇಸರ ವಾಗುತ್ತಿದೆ. ನಮ್ಮ ಸಾಧನೆಗಳನ್ನು ಕ್ರೋಢೀಕರಿಸಿ ಉಳಿಸಿ ಕೊಳ್ಳಲು ಅಗತ್ಯವಾದ, ಹಸಿವನ್ನು ನಿರ್ಮೂಲ ಮಾಡುವಲ್ಲಿ ಹಾಗೂ ಕೃಷಿ ಉತ್ಪನ್ನಗಳ ಉತ್ಪಾದನೆ ಹಾಗೂ ಮಾರಾಟದಲ್ಲಿ ವಿಶ್ವ ನಾಯಕತ್ವ ವಹಿಸ ಬೇಕಾದಂತಹ ಸ್ಥಾನಕ್ಕೊಯ್ಯಲು ಅಗತ್ಯವಾದ ಕ್ರಮಗಳನ್ನು ಕೈಗೊಳ್ಳಲಾಗುತ್ತಿಲ್ಲ. ಕೃಷಿ ನೀತಿ ವಿಜ್ಞಾನದಿಂದ ಸಬ್ಸಿಡಿಗಳತ್ತ ತಿರುಗಿದೆ. ಕೇಂದ್ರದಲ್ಲಾಗಲೀ, ರಾಜ್ಯಗಳಲ್ಲಾಗಲೀ ಕೃಷಿ ವಿಭಾಗಗಳಲ್ಲಿ ವೃತ್ತಿಪರರೆಂಬುವರು ಮಾಯವೇ ಆಗಿಬಿಟ್ಟಿದ್ದಾರೆ. ನಮ್ಮ ಆರ್ಥಿಕದ ಜಾಗತೀಕರಣ ಹಾಗೂ ವಿಶ್ವ ವ್ಯಾಪಾರ ಒಪ್ಪಂದದಿಂದಾಗಿ ನಮ್ಮ ಮಾರುಕಟ್ಟೆಗೆ ಆಮದಾದ ಕೃಷಿ ಸರಕುಗಳ ಮಹಾಪೂರ ನಮ್ಮ ಕೃಷಿ ವಲಯಗಳಿಗೆ ತಟ್ಟದಂತೆ ನೋಡಿಕೊಳ್ಳುವ ಯಾವುದೇ ದೂರಗಾಮಿ ಕಾರ್ಯತಂತ್ರ ಕಂಡು ಬರುತ್ತಿಲ್ಲ. ಕೃಷಿಯ ಮೇಲೆ ಹವಾಮಾನದ ಪ್ರಭಾವನ್ನು ಎದುರಿಸಲು ರೈತರಿಗೆ ನೆರವಾಗುವ ಯಾವುದೇ ದೀರ್ಘ ಕಾಲೀನ ಕ್ರಮಗಳನ್ನು ಕೈಗೊಳ್ಳಲಾಗುತ್ತಿಲ್ಲ. 70% ಮಂದಿ ಬದುಕಿಗೆ ಕೃಷಿಯನ್ನು ಅವಲಂಬಿಸಿರುವ, 10 ಕೋಟಿ ಹಿಡುವಳಿ ಗಳಲ್ಲಿ 75% ರಷ್ಟು 1 ಹೆಕ್ಟೇರಿಗಿಂತ ಕಮ್ಮಿ ಪ್ರಮಾಣದಲ್ಲಿರುವ ಒಂದು ದೇಶದಲ್ಲಿ ಆಹಾರ ಮತ್ತು ಕೃಷಿ ಸರಕುಗಳನ್ನು ಆಮದು ಮಾಡುವುದೆಂದರೆ ಅದು ನಿರುದ್ಯೋಗವನ್ನು ಆಮದು ಮಾಡುವಷ್ಟೇ ತೀವ್ರವಾದ ಪ್ರಭಾವ ಬೀರುತ್ತದೆ ಎಂಬ ಅರಿವು ಕಂಡುಬರುತ್ತಿಲ್ಲ.

ನಾವು ವಿಶ್ವ ಜನಸಂಖ್ಯೆಯ 16% ವನ್ನು ಪಶು ಸಂಪತ್ತಿನ 1.5%ವನ್ನು ಪಡೆದಿದ್ದೇವೆ. ವಿಶ್ವ ಭೌಗೋಳಿಕ ಪ್ರದೇಶದ ಕೇವಲ 2%, ಮಳೆನೀರಿನ ಕೇವಲ 1% ಹಾಗೂ ಅರಣ್ಯ ಪ್ರದೇಶ 1% ಹಾಗೂ ಹುಲ್ಲುಗಾವಲಿನ 0.5% ಮಾತ್ರ ಪಡೆದಿದ್ದೇವೆ.

ಕೃಷಿಯನ್ನು ಉಳಿಸಿಕೊಳ್ಳಬಹುದಾದಂತಹ ಆಹಾರ ಭದ್ರತೆಯನ್ನು ಸಾಧಿಸುವ ಒಂದು ಸಾಧನವನ್ನಾಗಿ ಮಾಡಬೇಕಷ್ಟೆ ಅಲ್ಲ, ನಮ್ಮ ಬಹುಪಾಲು ಜನಗಳ ಜೀವನದ ಭದ್ರತೆಯ ಸಾಧನ ವನ್ನಾಗಿಯೂ ಮಾಡಬೇಕಾಗಿದೆ. ಅದಕ್ಕೆ ಪರಿಸರ, ಅರ್ಥಶಾಸ್ತ್ರ, ಲಿಂಗ ಮತ್ತು ಸಾಮಾಜಿಕ ಸಮತೆ, ಇಂಧನಶಕ್ತಿ ಉಳಿತಾಯ ಹಾಗೂ ಉದ್ಯೋಗಾವಕಾಶ ನಿರ್ಮಾಣದ ನೀತಿಗಳ ಮೇಲೆ ನಿಂತ ತಂತ್ರಗಳ ಪ್ರಸಾರ ಹಾಗೂ ಬೆಳವಣಿಗೆಗೆ ದೊಡ್ಡ ಪ್ರಮಾಣದಲ್ಲಿ ಹಣ ವಿನಿಯೋಗಿಸಬೇಕಾಗುತ್ತದೆ. ಮಾಹಿತಿ, ಬಾಹ್ಯಾಕಾಶ, ಜೈವಿಕ ಹಾಗೂ ನವೀಕರಿಸಬಹುದಾದ ಶಕ್ತಿ ಮೂಲಗಳ ತಂತ್ರಜ್ಞಾನಗಳನ್ನು ಬಳಸಿ ನಿಖರವಾದ ಕೃಷಿಯನ್ನು ಬೆಳೆಸಬೇಕಾಗಿದೆ, ಪ್ರೋತ್ಸಾಹಿಸ ಬೇಕಾಗಿದೆ. ಇದನ್ನು ಸಾಧಿಸಲು ಹಾಗೂ ದೇಶ ಮತ್ತೆ 'ಹಡಗಿನಿಂದ ಬಾಯಿಗೆ' ಎಂಬ ಪರಿಸ್ಥಿತಿಯತ್ತ ಹಿಂದೆ ಸರಿಯದಂತೆ ತಡೆಯಬೇಕಾದರೆ ಮತ್ತೊಮ್ಮೆ ರಾಜಕೀಯ ಕಣ್ಣೋಟ ಹಾಗೂ ಕಾರ್ಯಾಚರಣೆ ಬೇಕಾಗಿದೆ.

(ಕೃಪೆ: ಡೆಕ್ಕನ್ ಹೆರಾಲ್ಡ್ 26.8.97 ರ ಸಂಚಿಕೆಯಲ್ಲಿ ಪ್ರಕಟವಾದ ಲೇಖನದಿಂದ)

# ಸರ್ಕಾರದ ಮನೆ ಮುರುಕತನಕ್ಕೆ ಕಾರ್ಮಿಕರ ವಿರೋಧ

**ವಾರದ ಆರ್ಥಿಕ ಟಿಪ್ಪಣಿಗಳು**

ಜಿ.ಎಸ್.ಮಣಿ

ಸಾರ್ವಜನಿಕ ವಲಯದ ಘಟಕಗಳ ಶೇರುಗಳ ಮಾರಾಟ ಮಾಡುವ ಮೂಲಕ ಮನೆಹಾಳುಗೆಡಹುವ ಸರ್ಕಾರದ ನಿರ್ಧಾರವನ್ನು ಕಾರ್ಮಿಕರು ತೀವ್ರವಾಗಿ ವಿರೋಧಿಸಿದ್ದಾರೆ. ಕೇಂದ್ರ ಮಂತ್ರಿ ಮಂಡಳ ಈ ಬಗ್ಗೆ ಇತ್ತೀಚೆಗೆ ತೆಗೆದುಕೊಂಡ ನಿರ್ಧಾರವನ್ನು ಹಿಂತೆಗೆದುಕೊಳ್ಳಬೇಕೆಂದು ಅವರು ಒತ್ತಾಯಿಸಿದ್ದಾರೆ.

ಕೇಂದ್ರ ಸರ್ಕಾರ ಹಣಕಾಸು ಕೊರತೆ ನೀಗಲು ಸಾರ್ವಜನಿಕ ವಲಯದ ಉದ್ದಿಮೆಗಳ ಶೇರುಗಳ ಮಾರಾಟದಿಂದ ಸುಮಾರು 7000 ಕೋಟಿ ರೂಪಾಯಿಗಳನ್ನು ಸಂಗ್ರಹಿಸುವ ನಿರ್ಧಾರವನ್ನು ತೆಗೆದು ಕೊಂಡಿದೆ. ಈ ಶೇರು ಮಾರಾಟ ಲಾಭದಾಯಕ ಘಟಕಗಳದ್ದಾಗಿರುತ್ತದೆ.

ಮುಖ್ಯವಾಗಿ ಬಿ.ಆರ್.ಪಿ.ಎಲ್. (ಬಂಗೈಗಾಂವ್ ರಿಫೈನರಿ ಮತ್ತು ಪೆಟ್ರೋಲಿಯಂ ನಿಯಮಿತ) ಎಂಎಫ್ಐ ಎಲ್ (ಮಾಡರ್ನ್ ಫುಡ್ಸ್ ಇಂಡಸ್ಟ್ರೀಸ್ ಲಿ. ಐಟಿಡಿಸಿ (ಇಂಡಿಯಾ ಟೂರಿಸ್ಟ್ ಡೆವಲಪ್‌ಮೆಂಟ್ ಕಾರ್ಪೊರೇಶನ್ ಮತ್ತು ಬಾಲ್ಕೋ(ಭಾರತ್ ಅಲ್ಯೂಮಿ. ನಿಯಂ ಕಂಪನಿ)ಗಳ ಕಾರ್ಮಿಕ ಸಂಘಗಳು ಇದನ್ನು ವಿರೋಧಿಸಿ ಹೇಳಿಕೆಯಿತ್ತಿದ್ದಾರೆ. ಒಟ್ಟಾರೆಯಾಗಿ ಕಾರ್ಮಿಕರು ಈ ಶೇರು ಮಾರಾಟವನ್ನು ವಿರೋಧಿಸುತ್ತಿದ್ದಾರೆ.

ತನ್ನದೇ ಬಜೆಟ್ಟಿನಿಂದಾಗಿ ಅಂದರೆ ದೇಶದ ಬಂಡವಾಳಿಗ ವರ್ಗಕ್ಕೆ ರಿಯಾಯಿತಿ ನೀಡುವ ಮೂಲಕ ತನ್ನ ಆದಾಯ ಮೂಲಗಳನ್ನೇ ಬತ್ತಿಸಿಕೊಂಡ ಸರ್ಕಾರ ಈಗ ಈ ಹೊರೆಯನ್ನು ದೇಶದ ಜನಸಾಮಾನ್ಯರ ಹೆಗಲಿಗೆ ದಾಟಿಸಲು ಶೇರು ಮಾರಾಟಕ್ಕೆ ಹವಣಿಸುತ್ತಿರುವುದು ಸ್ಪಷ್ಟ.

ಲಾಭದಾಯಕ ಘಟಕಗಳ ಶೇರುಗಳನ್ನೇ ಮಾರಿದರೆ ಹೆಚ್ಚಿನ ಲಾಭ ಬರುತ್ತದೆಂಬುದೂ ಸರ್ಕಾರ ಈ ಲಾಭದಾಯಕ ಉದ್ದಿಮೆಗಳ ಶೇರು ಮಾರಾಟ ಮಾಡಲು ನಿರ್ಧರಿಸುವ ಹಿಂದಿನ ಗುಟ್ಟು.

ಉದಾರೀಕರಣದ ಆರ್ಥಿಕ ನೀತಿ ಕಾರ್ಮಿಕ ವಿರೋಧಿ, ಬಂಡವಾಳ ಪರ ಎಂಬುದನ್ನು ಇದು ಸ್ಪಷ್ಟಗೊಳಿಸುವುದಿಲ್ಲವೇ?

## ಕೃಷಿಗೆ ಕಡಿಮೆ ಹಣ: ಸ್ಥಾಯಿ ಸಮಿತಿ ಟೀಕೆ

ಕೃಷಿಯ ಮೇಲಿನ ಸಂಸತ್-ಸ್ಥಾಯಿ ಸಮಿತಿ ಕೇಂದ್ರ ಸರ್ಕಾರದ ಬಜೆಟ್ಟಿನಲ್ಲಿ ಕೃಷಿಗೆ ತೆಗೆದಿರಿಸುವ ಹಣದ ಮೊತ್ತದಲ್ಲಿ ಕಡಿಮೆ ಆಗಿರುವುದನ್ನು ಟೀಕಿಸಿದೆ. 1991-92 ರಲ್ಲಿ ಇದು ಶೇ 2.6 ರಷ್ಟಿದ್ದದ್ದು ಈ ವರ್ಷಕ್ಕೆ ಶೇ 1.54 ಕ್ಕೆ ಇಳಿದಿದೆ.

ತೆಗೆದಿರಿಸಿದ್ದ 310 ಕೋಟಿ ರೂಪಾಯಿಗಳನ್ನು ಪರಿಷ್ಕೃತ ಅಂದಾಜು ಪತ್ರದಲ್ಲಿ 240 ಕೋಟಿ ರೂಪಾಯಿಗಳಿಗೆ ಇಳಿಸಲಾಯಿತು. ಇದರಿಂದಾಗಿ ಕೇಂದ್ರ ಕೃಷಿ ಸಂಶೋಧನಾ ಮಂಡಳಿಯ ಸಂಶೋಧಕರ ಮೇಲೆ ಭಾರೀ ದುಷ್ಪರಿಣಾಮ ಉಂಟಾಗಿದೆ ಎಂದು ಈ ಸಮಿತಿಯ ಅಧ್ಯಕ್ಷ ಸಂತೋಷ್ ಗಂಗ್ವಾರ್ ಹೇಳಿದ್ದಾರೆ.

ಕೃಷಿಯಲ್ಲಿ ಹೆಚ್ಚಿನ ಹಣ ಹೂಡಿಕೆ ಮಾಡಬೇಕಾಗಿರುವಾಗ ಭಾರತದಂತಹ ಬೃಹತ್ ಜನಸಂಖ್ಯೆಯುಳ್ಳ ದೇಶ ಸ್ವಾವಲಂಬನೆ ಸಾಧಿಸಬೇಕಾಗಿರುವಾಗ ಕೃಷಿ ಅವಲಂಭಿತ ಜನ ಶೇ 75 ರಷ್ಟಿರುವಾಗ ಕೃಷಿ ಹೂಡಿಕೆಯಲ್ಲಿ ಕಡಿತ ಮಾಡಿರುವುದು ದುರದೃಷ್ಟಕರ ಎಂದಿದ್ದಾರೆ ಈತ.

ದೇಶದ ಶೇ 60 ಕ್ಕೂ ಹೆಚ್ಚು ಜನ ಕೃಷಿಯ ಮೇಲೆ ಅವಲಂಬಿಸಿರುವಾಗ, ನೂರು ಕೋಟಿ ಭಾರತೀಯರಿಗೆ ಆಹಾರ ಭದ್ರತೆ ಒದಗಿಸಿ ಸ್ವಾವಲಂಬನೆ ಸಾಧಿಸುವ ಅವಶ್ಯಕತೆ ಇರುವಾಗ ಕೃಷಿಗೆ ಹೆಚ್ಚಿನ ಹಣಕಾಸನ್ನು ಒದಗಿಸುವುದು ಯಾವುದೇ ಜವಾಬ್ದಾರಿಯುತ ಸರ್ಕಾರದ ಆದ್ಯ ಕರ್ತವ್ಯ.

ಇದಕ್ಕೆ ವ್ಯತಿರಿಕ್ತವಾಗಿ ಕೃಷಿಗೆ ಒದಗಿಸುವ ಹಣಕಾಸಿನಲ್ಲೇ ಕಡಿತ ಮಾಡುವುದು ಸಾಮ್ರಾಜ್ಯ ಶಾಹಿಯ ಪುಂಗಿಗೆ ಸ್ಪಂದಿಸಿದಂತೆ. ನಮ್ಮ ಆಹಾರ ಭದ್ರತೆಯನ್ನು ಹಾಳು ಗೆಡವಿ, ಅದರಿಂದುಂಟಾಗುವ ನಮ್ಮ ಅಸಹಾಯಕ ಪರಿಸ್ಥಿತಿಯ ಲಾಭ ಪಡೆಯಲು ಅಭಿವೃದ್ಧಿ ಹೊಂದಿದ ದೇಶಗಳು ಹೊಂಚುಹಾಕಿ ಕುಳಿತಿವೆ.

ಸಾಮ್ರಾಜ್ಯಶಾಹಿಗಳ ವ್ಯೂಹದೊಳಕ್ಕೆ ಹೋಗಿ ಬೀಳುವ ಕೆಲಸವನ್ನು ಸರ್ಕಾರ ಮಾಡುತ್ತಿದೆ ಅಲ್ಲವೇ?

## ಮಾರುತಿ ಪ್ರಕರಣ

ಮಾರುತಿ ಉದ್ಯೋಗ್ ನಿಯಮಿತ ಎಂಬುದು ಮಾರುತಿ ಕಾರುಗಳನ್ನು ಉತ್ಪಾದಿಸುವ ಕಂಪನಿ. ಇದು ಭಾರತ ಸರ್ಕಾರ ಮತ್ತು ಜಪಾನಿನ ಸುಝುಕಿ ಮೋಟಾರ್ ಕಾರ್ಪೊರೇಷನ್‌ಗಳ ಜಂಟಿ ಸಾಹಸ. ಈ ಕಂಪನಿಯಲ್ಲಿ ಕೇಂದ್ರ ಸರ್ಕಾರ ಮತ್ತು ಸುಝುಕಿ ಅರ್ಧರ್ಧ ಪಾಲು ಹೊಂದಿವೆ. ಈ ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಹುದ್ದೆಗೆ ನೇಮಕವಾಗಬೇಕಿತ್ತು. ಹಿಂದಿನ ಸಾರಿ ಸುಝುಕಿಯ ಆಯ್ಕೆಯ ವ್ಯಕ್ತಿಯನ್ನು ನೇಮಿಸಿದ್ದರಿಂದ ಈ ಸಾರಿ ಭಾರತ ಸರ್ಕಾರದ ಆಯ್ಕೆಯ ನೇಮಕ ಎಂಬುದು ಅಲಿಖಿತ ಒಪ್ಪಂದ.

ಭಾರತ ಸರ್ಕಾರ ಆರ್.ಎಫ್. ಎಸ್.ಎಲ್.ಎನ್.ಭಾಸ್ಕರುಡು ಎಂಬುವರನ್ನು ಆಯ್ಕೆ ಮಾಡಿ ನೇಮಕ ಮಾಡಿತು. ಸುಝುಕಿ ಈತ ಅಸಮರ್ಥ ಎಂದೆಲ್ಲಾ ತೆಗಳಿ ಭಾರತ ಸರ್ಕಾರದ ಮೇಲೆ ದೊಡ್ಡ ಸಮರ ಸಾರಿತು. ಕೋರ್ಟಿನ ಕಟ್ಟೆಯನ್ನೂ ಹತ್ತಿದ ಈ ಪ್ರಕರಣ ಮೊನ್ನೆ ವಾರ್ಷಿಕ ಮಹಾ ಸಭೆಯಲ್ಲಿ ಸರ್ಕಾರಿ ನೇಮಕವನ್ನೇ ಒಪ್ಪಿದ್ದರಿಂದ ಮುಗಿಯಿತು ಎಂದು ಕೊಂಡರೆ ಸುಝುಕಿ ಸರ್ಕಾರದ ವಿರುದ್ಧ ದೊಡ್ಡ ಪ್ರಚಾರವನ್ನೇ ನಡೆಸಿದೆ.

ಈಗ ಈ ಪ್ರಕರಣವನ್ನು ಅದು ಅಂತರ್ರಾಷ್ಟ್ರೀಯ ನ್ಯಾಯಾಲಯಕ್ಕೆ ಕೊಂಡೊಯ್ಯಲಿದೆಯಂತೆ. ಹಾಗೆ ಅಂತರ್ರಾಷ್ಟ್ರೀಯ ನ್ಯಾಯಾಲಯದಲ್ಲಿ ಭಾರತ ಸರ್ಕಾರದ ವಿರುದ್ಧ ತೀರ್ಮಾನವಾದರೆ ಆಗ ಭಾರತ ಸರ್ಕಾರಕ್ಕೆ ದೊಡ್ಡ ಮುಖಭಂಗವಾಗುತ್ತದೆ.

ಈ ಒಂದು ಪ್ರಕರಣ ಬಹುರಾಷ್ಟ್ರೀಯ ಕಂಪನಿಗಳು ಸರ್ಕಾರಗಳ ವಿರುದ್ಧವೂ ಹೇಗೆ ಸಮರ ಸಾರುತ್ತವೆ ಮತ್ತು ತಮ್ಮ ಲಾಭದ ವಿಷಯಕ್ಕೆ ಬಂದರೆ ಹೇಗೆ ಎಲ್ಲ ನೀತಿ ನಿಯಮಗಳನ್ನು ಮೀರಿ ಹೋಗುತ್ತವೆ ಎಂಬುದಕ್ಕೆ ಒಳ್ಳೆಯ ಉದಾಹರಣೆ.

ಭಾರತ ಸರ್ಕಾರ ಈ ಪ್ರಕರಣದಿಂದ ಪಾಠ ಕಲಿಯಬೇಕಾಗಿದೆ.

## ಖಾಸಗಿ ಬ್ಯಾಂಕಿನ ಹಗರಣ

ಖಾಸಗಿ ವಲಯದ ಸಂಚುರಿಯನ್ ಬ್ಯಾಂಕಿನಲ್ಲಿ ಈಗೊಂದು ಹಗರಣ ಹೊರಬಂದಿದೆ. ಬ್ಯಾಂಕಿನವರೂ ಶಾಮೀಲಾಗಿರಬಹುದಾದ ಈ ಹಗರಣದಿಂದ ಬ್ಯಾಂಕು ಸುಮಾರು 12.35 ಕೋಟಿ ರೂಪಾಯಿಗಳನ್ನು ಕಳೆದುಕೊಳ್ಳಬಹುದು. ಈ ಹಗರಣ ಇನ್ನೂ ದೊಡ್ಡದಾಗಿರ ಬಹುದಾಗಿದ್ದು ಪೂರ್ತಿ ತನಿಖೆಯ ನಂತರ ಇದರ ಹರಹು ವ್ಯಾಪ್ತಿ ಗೊತ್ತಾಗಬಹುದು.

ಭರತ್-ಕೋಸಾ ಎಂಬ ಮುಂಬೈ ಶೇರು ವಿನಿಮಯ ಮಾರುಕಟ್ಟೆಯಿಂದ ಅಮಾನತ್ತಾದ ವ್ಯಕ್ತಿ ಖೋಟಾ ಲೆಟರ್ ಆಫ್ ಕ್ರೆಡಿಟ್ ನೀಡಿ ಅದರ ಮೇಲೆ ಹುಂಡಿಯನ್ನು ಡಿಸ್ಕೌಂಟ್ ಮಾಡಿಸಿಕೊಂಡ. ಹೀಗೆ ಡಿಸ್ಕೌಂಟ್ ಮಾಡುವ ಬ್ಯಾಂಕು ಬಹಳ ಎಚ್ಚರಿಕೆ ವಹಿಸಬೇಕು. ಲೆಟರ್ ಆಫ್ ಕ್ರೆಡಿಟ್ ಅಧಿಕೃತವಾದದ್ದೆಂದು ಖಚಿತಪಡಿಸಿಕೊಳ್ಳಬೇಕು.

ಆದರೆ ಸೆಂಚುರಿಯನ್ ಬ್ಯಾಂಕು ಕನಿಷ್ಠ ಕಾಳಜಿಯನ್ನೂ ಈ ಪ್ರಕರಣದಲ್ಲಿ ತೋರಲಿಲ್ಲವಾದ್ದರಿಂದ ಈ ಹಗರಣ ನಡೆದಿದೆ ಎನ್ನಲಾಗಿದೆ.

ಭಾರತೀಯ ರಿಸರ್ವ್‌ಬ್ಯಾಂಕ್ ಈಗ ಸೆಂಚುರಿಯನ್ ಬ್ಯಾಂಕಿಗೆ ದಂಡ ವಿಧಿಸುವ ವಿಚಾರ ಮಾಡುತ್ತಿದೆಯಂತೆ.

ಈ ರೀತಿಯ ಹಗರಣಗಳು ಹೊಸತಲ್ಲ. ಹಿಂದೆ ಇಂತಹ ಹಗರಣಗಳಾದ ಮೇಲೆ ಅತಿನಿಷ್ಠುರ ನಿಯಮಗಳನ್ನು ತಂದಿದ್ದುದರಿಂದ ಮೋಸ ಮಾಡುವುದು ಕಷ್ಟವಾಗಿತ್ತು.

ಖಾಸಗಿ ಬ್ಯಾಂಕುಗಳ ಲಾಭಕೋರತನದಿಂದ ಎಚ್ಚರಿಕೆ ಕಡಿಮೆಯಾಗಿ ಇಂತಹ ಹಗರಣಗಳಿಗೆ ಮತ್ತೆ ಎಡೆ ಮಾಡಿಕೊಡುತ್ತಿವೆ. ಇನ್ನೂ ಎಷ್ಟೆಷ್ಟು ಹಗರಣಗಳು ಗರ್ಭದೊಳಗಿವೆಯೋ? ಎಲ್ಲ ಉದಾರೀಕರಣದ ಕೊಡುಗೆಗಳು ಅಲ್ಲವೇ?

---

ಐ.ಎಂ.ಎಫ್.-ವಿಶ್ವ ಬ್ಯಾಂಕುಗಳ ಈ ಆದೇಶವನ್ನು ನಿರ್ವಹಿಸಲು ಕಟಿಬದ್ಧರಾಗಿರುವ ಕೇಂದ್ರ ಹಣಕಾಸು ಮಂತ್ರಿಗಳಿಗೆ ಈಗ ಮತ್ತೊಂದು ನೆವ ಸಿಕ್ಕಿದೆ - ವೇತನ ಆಯೋಗದ ಶಿಫಾರಸ್ಸಿನ ಜಾರಿಯಿಂದಾಗಿ ಹೆಚ್ಚಿನ ಹೊರೆ ಬಂದಿದೆಯೆಂದು, ಆದರೆ ವಾಸ್ತವವಾಗಿ ಕೊರತೆಯಾಗಿರುವುದು ಇದರಿಂದಲ್ಲ, ಸಿರಿವಂತರಿಗೆ ಕೊಟ್ಟ ತೆರಿಗೆ ರಿಯಾಯ್ತಿಗಳಿಂದ. ಜನ ಸಾಮಾನ್ಯರ ಬದುಕನ್ನು ಇನ್ನಷ್ಟು ಹದಗೆಡದಂತೆ ತಡೆಯಲು ಸರಕಾರ ನೀಡಬೇಕಾಗ ಸಬ್ಸಿಡಿಯ ಬಗ್ಗೆ ಎಗರಾಡುವ ಹಣಕಾಸು ಮಂತ್ರಿಗಳು ಸಿರಿವಂತರಿಗೆ ರಿಯಾಯ್ತಿಗಳ ಮೂಲಕ ಕೊಡುವ ಸಬ್ಸಿಡಿಗಳ ಬಗ್ಗೆ ಮೌನವಾಗಿದ್ದಾರೇಕೆ?

## "ಇದೆಂಥಾ ನಿವಾಸಿ (ಅ)ಭಾರತೀಯರ ಆರ್ಥಿಕ ತತ್ವ"

### ಎಂದು ಕೇಳುತ್ತಾರೆ ಸಿಪಿಐ(ಎಂ) ಮುಖಂಡ ಸೀತಾರಾಂ ಯೆಚೂರಿ

(ಈ ಕುರಿತ ಅವರ ಲೇಖನದ ಸಂಗ್ರಹಾನುವಾದ)

ಮೊನ್ನೆಯ ಮಿನಿ ಬಜೆಟ್ಟಿನಲ್ಲಿ ಕೇಂದ್ರ ಸರ್ಕಾರ 6880 ಕೋಟಿ ರೂಪಾಯಿಗಳ ಸಂಗ್ರಹಣೆಗೆ ಅವಕಾಶ ಮಾಡಿಕೊಂಡಿತು. ಈ ಹೊರೆ ಜನಸಾಮಾನ್ಯರ ಮೇಲೆ. ಯಾಕೆ ಈ ಸಂಗ್ರಹಣೆ? ಕೇಂದ್ರ ಸರ್ಕಾರಿ ನೌಕರರಿಗೆ ಹೆಚ್ಚಿನ ವೇತನ ನೀಡಲು ಒಪ್ಪಿಕೊಂಡಿರುವುದರಿಂದ ಸರ್ಕಾರಕ್ಕೆ ಸುಮಾರು 7000 ಕೋಟಿ ರೂಪಾಯಿಗಳಷ್ಟು ಹೆಚ್ಚಿಗೆ ಹಣ ಬೇಕು. ಯಾಕೆಂದರೆ ಬಜೆಟ್ಟಿನಲ್ಲಿ ಬರೀ 11500 ಕೋಟಿ ರೂಪಾಯಿಗಳ ವೆಚ್ಚಕ್ಕೆ ಅವಕಾಶ ಮಾಡಲಾಗಿದೆ. ಈಗ ಒಟ್ಟು ಖರ್ಚು 18500 ಕೋಟಿ ರೂಪಾಯಿಗಳಾಗುತ್ತದೆ. ಬಹಳ ತರ್ಕಬದ್ಧವಾಗಿದೆಯೆನಿಸುವುದಿಲ್ಲವೇ ಈ ತೀರ್ಮಾನ?

ಆದರೆ ಸ್ವಲ್ಪ ಆಳಕ್ಕಿಳಿದು ನಿಜವೇನೆಂದು ತಿಳಿದುಕೊಳ್ಳೋಣ. ವೇತನ ಪರಿಷ್ಕರಣದಿಂದ ಸರ್ಕಾರದ ಹೊರೆ ಹೆಚ್ಚಾಗಿರುವುದು ನಿಜ. ಈ ವ್ಯತ್ಯಾಸ ಸರಿಹೊಂದಿಸಲು ರೈಲ್ವೆಯ ಮೇಲೆ 3000 ಕೋಟಿ ರೂಪಾಯಿಗಳು ಟೆಲಿ ಸಂಪರ್ಕ ಇಲಾಖೆಯ ಮೇಲೆ 1000 ಕೋಟಿ ರೂಪಾಯಿಗಳ ಹೊರೆ ಹೇರಿದೆ ಸರ್ಕಾರ. ಇನ್ನೂ 3000 ಕೋಟಿ ರೂಪಾಯಿಗಳ ವ್ಯತ್ಯಾಸ ಉಳಿಯುತ್ತದೆ.

ಈಗ ಬೇರೊಂದು ವಿಷಯವನ್ನು ನೋಡೋಣ. ಹಿಂದೆ ಅಂದರೆ 1996 ರ ಜುಲೈನಲ್ಲಿ ದೇವೇಗೌಡರ ಸರ್ಕಾರ ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಏರಿಸಿದಾಗ ಒಟ್ಟು 7000 ಕೋಟಿ ರೂಪಾಯಿಗಳಷ್ಟು ಸಂಗ್ರಹಣೆ ಹೆಚ್ಚಿ [illegible] ಹಣಕಾಸು ಮಂತ್ರಾಲಯಕ್ಕೆ 4200 ಕೋಟಿ ರೂಪಾಯಿಗಳಷ್ಟು ಹೆಚ್ಚಿನ ಕಂದಾಯ ಬಂತು. ಇದು ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ಸುಂಕಗಳ ಮೂಲಕ ಬಂದದ್ದು.

ಹಾಗಾದರೆ ಈ ವರ್ಷ ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಏರಿಸಿ 6000 ಕೋಟಿ ರೂಪಾಯಿಗಳ ಸಂಗ್ರಹಣೆಗೆ ಬುನಾದಿ ಹಾಕಿದರೆ ಹಣಕಾಸು ಮಂತ್ರಾಲಯಕ್ಕೆ 3600 ಕೋಟಿ ರೂಪಾಯಿಗಳಷ್ಟು ಹೆಚ್ಚಿನ ಕಂದಾಯ ಸಂಗ್ರಹಣೆ ಆಗಬೇಕಲ್ಲವೇ? ಅಂದರೆ 3000 ಕೋಟಿ ರೂಪಾಯಿಗಳಿಗೆ ಬದಲಾಗಿ 3600 ಕೋಟಿ ರೂಪಾಯಿಗಳ ಸಂಗ್ರಹಣೆ.

ಹೀಗೆ 600 ಕೋಟಿ ರೂಪಾಯಿಗಳು ಹೆಚ್ಚಿಗೆ ಸಂಗ್ರಹ ಆಗುವುದರಿಂದ ಹೆಚ್ಚಿನ ಸಂಪನ್ಮೂಲ ಸಂಗ್ರಹಣೆಯೇ ಬೇಕಾಗಿಲ್ಲ. ಆದರೂ ಸರ್ಕಾರ 6880 ಕೋಟಿ ರೂಪಾಯಿಗಳ ಹೆಚ್ಚಿನ ಸಂಗ್ರಹಣೆಗೆ ಕೈ ಹಾಕಿದೆ. ಜನಸಾಮಾನ್ಯರ ಮೇಲೆ ಈ ಹೊರೆ ಹೇರುತ್ತಿದೆ.

ಈಗ ಇದರ ಇನ್ನೊಂದು ಮುಖವನ್ನು ನೋಡೋಣ. ಈ ಸಾಲಿನ ಅಂದರೆ 1997-98 ರ ಸಾಲಿನ ಬಜೆಟ್ಟಿನಲ್ಲಿ ಶ್ರೀಮಂತರಿಗೆ ನೀಡಿದ ರಿಯಾಯಿತಿ 1500 ಕೋಟಿ ರೂಪಾಯಿಗಳು. ಇದಕ್ಕೆ ಸರ್ಕಾರ ನೀಡಿದ ದೊಡ್ಡ ಸಮರ್ಥನೆ - ತೆರಿಗೆ ದರ ಕಡಿಮೆ ಮಾಡುವುದರಿಂದ ಹೆಚ್ಚು ತೆರಿಗೆ ಸಂಗ್ರಹವಾಗುತ್ತದೆ. ಈ ತತ್ವ ಅಮೇರಿಕದಂತಹ ದೇಶದಲ್ಲೇ ಮಣ್ಣು ಮುಕ್ಕಿದೆ. ಹಾಗೆ ಸಂಗ್ರಹಣೆ ಹೆಚ್ಚುವುದಾದರೆ ಈಗ ಈ ಕೊರತೆಯ ಪ್ರಶ್ನೆಯೇ ಬರಬಾರದಲ್ಲವೇ?

ಈ ಸಂಗ್ರಹಣೆಯನ್ನು ಸರ್ಕಾರ ಹೇಗೆ ಮಾಡಬಯಸುತ್ತದೆ ? ಜನಸಾಮಾನ್ಯರ ಜೀವನಮಟ್ಟ ಸುಧಾರಿಸುವ ಸಲುವಾಗಿ ತೆಗೆದಿರಿಸಿರುವ ಹಣದಲ್ಲಿ ಕಡಿತ ಮಾಡುವ ಮೂಲಕ, ಎರಡನೆಯದಾಗಿ ಸಾರ್ವಜನಿಕವಲಯದ ಉದ್ದಿಮೆಗಳ ಶೇರುಗಳ ಮಾರಾಟದ ಮೂಲಕ. ಹೀಗೆ ಶೇರುಗಳನ್ನು ಮಾರುವುದರಿಂದ ದೇಶದ ಸ್ವಾವಲಂಬನೆಗೆ ಅದು ಧಕ್ಕೆ ಕೊಡುತ್ತದೆ. ಅಲ್ಲದೆ ಸಂಯುಕ್ತರಂಗದ ಸಮಾನ ಕನಿಷ್ಠ ಕಾರ್ಯಕ್ರಮದ ಪ್ರಕಾರ ಆದ್ಯತೆಯ ಕ್ಷೇತ್ರದ ಹೊರಗಿರುವ ಲಾಭ ಮಾಡದ ಉದ್ದಿಮೆಗಳ ಶೇರುಗಳನ್ನು ಮಾತ್ರವೇ ಕಾರ್ಮಿಕರ ಆಸಕ್ತಿಗಳಿಗೆ ಧಕ್ಕೆ ಮಾಡದೆ ಮಾರಾಟ ಮಾಡಬೇಕು. ಹೀಗೆ ಮಾರಾಟದಿಂದ ಬಂದ ಹಣವನ್ನು ಸಾಮಾಜಿಕ ವಲಯಗಳಾದ ಸಾರ್ವಜನಿಕ ಆರೋಗ್ಯ, ಪ್ರಾಥಮಿಕ ಶಿಕ್ಷಣ ಇತ್ಯಾದಿಗಳಿಗೆ ವಿನಿಯೋಗಿಸಬೇಕು. ಈಗ ಸರ್ಕಾರ ಮಾಡುತ್ತಿರುವುದೇನು? ಲಾಭದಾಯಕ ಘಟಕಗಳ ಶೇರು ಮಾರಾಟ, ಬಂದ ಹಣ ಹಣಕಾಸು ಕೊರತೆ ನೀಗಲು.

ಕೇಂದ್ರ ಹಣಕಾಸು ಮಂತ್ರಿ ಪಿ.ಚಿದಂಬರಂ ಸಹಾಯಧನಗಳ ಮೇಲೆ ಉರಿದುಬಿದ್ದಿದ್ದಾರೆ. ಸಹಾಯ ಧನಗಳಿಂದಲೇ ಸರ್ವನಾಶ ಎಂಬಂತೆ. ಸಹಾಯ ಧನ ಎಂದರೇನು? ತೆರಿಗೆದಾರರಿಂದ ಸಂಗ್ರಹಿಸಿದ ಹಣವನ್ನು ಜನತೆಗೆ ಅತ್ಯಾವಶ್ಯಕ ಎನಿಸುವ ಅವಶ್ಯಕತೆಗಳ ಮೇಲೆ(ಉದಾ: ಆಹಾರ ಭದ್ರತೆ) ವಿನಿಯೋಗಿಸುವುದು. ಈ ಶ್ರೀಮಂತರಿಗೆ ನೀಡುವ ರಿಯಾಯಿತಿ ಅದೂ ಒಂದು ರೀತಿಯ ಸಹಾಯ ಧನವೇ ಅಲ್ಲವೇ? ತೆರಿಗೆ ಸಂಗ್ರಹಿಸಿ ಅದನ್ನು ಒಂದು ವರ್ಗದ ಜನತೆಯ ಹಿತಕ್ಕಾಗಿ ಖರ್ಚು ಮಾಡುವ ರೀತಿ ಒಂದಾದರೆ ಒಂದು ವರ್ಗದಿಂದ ನ್ಯಾಯವಾಗಿ ಮಾಡಬೇಕಾದ ಸಂಗ್ರಹಣೆಯನ್ನು ಮಾಡದೇ ಇರುವುದು ಇನ್ನೊಂದು ರೀತಿ. ವ್ಯತ್ಯಾಸವಿಷ್ಟೆ ಸಂಗ್ರಹವಾದ ತೆರಿಗೆ ಬಡಜನತೆಗಾಗಿ ವ್ಯಯವಾದರೆ ಅದನ್ನು ಇವರು ಸಹಾಯಧನ ಎಂದು ಕರೆಯುತ್ತಾರೆ. ಬದಲಿಗೆ ಶ್ರೀಮಂತರಿಂದ ಸಂಗ್ರಹವಾಗ ಬೇಕಾದ್ದನ್ನು ಸಂಗ್ರಹ ಮಾಡದೇ ಬಿಟ್ಟರೆ ಅದು ಸಹಾಯಧನವಲ್ಲ. ಅದು ಹೆಚ್ಚಿನ ತೆರಿಗೆ ಸಂಗ್ರಹಣೆಗೆ ಪ್ರೇರಕ! ಹಾಗೆಯೇ ಬೆಳವಣಿಗೆಯ ಪ್ರಚೋದಕ!

ಮೊದಲನೆಯದರಿಂದ ಮಾತ್ರ ಹಣಕಾಸು ಕೊರತೆ ಉಂಟಾಗುತ್ತದೆ ಎಂಬುದು ಸುಳ್ಳು. ಎರಡರಿಂದಲೂ ಅದೇ ಪರಿಣಾಮ ಉಂಟಾಗುತ್ತದೆ. ಒಂದರಿಂದ ಬಡಜನತೆಗೆ ವಿಶಾಲ ಜನಸಮೂಹಕ್ಕೆ ಲಾಭವಾದರೆ ಎರಡನೆಯದರಿಂದ ಕೆಲವೇ ಕೆಲವು ಶ್ರೀಮಂತರಿಗೆ ಉಪಯೋಗವಾಗುತ್ತದೆ.

ಹಣಕಾಸು ಕೊರತೆಯ ನಿಜವಾದ ಪರಿಣಾಮ ಏನು? ಬರೀ ಹಣಕಾಸಿನ ಕೊರತೆಯಿಂದ ಹಾನಿಯೇನಿಲ್ಲ, ಆದರೆ ಆರ್ಥಿಕದಲ್ಲಿ ಇರುವ ವಸ್ತುಗಳಿಗಿಂತ ಹಣವೇ ಹೆಚ್ಚಾಗಿದ್ದರೆ ಹಣದುಬ್ಬರ ಉಂಟಾಗಿ ದುಷ್ಪರಿಣಾಮ ಉಂಟಾಗಬಹುದು. ಇದನ್ನು ತಡೆಗಟ್ಟಲು ಹಲವು ಕ್ರಮಗಳಿವೆ.

ಹಣಕಾಸು ಕೊರತೆ ಮತ್ತು ಹಣದುಬ್ಬರ ಒಂದು ಹಂತದಲ್ಲಿ ಹೆಚ್ಚಿನ ಬೇಡಿಕೆ ಉಂಟುಮಾಡಿ ಆರ್ಥಿಕದ ಬೆಳವಣಿಗೆಯನ್ನು ಉಂಟು ಮಾಡಬಲ್ಲವು.

ಆದರೆ ಸರ್ಕಾರಕ್ಕೆ ಇದೆಲ್ಲ ಮುಖ್ಯ ಉದ್ದೇಶಗಳಲ್ಲ. ಅದಕ್ಕೆ ಅದರ ಧಣಿಗಳಾದ ಐಎಂಎಫ್- ವಿಶ್ವಬ್ಯಾಂಕ್‌ಗಳ ಶರತ್ತುಗಳನ್ನು ಪೂರೈಸ ಬೇಕು. ಈ ಶರತ್ತುಗಳಲ್ಲಿ ಹಣಕಾಸು ಕೊರತೆ ಯನ್ನು ಕಡಿತ ಮಾಡುವುದೂ ಒಂದು.

ಹೀಗೆ ಹಣಕಾಸು ಕೊರತೆಯನ್ನು ಹಿಡಿತದಲ್ಲಿಟ್ಟರೆ ಸರ್ಕಾರಕ್ಕೆ ಐಎಂಎಫ್ -ವಿಶ್ವಬ್ಯಾಂಕ್‌ಗಳ ಸಾಲದ ಮೇಲಿನ ಬಡ್ಡಿಯನ್ನು ಮರುಪಾವತಿಸುವುದು ಸುಲಭವಾಗುತ್ತದೆ. ಅದನ್ನೇ ಫಂಡ್ -ಬ್ಯಾಂಕುಗಳು ಬಯಸುವುದು, ನಮ್ಮ ಕೇಂದ್ರ ಸರ್ಕಾರ ಮಾಡುತ್ತಿರುವುದು. ಈ ಪ್ರಕ್ರಿಯೆಯಲ್ಲಿ ದೇಶದ ಜನಸಾಮಾನ್ಯರು ನರಳುವಂತಾದರೆ ಅದರಿಂದ ಇವರಿಗೇನು?

ಹಿಂದಿನ ಕಾಂಗ್ರೆಸ್ ಸರ್ಕಾರ ಇಂತಹ ನೀತಿಗಳನ್ನು ಜಾರಿಗೆ ತಂದದ್ದರಿಂದ ಜನತೆ ಕಾಂಗ್ರೆಸ್ಸಿಗೆ ಚುನಾವಣೆಯಲ್ಲಿ ಅದರ ಜಾಗ ತೋರಿಸಿದರು. ಈಗ ಸಂಯುಕ್ತ ರಂಗ ಸರ್ಕಾರವೂ ಅದೇ ಸವೆದ ಹಾದಿ ಹಿಡಿದಿರುವುದು ದುರದೃಷ್ಟಕರ.

ಇದಲ್ಲದೆ ಸರ್ಕಾರ ಅನಿವಾಸಿ ಭಾರತೀಯರಿಗೆ ಹೆಚ್ಚಿನ ಬಡ್ಡಿ ನೀಡಿ ಅವರಿಂದ ಹಣ ಆಕರ್ಷಿಸುವ ಪ್ರಯತ್ನ ಮಡುತ್ತಿದೆ. ಆದರೆ ಅದಕ್ಕೆ ದೊಡ್ಡ ಬೆಲೆ ತೆರಬೇಕಾದವರು ನಿವಾಸಿ ಭಾರತೀಯರು. ಅಂದರೆ ಅನಿವಾಸಿ ಭಾರತೀಯ ಲಾಭಕ್ಕಾಗಿ ನಿವಾಸಿ ಭಾರತೀಯರು ಹೊರೆ ಹೊರಬೇಕು. ಈ ವಿಶಾಲ ಜನಸಮೂಹ ನಿವಾಸಿ ಅಭಾರತೀಯರೆ ಹಾಗಾದರೆ?

□

**ದೇಶದೊಳಗೆ**




# ಬನ್ಸಿಲಾಲ್ ಸರಕಾರದ ಕರಾಳ ಪಿತೂರಿ

## ರೈತ ಕುಟುಂಬಗಳ ಜೀವನಮಾರ್ಗ ಕಸಿಯಲು ಯತ್ನ

ಹರ್ಯಾಣ ವಿಕಾಸ ಪಕ್ಷ (ಎಚ್.ವಿ.ಪಿ.) ಮತ್ತು ಭಾರತೀಯ ಜನತಾ ಪಕ್ಷ(ಬಿಜೆಪಿ) ಮೈತ್ರಿ ಕೂಟದ ಸರಕಾರ ಬಡರೈತ ಕುಟುಂಬಗಳ ಜೀವನವನ್ನೇ ಹಾಳು ಮಾಡಲು ಹೊರಟಿರುವ ಪ್ರಕರಣವೊಂದು ವರದಿಯಾಗಿದೆ.

ಬನ್ಸಿಲಾಲ್ ನೇತೃತ್ವದ ಎಚ್.ವಿ.ಪಿ .-ಬಿಜೆಪಿ ಸರಕಾರ ಕುರುಕ್ಷೇತ್ರ, ಕೈತೀಲ್ ಮತ್ತು ಪಾಣಿಪತ್ ಜಿಲ್ಲೆಗಳ ಸುಮಾರು 20 ಸಾವಿರ ಕುಟುಂಬಗಳನ್ನು ಅದರಲ್ಲೂ ಮುಖ್ಯವಾಗಿ ಸಿಖ್ ರೈತರನ್ನು, ತೆರವು ಗೊಳಿಸಲು ಕ್ರಮಗಳನ್ನು ಕೈಗೊಳ್ಳುತ್ತಿದೆ. ಈ ಪ್ರದೇಶಗಳಲ್ಲಿ ಜಾಟ್ ರೈತರು ಮತ್ತು ಸಿಖ್ ರೈತರ ಮಧ್ಯೆ ಕೋಮು ವಿದ್ವೇಷವನ್ನು ಉಂಟು ಮಾಡಲು ಸರಕಾರ ಯತ್ನಿಸುತ್ತಿದೆ.

ದೇಶ ವಿಭಜನೆಯ ಸಮಯದಲ್ಲಿ ಪಾಕಿಸ್ತಾನದಿಂದ ಸಿಖ್ ರೈತರು ಈ ಜಿಲೆಗಳಿಗೆ ನಿರಾಶ್ರಿತರಾಗಿ ಬಂದಿದ್ದರು. ಆ ವೇಳೆ ಹರ್ಯಾಣ ಎಂಬ ಪ್ರತ್ಯೇಕ ರಾಜ್ಯ ಇರಲಿಲ್ಲ. ಬಹುತೇಕ ಕಾಡುಮೇಡು ಹಾಗೂ ಸಾಗುವಳಿ ಮಾಡದ ಪ್ರದೇಶಗಳಲ್ಲಿ ನೆಲೆಸುವಂತೆ ಈ ರೈತ ಕುಟುಂಬಗಳನ್ನು ಆಹ್ವಾನಿಸಲಾಗಿತ್ತು.

20 ವರ್ಷಗಳ ದೀರ್ಘಾವಧಿ ಹಾಗೂ ಅದಕ್ಕಿಂತ ಹೆಚ್ಚಿನ ಅವಧಿಯ ಗುತ್ತಿಗೆಯನ್ನು(ಲೀಸ್) ಅವರಿಗೆ ನೀಡಲಾಗಿತ್ತು. ಹಾಗೂ ಆನಂತರ ಅದನ್ನು ವಿಸ್ತರಿಸಲಾಗಿತ್ತು.

ಶ್ರಮಜೀವಿ ಸಿಖ್ ರೈತರು ಕಷ್ಟಪಟ್ಟು ದುಡಿದು ಆ ನೆಲವನ್ನು ಹಸನುಗೊಳಿಸಿದರು. ಉತ್ತಮ ಬೆಳೆಯನ್ನು ತೆಗೆದರು. ಈ ಜಮೀನಿನ ಗಣನೀಯ ಭಾಗ ಗ್ರಾಂಡ್ ಟ್ರಂಕ್ ರೋಡ್‌ನ ಹತ್ತಿರ ಇರುವುದರಿಂದ ಅದು ಈಗ ಅಮೂಲ್ಯವಾಗಿ ಪರಿಣಮಿಸಿದೆ.

**ಲಾಭದ ಮೇಲೆ ಕಣ್ಣು**

ಹೀಗಾಗಿ ಬಹುಬೇಗ ಲಾಭ ಪಡೆಯುವ ದುರಾಸೆಯಿಂದ ಬನ್ಸಿಲಾಲ್ ಸರಕಾರ ಆ ಜಮೀನಿನಿಂದ ರೈತರನ್ನು ಹೊರ ಹಾಕಿ ಫಲವತ್ತಾದ ಪ್ರದೇಶವನ್ನು ಹರ್ಯಾಣದ ಶ್ರೀಮಂತ ರೈತರು ಮತ್ತು ವ್ಯಾಪಾರಸ್ಥರಿಗೆ ಭಾರೀ ಬೆಲೆಗೆ ಹರಾಜು ಮಾಡಲು ಪ್ರಯತ್ನ ನಡೆಸುತ್ತಿದೆ.

ದಶಕಗಳ ಕಾಲದಿಂದ ತಮಗೆ ನೆಲೆ ನೀಡಿದ ಈ ಭೂಭಾಗವನ್ನು ಕಿತ್ತುಕೊಳ್ಳುವ ಸರಕಾರದ ಪ್ರಯತ್ನವನ್ನು ರೈತರು, ರೈತ ಕುಟುಂಬದವರು ಪ್ರಬಲವಾಗಿ ವಿರೋಧಿಸುತ್ತಿದ್ದಾರೆ. ಅಖಿಲ ಭಾರತ ಕಿಸಾನ್ ಸಭಾದ (ಎಐಕೆಎಸ್) ಹರ್ಯಾಣ ರಾಜ್ಯ ಘಟಕ ಈ ಹೋರಾಟಕ್ಕೆ ಪೂರ್ಣ ಬೆಂಬಲ ಕೊಟ್ಟಿದ್ದು ಚಳುವಳಿನಿರತರ ಬೆಂಗಾವಲಿಗೆ ನಿಂತಿದೆ.

ಸಂಘ ಪರಿವಾರದ ಒಂದು ಮುಖ್ಯ ಸರಕಾರದ ಜನವಿರೋಧಿ ನೀತಿಯ ವಿರುದ್ಧ ಜನಾಭಿಪ್ರಾಯ ರೂಪಿಸಲು ಕುರುಕ್ಷೇತ್ರ, ಕೈತಾಲ್ ಮತ್ತು ಪಾಣಿಪತ್ ಜಿಲ್ಲೆಗಳಲ್ಲಿ ಸೆಪ್ಟೆಂಬರ್ 22 ರಂದು ಹಲವು ಸಾರ್ವಜನಿಕ ಸಭೆಗಳನ್ನು ನಡೆಸಲಾಯಿತು.

ಎಐಕೆಎಸ್ ಪ್ರಧಾನ ಕಾರ್ಯದರ್ಶಿ ಎಸ್.ರಾಮಚಂದ್ರನ್ ಪಿಳ್ಳೆ ಈ ಸಭೆಯನ್ನುದ್ದೇಶಿಸಿ ಮಾತನಾಡಿದರು.

**ಜಮೀನು ಕಸಿಯಲು ಬಿಜೆಪಿ ಮುಖಂಡನ ಸಂಘ ರಚನೆ**

ಪಾಣಿಪತ್ ಜಿಲ್ಲೆಯ ಕಚಕೌಲಿ ಗ್ರಾಮದಲ್ಲಿ ಜಿಲ್ಲಾ ಬಿಜೆಪಿ ಅಧ್ಯಕ್ಷ ಭಾಟೀಯ ಸಂಘವೊಂದನ್ನು ಕಟ್ಟಿಕೊಂಡಿದ್ದಾನೆ. ಯಾಕೆ ಗೊತ್ತೆ? ಬೆಲೆ ಬಾಳುವ ಜಮೀನನ್ನು ಕಸಿದುಕೊಳ್ಳುವುದು ಸಂಘದ ಮುಖ್ಯ ಉದ್ದೇಶವಾಗಿದೆ.

ಸೆಪ್ಟೆಂಬರ್ 9 ರಂದು ಭಾಟಿಯಾನ ಬೆಂಬಲಿಗರು ಗ್ರಾಮದಲ್ಲಿ ಕೃಷಿಕಾರ್ಯದಲ್ಲಿ ತೊಡಗಿದ್ದ ಒಬ್ಬ ರೈತನನ್ನು ಗುಂಡಿಟ್ಟು ಕೊಂದು ಹಾಕಿದರು. ಈ ಹತ್ಯೆಯನ್ನು ರೈತರು ಬಲವಾಗಿ ಪ್ರತಿಭಟಿಸಿದ್ದು ಜಮೀನು ತೆರವುಗೊಳಿಸುವ ಪ್ರಯತ್ನವನ್ನು ವಿರೋಧಿಸಲು ಪಣತೊಟ್ಟಿದ್ದಾರೆ.

ಕಚಕೌಲಿ(ಪಾಣಿಪತ್), ಪಹೋಲಿ ಮತ್ತು ಕರಾಹ್ ಗ್ರಾಮಗಳು(ಕುರುಕ್ಷೇತ್ರ) ಮತ್ತು ಚೀಕಾ ಹಾಗೂ ಭೂಮಿ(ಕೈತಾಲ್) ಗ್ರಾಮಗಳಲ್ಲಿ ನಡೆದ ಸಭೆಗಳಲ್ಲಿ ನೂರಾರು ರೈತರು ಉತ್ಸಾಹದಿಂದ ಭಾಗವಹಿಸಿದ್ದರು.

ಕಾ॥ ರಾಮಚಂದ್ರನ್ ಪಿಳ್ಳೆ ಅವರೊಂದಿಗೆ ಎಐಕೆಎಸ್. ರಾಜ್ಯ ಅಧ್ಯಕ್ಷ ಬಾವಾಸಿಂಗ್ ಮತ್ತು ಕಾರ್ಯದರ್ಶಿ ಕೃಷ್ಣ ಸ್ವರೂಪ್ ಅವರೂ ಇದ್ದರು. ○

## ಭೂ ಮಾಲಕರಿಂದ ಹತ್ಯಾಕಾಂಡ: ಬಿಜೆಪಿ ಸಮರ್ಥನೆ!

ಇದೋ ಇಲ್ಲಿದೆ ನೋಡಿ ಭಾರತೀಯ ಜನತಾಪಕ್ಷದ ನಿಜವಾದ ಮುಖವನ್ನು ಬಯಲಿಗೆಳೆಯುವ ಒಂದು ಹೇಳಿಕೆ.

'ಝುರ್ಕುಸಿಯಾದಲ್ಲಿ ನಡೆದಂಥ ಘಟನೆಗಳು ನಿಲ್ಲದಿದ್ದರೆ ರಾಜ್ಯದಲ್ಲಿ ಖಾಸಗಿ ಸೇನೆಗಳನ್ನು ರಚಿಸುವ ಪ್ರಕ್ರಿಯೆ ಅವ್ಯಾಹತವಾಗಿ ಮುಂದುವರಿಯುತ್ತದೆ' - ಹೀಗೆಂದು ಹೇಳಿದವರು ಬಿಹಾರ ವಿಧಾನ ಸಭೆಯಲ್ಲಿ ಪ್ರತಿಪಕ್ಷ ನಾಯಕರಾಗಿರುವ ಬಿಜೆಪಿಯ ಸುಶೀಲ ಕುಮಾರ್ ಮೋದಿ.

ಆಗಸ್ಟ್ 23 ರಂದು ಬಿಹಾರದ ಭಾಗಲ್ಪುರ ಜಿಲ್ಲೆಯ ಝುರ್ಕುಸಿಯಾ ಗ್ರಾಮದಲ್ಲಿ ನಡೆದ ಹತ್ಯಾಕಾಂಡದ ಬಗೆಗೆ ಮೋದಿ ವ್ಯಕ್ತಪಡಿಸಿದ ಪ್ರತಿಕ್ರಿಯೆ ಇದಾಗಿದೆ. ಭೂ ಮಾಲಕರ ಈ ದೌರ್ಜನ್ಯದಿಂದ 10 ವರ್ಷದ ಒಬ್ಬ ಬಾಲಕನ ಸಹಿತ ಐವರು ಆದಿವಾಸಿಗಳು ಹತರಾಗಿದ್ದರು. (ವಿವರ- ಐಕ್ಯರಂಗ ಸೆಪ್ಟೆಂಬರ್ 15-21)

ಈ ಹತ್ಯಾಕಾಂಡವನ್ನು ಖಂಡಿಸುವ ಬದಲು ಭೂಮಾಲೀಕರ ಹೇಯ ಕೃತ್ಯವನ್ನು ಸಮರ್ಥಿಸಿರುವ ಬಿಜೆಪಿ ನಾಯಕನ ಹೇಳಿಕೆಯನ್ನು ಸಿಪಿಐ(ಎಂ) ಬಿಹಾರ ರಾಜ್ಯ ಸಮಿತಿ ಬಲವಾಗಿ ಖಂಡಿಸಿದೆ. ಮೋದಿ ಹೇಳಿಕೆ ಆದಿವಾಸಿಗಳ ಕೊಲೆಗಡುಕರನ್ನು ಸಮರ್ಥಿಸಿಕೊಂಡಿದೆ.

'ಈ ರೀತಿಯ ಹೇಳಿಕೆ ನೀಡುವ ಮೂಲಕ ಎಲ್ಲಾ ದಲಿತ ವಿರೋಧಿ ಬಡವರ ವಿರೋಧಿ ಪಾಳೇಗಾರಿ ಶಕ್ತಿಗಳ ಖಾಸಗಿ ಸೇನೆಗಳಿಗೆ ಹಾಗೂ ಅವುಗಳ ಅಮಾನವೀಯ ದಬ್ಬಾಳಿಕೆಗಳಿಗೆ ಮೋದಿ ಬಹಿರಂಗ ಬೆಂಬಲ ನೀಡಿದಂತಾಗಿದೆ' ಎಂದು ತನ್ನ ಹೇಳಿಕೆಯಲ್ಲಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ವಿಶ್ಲೇಷಿಸಿದೆ.

ಝುಕುರ್ಸಿಯಾದಲ್ಲಿ ಕೊಲೆಗಡುಕರನ್ನು ಮೋದಿ ಸಮರ್ಥಿಸಿಕೊಂಡಿರುವುದನ್ನು ನೋಡಿದರೆ ಹತ್ಯಾಕಾಂಡ ನಡೆಸಿದ ರಣವೀರ ಸೇನೆಗೆ ಬಿಜೆಪಿ ರಹಸ್ಯವಾಗಿ ಕ್ರಿಮಿನಲ್‌ಗಳನ್ನು ಕಳುಹಿಸಿತ್ತೇ ಎಂಬ ಸಂಶಯ ಉಂಟಾಗುತ್ತಿದೆ ಎಂದು ಸಿಪಿಐ(ಎಂ) ಹೇಳಿದೆ.

## ಸಹಕಾರಿ ಬ್ಯಾಂಕ್ ಚುನಾಣೆಗಳಲ್ಲಿ ಎಲ್‌ಡಿಎಫ್‌ಗೆ ಜಯ

ಕೇರಳದ 14 ಜಿಲ್ಲಾ ಸಹಕಾರಿ ಬ್ಯಾಂಕುಗಳಿಗೆ ಸೆಪ್ಟೆಂಬರ್ 21 ರಂದು ಚುನಾವಣೆ ನಡೆದಿದ್ದು 12 ಬ್ಯಾಂಕ್‌ಗಳಲ್ಲಿ ಎಡ ಪ್ರಜಾಸತ್ತಾತ್ಮಕ ರಂಗ(ಎಲ್.ಡಿಎಫ್) ವಿಜಯ ಸಾಧಿಸಿದೆ.

ತಿರುವನಂತಪುರಂ, ಕೊಲ್ಲಂ, ಪಟ್ಟಣಂತಿಟ್ಟ, ಆಳಪುಳ, ಕೊಟ್ಟಾಯಂ, ಎರ್ನಾಕುಲಂ, ಇಡುಕ್ಕಿ, ತ್ರಿಶೂಲ್, ಪಾಲಕ್ಕಾಡ್, ಕೋಜಿಕೋಡ್, ಕಣ್ಣೂರು ಮತ್ತು ಕಾಸರಗೋಡು - ಈ ಜಿಲ್ಲೆಗಳಲ್ಲಿ ಜಯ ಎಲ್‌ಡಿಎಫ್ ಪಾಲಾಗಿದೆ. ಒಂದು ಜಿಲ್ಲೆಯಲ್ಲಿ ಮಾತ್ರ (ಮಲ್ಲಪುರಂ) ಬಹುಮತ ಪಡೆಯಲು ಯುಡಿ ಎಫ್‌ಗೆ ಸಾಧ್ಯವಾಗಿದೆ. ನ್ಯಾಯಾಲಯದ ನಿರ್ದೇಶನದ ಮೇರೆಗೆ ಇನ್ನೊಂದು ಜಿಲ್ಲಾ ಸಹಕಾರಿ ಬ್ಯಾಂಕಿನ ಚುನಾವಣೆಯ ಮತ ಎಣಿಕೆಯನ್ನು ನಡೆಸಿಲ್ಲ.

## ಎಸ್‌ಎಫ್‌ಐ-ಡಿವೈಎಫ್‌ಐ ಪ್ರದರ್ಶನಕಾರರ ಮೇಲೆ ಲಾಠಿ ಪ್ರಹಾರ

ಮಧ್ಯಪ್ರದೇಶ ರಾಜಧಾನಿ ಭೂಪಾಲ್‌ನಲ್ಲಿ ಸೆಪ್ಟೆಂಬರ್ 17 ರಂದು ಮುಖ್ಯಮಂತ್ರಿ ಮನೆ ಮುಂದೆ ಪ್ರದರ್ಶನ ನಡೆಸುತ್ತಿದ್ದ ಎಸ್‌ಎಫ್‌ಐ-ಡಿವೈಎಫ್‌ಐ ಕಾರ್ಯಕರ್ತರ ಮೇಲೆ ಪೋಲೀಸರ ಅನಗತ್ಯವಾಗಿ ಅನ್ಯಾಯದಿಂದ ಲಾಠಿಪ್ರಹಾರ ಮಾಡಿದರು.

ಲಾಠಿ ಪ್ರಹಾರದಿಂದ 12 ವಿದ್ಯಾರ್ಥಿನಿಯರ ಸಹಿತ 58 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಗಾಯಗೊಂಡರು. ಈ ಪೈಕಿ 8 ಜನರಿಗೆ ಗಂಭೀರ ಗಾಯಗಳಾಗಿವೆ. ಗಾಯಾಳುಗಳಲ್ಲಿ ಡಿವೈಎಫ್‌ಐ ರಾಜ್ಯ ಕಾರ್ಯಾಧ್ಯಕ್ಷ ರೋಹಿತ್ ತಿವಾರಿ, ಎಸ್‌ಎಫ್‌ಐ ರಾಜ್ಯ ಕಾರ್ಯದರ್ಶಿ ನೀನಾ ಶರ್ಮ ಸೇರಿದ್ದಾರೆ.

ಶಿಕ್ಷಣದ ಖಾಸಗೀಕರಣಕ್ಕೆ ತಡೆ, ಸರಕಾರಿ ಇಲಾಖೆಗಳಲ್ಲಿ ಹೊಸ ನೇಮಕಾತಿ ಮೇಲಿನ ನಿರ್ಬಂಧವನ್ನು ತೆಗೆದು ಹಾಕುವುದು, ನಿರುದ್ಯೋಗ ಭತ್ಯೆ ನೀಡಿಕೆ, ವಿದ್ಯಾರ್ಥಿ ಸಂಘಟನೆಗಳಿಗೆ ಚುನಾವಣೆ ನಡೆಸುವುದು ಮೊದಲಾದ ಪ್ರಮುಖ ಬೇಡಿಕೆಗಳನ್ನಿಟ್ಟು ಉಭಯ ಸಂಘಟನೆಗಳು ಒಂದು ತಿಂಗಳ ಕಾಲ ಜಂಟಿ ಪ್ರಚಾರಾಂದೋಲನ ನಡೆಸಿದ್ದವು. ಅದರ ಅಂಗವಾಗಿ ಸೆ.17 ರ ಪ್ರದರ್ಶನವನ್ನು ವ್ಯವಸ್ಥೆಗೊಳಿಸಲಾಗಿತ್ತು.

ಪೋಲೀಸ್ ದೌರ್ಜನ್ಯವನ್ನು ವಿರೋಧಿಸಿ ರಾಜ್ಯವ್ಯಾಪಿಯಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಎಸ್.ಎಫ್.ಐ. ಮತ್ತು ಡಿವೈಎಫ್‌ಐ ರಾಜ್ಯ ಸಮಿತಿಗಳು ಕರೆಕೊಟ್ಟಿವೆ.

## ಬಿಹಾರ: ದಲಿತರ ಮೇಲೆ ಹೇಯ ದೌರ್ಜನ್ಯ

ಶ್ರೀಮಾನ್ ಲಾಲೂ ಪ್ರಸಾದ್‌ರ ಪತ್ನಿ ರಾಬ್ಡಿದೇವಿಯವರ ಆಡಳಿತದಲ್ಲಿ ಬಿಹಾರದಲ್ಲಿ ದಲಿತರ ಮಾನ-ಪ್ರಾಣ, ರಾಬರಿ(ದರೋಡೆ) ಆಗುತ್ತಿದೆ. ಸೆಪ್ಟೆಂಬರ್ 21 ರಂದು ಭಾಗಲ್ಪುರ ಜಿಲ್ಲೆಯ ನಂದಲಾಲ್ ಪುರ ಗ್ರಾಮದಲ್ಲಿ ನಡೆದ ಘಟನೆ ಈಚಿನ ಭಯಾನಕ ಸಾಕ್ಷಿಯಾಗಿದೆ.

ಆ ದಿನ ಕಮತ್ ಗ್ರಾಮದ ಭೂಮಾಲಕ ವೈಜನಾಥ ಪಾಂಡೆ ಸುಮಾರು 200 ಜನ ಶಸ್ತ್ರಧಾರಿ ಗೂಂಡಾಗಳೊಂದಿಗೆ ನಂದಲಾಲ್ ಪುರ ಗ್ರಾಮಕ್ಕೆ ನುಗ್ಗಿದರು. ಮೂರು ಟ್ರಕ್ಕುಗಳಲ್ಲಿ ಬಂದಿಳಿದ ಈ ದುರುಳರು ಗ್ರಾಮಕ್ಕೆ ಕಾಲಿಡುತ್ತಲೇ ದಲಿತರ ಮೇಲೆ ಭೀಕರ ಆಕ್ರಮಣ ಆರಂಭಿಸಿದರು.

**ಮನೆಗಳು ನೆಲಸಮ; ಮುರಿದ ಕೈ**

ಪರಮಾನಂದ ಪಾಸ್ವಾನ್, ಶಂಕರ ಪಾಸ್ವಾನ್ ಮತ್ತು ನಿತ್ಯಾನಂದ ಎಂಬುವರ ಮನೆಗಳನ್ನು ಗೂಂಡಾಗಳು ಧ್ವಂಸಗೊಳಿಸಿದರು. 40 ಸಾವಿರ ರೂಪಾಯಿ ಮೌಲ್ಯದ ವಸ್ತುಗಳನ್ನು ದೋಚಿದರು. ಮಹಿಳೆಯರನ್ನು ಅಮಾನುಷವಾಗಿ ಹೊಡೆದರು. ಹೊಡೆತದ ಪರಿಣಾಮವಾಗಿ ಜಲೋದೇವಿ ಎಂಬ 60 ವರ್ಷ ಪ್ರಾಯದ ಮಹಿಳೆಯ ಕೈ ಮುರಿದುಹೋಗಿದೆ.

**ಜಮೀನಿನ ಮೇಲೆ ಕಣ್ಣು**

ದಲಿತರು ಉಳುಮೆ ಮಾಡುತ್ತಿರುವ ಜಮೀನಿನ ಮೇಲೆ ಕಾಕದೃಷ್ಟಿ ಹಾಕಿಕೊಂಡೇ ಭೂ ಮಾಲಿಕರು ಈ ದಬ್ಬಾಳಿಕೆ ನಡೆಸಿರುವುದು ಸ್ಪಷ್ಟವಾಗಿದೆ.

ಗ್ರಾಮದಲ್ಲಿ ದಲಿತರು ವಶಪಡಿಸಿಕೊಂಡು ದೀರ್ಘ ಕಾಲದಿಂದ ಕೃಷಿ ಮಾಡುತ್ತಿರುವ 62 ಬಿಘಾ ಜಮೀನನ್ನು ಕಿತ್ತುಕೊಳ್ಳಲು ಭೂ ಮಾಲಕ ಪಾಂಡೆ ಪ್ರಯತ್ನಿಸುತ್ತಿದ್ದಾನೆ. ಆ ಜಮೀನನ್ನು ತನ್ನ ವಶಕ್ಕೆ ತೆಗೆದುಕೊಳ್ಳಲು ಹಣ ಹಾಗೂ ಭುಜಬಲವನ್ನು ಪ್ರದರ್ಶಿಸಿದ್ದಾನೆ.

ಈ ವಲಯದಲ್ಲಿ ಸ್ಥಾಪಿತ ಹಿತಾಸಕ್ತಿ ಮತ್ತು ಬಡವರ ನಡುವೆ ಭೂ ವಿವಾದ ಸರ್ವೇಸಾಮಾನ್ಯವಾದುದಾಗಿದೆ. ಬಡ ರೈತರನ್ನು ಬಗ್ಗು ಬಡಿದು ಅವರ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು ಭೂಮಾಲಿಕರು ಆಗಾಗ ಸಾಕಷ್ಟು ಹಣವನ್ನು ಚೆಲ್ಲುತ್ತಿರುತ್ತಾರೆ.

**ಪೊಲೀಸ್ ನಿರ್ಲಕ್ಷ್ಯ**

ಭೂಮಾಲಕರು ನಡೆಸಿದ ದೌರ್ಜನ್ಯದ ಬಗ್ಗೆ ದೂರು ಕೊಡಲು ದಲಿತರು ಖಿಲಗಾಂವ್ ಪೊಲೀಸ್ ಠಾಣೆಗೆ ಹೋದಾಗ ಪೊಲೀಸರು ನಿರ್ಲಕ್ಷ್ಯ ಮಾಡಿದರು. ಹೇಗೋ ಏನೋ ಕೊನೆ ಗೊಂಡು ದೂರನ್ನು ದಾಖಲಿಸಿಕೊಳ್ಳಲಾಯಿತು. ಆದರೆ ಭೂಮಾಲಕ ಮತ್ತು ಗೂಂಡಾಗಳ ವಿರುದ್ಧ ಯಾವುದೇ ಕ್ರಮಗಳನ್ನು ಕೈಗೊಂಡಿಲ್ಲ. ಸ್ಥಳೀಯ ಪೊಲೀಸರ ಈ ನಿರ್ಲಜ್ಜ ನಿರ್ಲಕ್ಷ್ಯದಿಂದ ದಲಿತರ ಮೇಲೆ ಪಾಳೇಗಾರಿ ಹಿತಾಸಕ್ತಿಗಳು ಮತ್ತೆ ದಾಳಿ ದಬ್ಬಾಳಿಕೆ ನಡೆಸುವ ಸಾಧ್ಯತೆಯನ್ನು ತಳ್ಳಿಹಾಕಲಾಗುವುದಿಲ್ಲ.

ದಲಿತರ ಮೇಲೆ ನಡೆದ ಭೀಕರ ಹಲ್ಲೆಯನ್ನು ಸಿಪಿಐ(ಎಂ) ಬಿಹಾರ ರಾಜ್ಯ ಸಮಿತಿ ಬಲವಾಗಿ ಖಂಡಿಸಿದೆ. ದಲಿತರಿಗೆ ರಕ್ಷಣೆ ಒದಗಿಸಬೇಕು, ಭೂಮಾಲಕ ಹಾಗೂ ಆತನ ಗೂಂಡಾಗಳನ್ನು ಬಂಧಿಸಬೇಕು ಎಂದು ಒತ್ತಾಯಿಸಿವೆ. ಭೂಮಾಲಿಕನನ್ನು ಬೆಂಬಲಿಸಿದ ಪೊಲೀಸರ ವಿರುದ್ಧ ಕಠಿಣ ಕ್ರಮವನ್ನು ಕೈಗೊಳ್ಳುವಂತೆಯೂ ಆಗ್ರಹಿಸಿದೆ.

## ವರದಕ್ಷಿಣೆ ಹತ್ಯೆಯನ್ನು ಖಂಡಿಸಿ ಪ್ರತಿಭಟನೆ

ವರದಕ್ಷಿಣೆ ಸಾವು, ವರದಕ್ಷಿಣೆ ಕಿರುಕುಳ, ಕೊಲೆ, ಗಂಡನ ಮನೆ ಸೇರಿದ 'ಯುವತಿಯರ' ಮೇಲೆ ಸ್ಟೌವ್ ಸಿಡಿಸುವುದು ದಿನದಿಂದ ದಿನಕ್ಕೆ ಊಹೆಗೂ ಮೀರಿ ಹೆಚ್ಚಾಗುತ್ತಿವೆ. ಸಾಮಾಜಿಕ ಸವಾಲುಗಳಾಗಿ ಪರಿಣಮಿಸಿರುವ ಈ ಅನಿಷ್ಟಗಳು ಸರ್ವೇ ಸಾಮಾನ್ಯ ಎನ್ನುವಂತಾಗಿ ಬಿಟ್ಟಿವೆ.

ಇತ್ತೀಚಿಗೆ ಹರಿಹರದ ಕಿರ್ಲೋಸ್ಕರ್ ಕಾರ್ಖಾನೆಯ ಕಾರ್ಮಿಕ ಮುಖಂಡರಾದ ಆರ್.ಬಿ.ಅಂಗಡಿಯವರ ಮಗಳು ಅನಿತಾ ತನ್ನ ಗಂಡ ಮತ್ತು ಮನೆಯವರ ವರದಕ್ಷಿಣೆ ಕಿರುಕುಳವನ್ನು ತಾಳಲಾರದೆ ಆಗಸ್ಟ 10 ರಂದು ಸೀಮೇ ಎಣ್ಣೆ ಸುರಿದುಕೊಂಡು ಬೆಂಕಿಯ ಮಡುವಿನಲ್ಲಿ ಆಗಸ್ಟ 13 ರಂದು ನಿಧನರಾದರು.

ಆಕೆ ಸಾಯುವ ಮುನ್ನ ಪೋಲೀಸರಿಗೆ ತಿಳಿಸಿರುವ ಹೇಳಿಕೆಯಂತೆ ಆಕೆಯ ಗಂಡ ಅತ್ತೆ ಹಾಗೂ ಮೈದುನರು ತವರಿನಿಂದ ಹಣ ತರುವಂತೆ ಒತ್ತಾಯಿಸುತ್ತಿದ್ದರು ಮತ್ತು ಸಹಿಸಲಾರದ ಮಾನಸಿಕ ಹಿಂಸೆಯನ್ನು ನೀಡುತ್ತಿದ್ದರು.

ಒಂದೂವರೆ ವರ್ಷದ ಹಿಂದಷ್ಟೇ ವಿವಾಹವಾಗಿದ್ದ ಅನಿತಾ 8 ತಿಂಗಳ ಹೆಣ್ಣು ಮಗುವಿನ ತಾಯಿ. ಗಂಡ ಸಿಂಗಪ್ಪ ಹರಿಹರ ತಾಲ್ಲೂಕಿನ ಮಲೇಬೆನ್ನೂರಿನ ಶಾಲೆಯೊಂದರಲ್ಲಿ ಶಿಕ್ಷಕ. ಒಂದು ತಿಂಗಳ ಹಿಂದಷ್ಟೇ ಅತ್ತೆ ಮನೆಯಿಂದ ಹೊರಬಂದು ಹೊಸ ಸಂಸಾರವನ್ನು ಹೂಡಿದ್ದರು. ಆದರೇನಂತೆ ವಿಕೃತ ಮನಸ್ಸಿನ ಶಿಕ್ಷಕ ಅಗಣಿತ ಶಿಕ್ಷೆಗಳನ್ನು ಕಾರಣವಿಲ್ಲದೆ ನೀಡುತ್ತಾ ಬಂದ ಪರಿಣಾಮವಾಗಿ ಅನಿತ ಬೆಂಕಿಗೆ ಆಹುತಿಯಾಗಬೇಕಾಯಿತು. ಈ ವಿಷಯವು ಹರಿಹರದ CITUವಿನ ಗಮನಕ್ಕೆ ಬಂದು ಕೂಡಲೆ CITU, SFI, DYFI, JMS ಸಂಘಟನೆಗಳು ಸೆಪ್ಟೆಂಬರ್ 11 ರಂದು ಮೆರವಣಿಗೆ ಮತ್ತು ಪ್ರತಿಭಟನಾ ಪ್ರದರ್ಶನವನ್ನು ನಡೆಸಿದವು.

ಕಿರ್ಲೋಸ್ಕರ್ ಕಾರ್ಖಾನೆಯ ಬಳಿಯಿಂದ ಹೊರಟ ಮೆರವಣಿಗೆಯಲ್ಲಿ ಕಾರ್ಖಾನೆಯ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು. ಮಾತ್ರವಲ್ಲದೆ ಗಣನೀಯ ಸಂಖ್ಯೆಯ ಮಹಿಳೆಯರೂ ಪಾಲ್ಗೊಂಡಿದ್ದರು. ಹರಿಹರದಲ್ಲಿ ಪ್ರಥಮ ಬಾರಿಗೆ ಇಂತಹ ಕಾರ್ಯಕ್ರಮಗಳಲ್ಲಿ ಮಧ್ಯಮ ವರ್ಗದ ಮಹಿಳೆಯರನ್ನೂ ಒಳಗೊಂಡಂತೆ ಬೇರೆ ಇತರೆ ಕ್ಷೇತ್ರಗಳಲ್ಲಿ ಕೆಲಸ ಮಾಡುವ ಮಹಿಳೆಯರು ಪಾಲ್ಗೊಂಡಿದ್ದರು. ಮುಖ್ಯ ರಸ್ತೆಗಳಲ್ಲಿ ಮೆರವಣಿಗೆ ಸಂಚರಿಸಿ, ತಹಶೀಲ್ದಾರ್ ಕಛೇರಿಯ ಮುಂದೆ ಬಹಿರಂಗ ಸಭೆಯನ್ನು ನಡೆಸಲಾಯಿತು.

ಸಭೆಯಲ್ಲಿ, ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪೋಲೀಸರು ತಳೆದ ದಿವ್ಯ ನಿರ್ಲಕ್ಷ್ಯವನ್ನು ಸರ್ವಾನುಮತದಿಂದ ಖಂಡಿಸಲಾಯಿತು. ವರದಕ್ಷಿಣೆ ದಾಹಕ್ಕೆ ಬಲಿಯಾದ ಅನಿತಾ ಸ್ವತಃ ಹೇಳಿಕೆಯನ್ನು ಕೊಟ್ಟಿದ್ದರೂ ಸಹ ಅದನ್ನು ಪರಿಗಣಿಸಿ ಆರೋಪಿಯನ್ನು ಬಂಧಿಸಿ ವಿಚಾರಣೆಗೆ ಒಳಪಡಿಸದ ಪೋಲೀಸರ ನಿಷ್ಕ್ರಿಯತೆಯನ್ನು, ಇತರೆ ದೌರ್ಬಲ್ಯಗಳನ್ನು ಮತ್ತು ಆರೋಪಿ ನಿರೀಕ್ಷಣಾ ಜಾಮೀನನ್ನು ಪಡೆಯಲು ಅನುವು ಮಾಡಿಕೊಟ್ಟ ಇಲಾಖೆಯ ಕ್ರಮವನ್ನು ಸಭೆಯಲ್ಲಿ ಮಾತನಾಡಿದ ಎಲ್ಲ ಮುಖಂಡರು ಮತ್ತು ಪ್ರತಿಭಟನಾಕಾರರು ಖಂಡಿಸಿದರು. ಇದೇ ಸಂದರ್ಭದಲ್ಲಿ ಮಹಿಳೆಯರಿಗೆ ರಕ್ಷಣೆ ನೀಡುವಲ್ಲಿ ಅಸಫಲವಾಗಿರುವ ಸರ್ಕಾರದ ನೀತಿಗಳನ್ನು ಬಯಲಿಗೆಳೆದರು.

* ಪ್ರತಿಭಟನಾ ಸಭೆಯನ್ನುದ್ದೇಶಿಸಿ, CITU ರಾಜ್ಯ ಮುಖಂಡರಾದ ನಿತ್ಯಾನಂದ ಸ್ವಾಮಿ, ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಸಮಿತಿ ಸದಸ್ಯರಾದ ಎನ್. ಪ್ರಭಾ, DYFI ಮುಖಂಡರಾದ ಕೆ. ಮಹಾಂತೇಶ್, CITU ಜಿಲ್ಲಾ ಕಾರ್ಯದರ್ಶಿ A.S. ಮೂರ್ತಿ, SFIನ ಮಂಜುನಾಥ್, ಜೆ. ಮಲ್ಲಿಕಾರ್ಜುನ ಸ್ವಾಮಿ ಯಾಕೂಬ್, ಹನುಮಂತ ರಾವ್ ಮೊದಲಾದವರು ಮಾತನಾಡಿದರು.

## ಸತತ ಏಳನೆ ಬಾರಿಗೆ ಎಸ್.ಎಫ್.ಐ. ಜಯಭೇರಿ

ಮಂಗಳೂರು: ದ.ಕನ್ನಡ ಜಿಲ್ಲೆಯ ಸರ್ವ ಪದವಿ ಕಾಲೇಜ್ ವಿದ್ಯಾರ್ಥಿ ಸಂಘಕ್ಕೆ ನಡೆದ ಚುನಾವಣೆಯಲ್ಲಿ ಎಸ್.ಎಫ್.ಐ.ನ ಅಭ್ಯರ್ಥಿಗಳು ಎಲ್ಲಾ ಪದಾಧಿಕಾರಿ ಸ್ಥಾನಗಳನ್ನು ಗೆಲ್ಲುವುದರೊಂದಿಗೆ, ಸತತ ಏಳನೇ ಬಾರಿಗೆ ಎಸ್.ಎಫ್.ಐ. ಪ್ರಚಂಡ ಜಯಭೇರಿ ಬಾರಿಸಿದೆ. ಸಂಘದ ಅಧ್ಯಕ್ಷರಾಗಿ ಎಸ್.ಎಫ್.ಐನ ಮುಖಂಡರಾದ ಸ್ಟೀವನ್ ವಾಸ್, ಪ್ರಧಾನ ಕಾರ್ಯದರ್ಶಿಯಾಗಿ ಮಹಮ್ಮದ್ ಇಕ್ಬಾಲ್ ಆಯ್ಕೆಯಾದರೆ, ಇತರ ಪದಾಧಿಕಾರಿಗಳಾಗಿ ಸೋಹೈಲ್, ಇಬ್ರಾಹಿಂ, ಜ್ಯೋತಿ ಲಕ್ಷ್ಮಿ ಪ್ರಸಾದ್ ಶೆಣೈ, ಅಬ್ದುಲ್ ಅಜೀಜ್, ರಜನಿ ಮುಸ್ತಾಕ್ ಆಯ್ಕೆಗೊಂಡಿದ್ದಾರೆ.

ಉಡುಪಿ: ಉಡುಪಿ ಜಿಲ್ಲಾ ಸರ್ವ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿ ಸಂಘದ ಚುನಾವಣೆಯಲ್ಲೂ ಎಸ್.ಎಫ್.ಐ ನ ರಾಜೀವ್ ಪ್ರಧಾನ ಕಾರ್ಯದರ್ಶಿಯಾಗಿಯೂ, ಎಸ್.ಎಫ್.ಐ ಬೆಂಬಲಿತ ನಿತಿನ್ ಶೆಟ್ಟಿ ಅಧ್ಯಕ್ಷರಾಗಿ ಆಯ್ಕೆಗೊಂಡಿದ್ದಾರೆ. ಇತರ ಪದಾಧಿಕಾರಿಗಳಾಗಿ ರವಿಶಂಕರ್, ಸುಧಾಕರ ಶೆಟ್ಟಿ, ದಿವಾಕರ, ವಿನೋದ್ ಕಾಮತ್, ಅಬ್ದುಲ್ ವಹಾಬ್ ರವರು ಆಯ್ಕೆಗೊಂಡಿದ್ದಾರೆ.

ಈ ಚುನಾವಣೆಯಲ್ಲಿ ಎಸ್.ಎಫ್.ಐ.ನ ಅಭ್ಯರ್ಥಿಗಳು ಜಯಗಳಿಸಲು ಸಹಕರಿಸಿದ ಎಲ್ಲಾ ವಿದ್ಯಾರ್ಥಿ ವೃಂದಕ್ಕೆ ಜಿಲ್ಲಾ ಎಸ್.ಎಫ್.ಐ. ಅಭಿನಂದಿಸಿದೆ.

# ತ್ವರಿತ ಮುನ್ನಡೆ ಸಾರ್ವಭೌಮತೆಯ ರಕ್ಷಣೆ ಜಪಾನೀ ಕಮ್ಯುನಿಸ್ಟ್ ಪಕ್ಷದ ನಿರ್ಧಾರ

ಲೋಕಸಂಚಾರ

ಬೇರೆಲ್ಲಾ ರಾಜಕೀಯ ಪಕ್ಷಗಳು ಮತ್ತು ಆಡಳಿತ ಕೂಡಾ ಹಗರಣಗಳಿಂದ ಆವೃತ್ತವಾಗಿರುವ ಜಪಾನೀ ಸಮಾಜದಲ್ಲಿ ಭ್ರಷ್ಟಾಚಾರದಿಂದ ಮುಕ್ತವಾದ ಪ್ರತಿಷ್ಠೆ ಹೊಂದಿರುವ ಜಪಾನೀ ಕಮ್ಯುನಿಸ್ಟ್ ಪಕ್ಷದ 21ನೇ ಮಹಾಧಿವೇಶನ ಸೆಪ್ಟೆಂಬರ್ 22 ರಿಂದ ನಡೆಯಿತು. ತನ್ನ ಈ ಪ್ರತಿಷ್ಠೆಯ ಬಲದಲ್ಲಿ ಅದು "21ನೇ ಶತಮಾನದ ಆರಂಭದಲ್ಲಿ ರಾಷ್ಟ್ರೀಯ ಆಡಳಿತ ನಡೆಸುವ ಹೊಣೆ ಹೊರುವ ಸಾಮರ್ಥ್ಯ" ಪಡೆಯುವಂತಾಗಬೇಕೆಂದು ಅದು ನಿರ್ಧರಿಸಿದೆ. ಜಪಾನೀ ಸಂಸತ್ತಿನ ಕೆಳ ಸದನದ 500 ಸ್ಥಾನಗಳಲ್ಲಿ ಒಂದು ನೂರನ್ನು ಗೆದ್ದುಕೊಳ್ಳಬೇಕು, ಮೇಲ್ಮನೆಯ 252 ರಲ್ಲಿ ಹಲವು ಡಝನ್‌ಗಳಷ್ಟು ಪಡೆಯಬೇಕು ಎಂಬ ಗುರಿಯನ್ನು ಅದು ತನ್ನ ಮುಂದಿಟ್ಟುಕೊಂಡಿದೆ. ಈಗ ಅದು ಕೆಳ ಸದನದಲ್ಲಿ 26 ಮೇಲ್ಮನೆಯಲ್ಲಿ 14 ಸ್ಥಾನಗಳನ್ನು ಪಡೆದಿದೆ. ಒಟ್ಟು ಮತಗಳ 13.08% ಅಥವಾ 72.6 ಲಕ್ಷ ಮತ ಪಡೆದಿದೆ. ಸ್ಥಳೀಯ ಅಸೆಂಬ್ಲಿಗಳಲ್ಲಿ 4000 ಪ್ರತಿನಿಧಿಗಳನ್ನು ಹೊಂದಿದ್ದು ಅತ್ಯಂತ ದೊಡ್ಡ ಪಕ್ಷವಾಗಿದೆ. 65 ನಗರಸಭೆಗಳಲ್ಲಿ ಅದು ಬಹುಮತ ಪಡೆದಿದೆ. ಆದ್ದರಿಂದ ತನ್ನ ಬಲವನ್ನು ಹೆಚ್ಚಿಸಿಕೊಂಡು "ಹೆಚ್ಚು ಪ್ರಜಾಸತ್ತಾತ್ಮಕವಾದ ಜಪಾನಿ"ಗೆ ಬದ್ಧವಾದ ಒಂದು ಸಮಿಶ್ರ ಸರಕಾರವನ್ನು ಸೇರುವ ಸಾಧ್ಯತೆಗೆ ಸಿದ್ಧವಾಗಲು ಅದು ನಿರ್ಧರಿಸಿದೆ.

ತನಗೆ ಮತ ನೀಡುವವರಲ್ಲಿ 10% ಮಂದಿಯನ್ನು ಪಕ್ಷದ ಸದಸ್ಯರಾಗಿ ಮಾಡಬೇಕು ಎಂಬುದು ಅದರ ಇನ್ನೊಂದು ನಿರ್ಣಯ. ಇದರ ಪ್ರಕಾರ ಈಗ 3-6 ಲಕ್ಷ ಸಂಖ್ಯೆ 7.26 ಲಕ್ಷಕ್ಕೇರಬೇಕು. ಅಂದರೆ ದ್ವಿಗುಣಗೊಳ್ಳಬೇಕು. ಅದರ ಪತ್ರಿಕೆ 'ಅಕಾಹಾಟಾ'ದ ಪ್ರಸಾರ ಈಗ 25 ಲಕ್ಷ. ಅದನ್ನು 36 ಲಕ್ಷಕ್ಕೇರಿಸುವ ಅಂದರೆ ತನಗೆ ಮತನೀಡಿದ ಸಂಖ್ಯೆಯ 50% ರಷ್ಟಕ್ಕೆ ಏರಿಸುವ ನಿರ್ಧಾರವನ್ನು ಅದು ಮಾಡಿದೆ. ಇದು ರಾತ್ರಿ ಬೆಳಗಾಗುವಷ್ಟರಲ್ಲಿ ಸಾಧ್ಯವಾಗದು. ಆದರೆ ಎರಡು ಕಾರಣಗಳಿಂದ ಜಪಾನೀಯರು ಕಮ್ಯುನಿಸ್ಟ್ ಪಕ್ಷದ ಅಭಿಪ್ರಾಯಗಳಿಗೆ ಸ್ಪಂದಿಸುತ್ತಿದ್ದಾರೆ ಎಂದು ಮಹಾಧಿವೇಶನದಲ್ಲಿ ಭಾಗವಹಿಸಿದ ಪ್ರತಿನಿಧಿಗಳು ತಿಳಿಸಿದರು. - ಒಂದು ಇತ್ತೀಚೆಗೆ ನಡೆದ ಅಮೆರಿಕಾ-ಜಪಾನ್ ಒಪ್ಪಂದ, ಎರಡು ದುಡಿಯುವ ಜನಗಳ ನಿಜ ಆದಾಯವನ್ನು ಬುಡಮೇಲು ಮಾಡುತ್ತಿರುವ ಆರ್ಥಿಕ ನೀತಿಗಳು.

### ಅಮೆರಿಕಾದ ಬಾಲಂಗೋಚಿಯಾಗಿಸುವ ಒಪ್ಪಂದಕ್ಕೆ ವಿರೋಧ

ಜಪಾನಿ ಕಮ್ಯುನಿಸ್ಟ್ ಪಕ್ಷದ(ಜೆ.ಸಿ.ಪಿ) ಈ ಮಹಾಧಿವೇಶನ ಆರಂಭವಾದ ಮರುದಿನ ನ್ಯೂಯಾರ್ಕ್‌ನಲ್ಲಿ ಜಪಾನ್ ಮತ್ತು ಅಮೆರಿಕಾ ನಡುವೆ ಒಂದು ಹೊಸ ಮಿಲಿಟರಿ ಒಪ್ಪಂದವಾಯಿತು. ಇದರ ಪ್ರಕಾರ ಅಮೆರಿಕಾದ ಯಾವುದೇ ಮಿಲಿಟರಿ ಕಾರ್ಯಾಚರಣೆಯಲ್ಲಿ ಜಪಾನು ತನ್ನ ಪೂರ್ಣ ಆರ್ಥಿಕ ಮತ್ತು ಮಿಲಿಟರಿ ಶಕ್ತಿಯೊಂದಿಗೆ ಭಾಗವಹಿಸಬೇಕು. ಈ ಬಗ್ಗೆ ಜಪಾನೀಯರಲ್ಲಿ ಬಹಳ ಶಂಕೆಗಳಿವೆ. ಏಕೆಂದರೆ ಯಾವ ಸನ್ನಿವೇಶದಲ್ಲಿ ಜಪಾನು ಅಮೆರಿಕಾದೊಂದಿಗೆ ಸಹಕರಿಸಬೇಕು ಎಂಬುದನ್ನು ಪ್ರಬಲ ಮಿಲಿಟರಿ ಶಕ್ತಿಯಾದ ಅಮೆರಿಕಾ ನಿರ್ಧರಿಸುತ್ತದೆಯೇ ಹೊರತು ಜಪಾನಲ್ಲ, ಎರಡನೇ ಮಹಾಯುದ್ಧದ ನಂತರ ಇಂತಹ ಒಂದು ಸಕ್ರಿಯ ಮಿಲಿಟರಿ ಒಪ್ಪಂದಕ್ಕೆ ಜಪಾನು ಬದ್ಧವಾಗಿರುವುದು ಇದೆ ಮೊದಲು. ತಮ್ಮ ಮಿಲಿಟರಿ ಇತಿಹಾಸದ, ಎರಡು ಅಣು ಬಾಂಬುಗಳ ಕರಾಳ ನೆನಪು ಇನ್ನೂ ಬಾಧಿಸುತ್ತಿರುವ ಜಪಾನೀ ಜನಸಾಮಾನ್ಯರಲ್ಲಿ ಪರಮಾಣು ಶಸ್ತ್ರ-ವಿರೋಧಿ, ಶಾಂತಿ- ಪರ ಭಾವನೆಗಳು ಬಲವಾಗಿವೆ. ವಾಸ್ತವವಾಗಿ ಜಪಾನಿನ ಸಂವಿಧಾನದ ಕಲಮು 9 ಎಲ್ಲಾ ಯುದ್ಧ ಸಾಮರ್ಥ್ಯವನ್ನು ತ್ಯಜಿಸುವ, ಮಿಲಿಟರಿ ಖರ್ಚನ್ನು ಮಿತಿಗೊಳಿಸುವ ಅಂಶವನ್ನು ಹೊಂದಿದೆ. ಅರ್ಧ ಶತಮಾನದ ಕಾಲ ಯಾವುದೇ ಮಿಲಿಟರಿ ಚಟುವಟಿಕೆಯಿಂದ ದೂರವುಳಿದ, ಜಗತ್ತಿನ ಅತ್ಯಂತ ಬಲಿಷ್ಟ ಶಾಂತಿ ಆಂದೋಲನವನ್ನು ಹೊಂದಿರುವ ಜಪಾನ್ ದೇಶದ ಈಗಿನ ಎಲ್.ಡಿ.ಪಿ. ಸರಕಾರ ಇದನ್ನೆಲ್ಲಾ ಉಪೇಕ್ಷಿಸಿ ಈ ಒಪ್ಪಂದಕ್ಕೆ ಸಹಿ ಹಾಕಿರುವುದು ಜಪಾನಿನ ಸಾರ್ವಭೌಮತೆಯ ಮೇಲೆ ಒಂದು ತೀವ್ರ ಧಾಳಿ ಎಂದು ಜಪಾನೀ ಕಮ್ಯುನಿಸ್ಟ್ ಪಕ್ಷ ಬಗೆದಿದ್ದು ತನ್ನ ಈ ನಿಲುವಿಗೆ ಭಾರೀ ಜನ ಬೆಂಬಲ ದೊರೆಯುವುದೆಂದು ಅದು ನಿರೀಕ್ಷಿಸಿದೆ. ಕಮ್ಯುನಿಸ್ಟ್ ಪಕ್ಷ ಬಿಟ್ಟು ಬೇರೆಲ್ಲಾ ಪಕ್ಷಗಳು ಇದರಲ್ಲಿ ಆಳುವ ಪಕ್ಷ ಎಲ್.ಡಿ.ಪಿ.ಗೆ ಬೆಂಬಲ ನೀಡಿವೆ. ಈ ಒಪ್ಪಂದವನ್ನು ಸಂಸತ್ತಿನ ಮುಂದೆ ಚರ್ಚೆಗೆ ತರಬೇಕು ಎಂದು ಜಪಾನೀ ಕಮ್ಯುನಿಸ್ಟ್ ಪಕ್ಷ ಒತ್ತಾಯಿಸುತ್ತಿದೆ. ಜಪಾನಿ ಸಂವಿಧಾನದ ಪ್ರಕಾರ ಅಮೆರಿಕಾ-ಜಪಾನ್ ಭದ್ರತಾ ಒಪ್ಪಂದವನ್ನು ಒಂದು ವರ್ಷದ ನೋಟಿಸು ನೀಡಿ ರದ್ದು ಮಾಡಬಹುದು. ಈ ವಿಷಯದ ಮೇಲೆ ದೊಡ್ಡ ಪ್ರಮಾಣದಲ್ಲಿ ಜನಗಳನ್ನು ಅಣಿನೆರೆಸಲು ಜಪಾನಿ ಕಮ್ಯುನಿಸ್ಟ್ ಪಕ್ಷ ನಿರ್ಧರಿಸಿದೆ.

### ಸಮಾಜವಾದೀ ಜಪಾನಿನತ್ತ

ಜಪಾನೀ ಕಮ್ಯುನಿಸ್ಟ್ ಪಕ್ಷ ಈಗ ಸಮಾಜವಾದಿ ಜಪಾನಿನ ಸ್ಥಾಪನೆ ಎರಡು ಹಂತಗಳ ಪ್ರಕ್ರಿಯೆ ಎಂದು ಕಾಣುತ್ತದೆ. ಈಗಿನ ರಾಜಕೀಯ ಸನ್ನಿವೇಶದ ವಿಮರ್ಶೆ ಮಡುತ್ತಾ ಅದು ಈಗಿರುವ ರಾಜಕೀಯ ಸನ್ನಿವೇಶದಲ್ಲಿ ಮೂಲಭೂತ ಬದಲಾವಣೆಗಳನ್ನು ತರಬೇಕಾಗಿದೆ ಎಂದಿದೆ-ಇದು ತಕ್ಷಣ ಸಮಾಜವಾದೀ ಜಪಾನಿನ ಸ್ಥಾಪನೆಗಾಗಿ ಅಲ್ಲ, ಬಂಡವಾಳಶಾಹಿಯ ಚೌಕಟ್ಟಿನೊಳಗೇ ಒಂದು ಹೆಚ್ಚು ಪ್ರಜಾಸತ್ತಾತ್ಮಕವಾದ ಜಪಾನಿನ ಸ್ಥಾಪನೆಗಾಗಿ, ಇದರಲ್ಲಿ ಜನತೆ ಸಾರ್ವಭೌಮ ಅಧಿಕಾರ ಹೊಂದಿದ್ದು, ಒಂದು ಶಾಂತಿಯುತ, ಶ್ರೀಮಂತ, ಮಾನವ ಜೀವಿಗಳಿಗೆ ಯುಕ್ತವಾದ ಒಂದು ಸ್ವತಂತ್ರಜೀವನ ನಡೆಸುವಂತಾಗಬೇಕು. ಇದಕ್ಕಾಗಿ 1. ಜಪಾನ್-ಅಮೆರಿಕಾ ಭದ್ರತಾ ಸಂಧಿಯನ್ನು ರದ್ದು ಮಾಡಿ ಒಂದು ಪರಮಾಣು ರಹಿತ, ಅಲಿಪ್ತ, ತಟಸ್ತ ಜಪಾನು ಅಮೆರಿಕಾ ಮತ್ತು ಏಶ್ಯಾದ ದೇಶಗಳೊಂದಿಗೆ ನೈಜವಾದ ಮಿತ್ರತ್ವಪೂರ್ಣ ಸಂಬಂಧಗಳನ್ನು ಬೆಳೆಸಿ ವಿಶ್ವ ಶಾಂತಿಗೆ ಕಾಣಿಕೆ ನೀಡಬೇಕು. 2. ಜಪಾನಿನದ್ದು "ನಿಯಮಗಳಿಲ್ಲದ ಬಂಡವಾಳಶಾಹಿ" ಯೆಂಬ ವಿಶಿಷ್ಟ ಪರಿಸ್ಥಿತಿಯನ್ನು ಬದಲಿಸಿ ದೊಡ್ಡ ಬಂಡವಾಳಶಾಹಿಗಳು ಸಾಮಾಜಿಕ ಜವಾಬ್ದಾರಿಗಳನ್ನು ಈಡೇರಿಸುವಂತೆ, ಜನಗಳ ಜೀವನ ಪರಿಸ್ಥಿತಿಗಳಿಗೆ ಆದ್ಯತೆ ನೀಡುವಂತೆ ಮಾಡುವುದು ಹಾಗೂ 3. ಸಂವಿಧಾನವನ್ನು ಬದಲಿಸಿ ಮಿಲಿಟರಿ ಶಾಹಿಯನ್ನು ಮತ್ತೆ ಎಬ್ಬಿಸುವ ಪ್ರಯತ್ನಗಳನ್ನು ತಡೆಯಬೇಕು. ಎಲ್ಲಾ ರೀತಿಯ ಪ್ರಜಾಪ್ರಭುತ್ವ ಸಮೃದ್ಧಿಯಾಗಿದ್ದು ಜನಗಳನ್ನು ಜನಗಳಾಗಿ ಗೌರವಿಸುವ ಸನ್ನಿವೇಶ ಸೃಷ್ಟಿಸುವುದು-ಈ ಕಾರ್ಯಕ್ರಮದ ಆಧಾರದಲ್ಲಿ ಮುನ್ನಡೆದು ರಾಜಕೀಯ ವರ್ಗ ಬಲಾಬಲವನ್ನು ಬದಲಿಸಿ 21ನೇ ಶತಮಾನದ ಆರಂಭದಲ್ಲಿ ಸರಕಾರದ ಹೊಣೆ ಹೊರುವಂತಾಗಬೇಕು ಎಂಬುದು ಜಪಾನೀ ಕಮ್ಯುನಿಸ್ಟ್ ಪಕ್ಷದ ಕಣ್ನೋಟ.

ಇದಕ್ಕಾಗಿ ಬೇರೆ ರಾಜಕೀಯ ವಿರೋಧಿ ಪಕ್ಷಗಳೆಂಬುದೇ ಸುಮಾರಾಗಿ ಇಲ್ಲದಿರುವ ಜಪಾನಿನ ಸನ್ನಿವೇಶದಲ್ಲಿ ಜನಗಳ ವಿಭಿನ್ನ ರಾಜಕೀಯೇತರ ಸಂಘಟನೆಗಳು, ಸಂಘ-ಸಂಸ್ಥೆಗಳಲ್ಲಿ ಸಾಮೂಹಿಕ ಪ್ರಚಾರಾಂದೋಲನಗಳ ಮೂಲಕ ಜನಸಾಮಾನ್ಯರೊಂದಿಗೆ ಜಪಾನೀ ಕಮ್ಯುನಿಸ್ಟ್ ಪಕ್ಷದ ಸಂಬಂಧಗಳನ್ನು ಬೆಸೆಯಬೇಕು, ಮುನ್ನಡೆ ಸಾಧಿಸಬೇಕು ಎಂದು ಅದು ನಿರ್ಧರಿಸಿದೆ.

# ಚೀನಾದ ಕ್ರಾಂತಿಗೆ ಶುಭಾಶಯಗಳು!

ಸಿ.ನಂಜುಂಡಪ್ಪ

ಇದೇ 1997ರ ಅಕ್ಟೋಬರ್ 1ರಂದು 'ಚೀನದ ಪ್ರಜಾಸತ್ತಾತ್ಮಕ ಗಣತಂತ್ರವು' ತನ್ನ ಸ್ವಾತಂತ್ರ್ಯದ 43ನೆಯ ವಾರ್ಷಿಕೋತ್ಸವವನ್ನು ಆಚರಿಸಿದೆ. ಭಾರತವೂ ಸಹ ಈ ವರ್ಷದ ಆಗಸ್ಟ 15 ರಿಂದ ಒಂದು ವರ್ಷದ ಕಾಲ ತನ್ನ ಸ್ವಾತಂತ್ರ್ಯದ 50ನೆಯ ವಾರ್ಷಿಕೋತ್ಸವವನ್ನು ಆಚರಿಸುತ್ತಿದೆ. ಆದರೆ ಚೀನದ ಸ್ವಾತಂತ್ರ್ಯಕ್ಕೂ ಭಾರತದ ಸ್ವಾತಂತ್ರ್ಯಕ್ಕೂ ಮೂಲಭೂತ ವ್ಯತ್ಯಾಸವಿದೆ. ಭಾರತದಲ್ಲಿ ದೀರ್ಘಕಾಲದ ಸ್ವಾತಂತ್ರ್ಯ ಚಳುವಳಿ, ಅದರಲ್ಲಿ ಕಾರ್ಮಿಕ ವರ್ಗದ, ರೈತರ ಮಧ್ಯಮ ವರ್ಗದವರ ಪಾತ್ರ, ಬಂಡವಾಳಗಾರರ ನಾಯಕತ್ವ, ಜನಸಮೂಹವು ಸಮರಶೀಲ ಹೋರಾಟವನ್ನು ನಡೆಸುವಾಗ ಗಾಂಧೀಜಿಯವರು ಅದನ್ನು ಖಂಡಿಸಿದ್ದು ಇವೆಲ್ಲಾ ಗೊತ್ತಿರುವ ವಿಚಾರವೇ.

ಚೀನದ ಜನರು ಹತ್ತಾರು ವರ್ಷಗಳ ಕಾಲ ಸಶಸ್ತ ಹೋರಾಟವನ್ನು, ಯುದ್ಧವನ್ನು ಮಾಡಿದರು. ಇತಿಹಾಸದಲ್ಲಿ 'ಲಾಂಗ್ ಮಾರ್ಚ್' ಎಂದು ಪ್ರಸಿದ್ಧಿಪಡೆದಿರುವ, ಉದ್ದಕ್ಕೂ ಯುದ್ಧ ಮಾಡುತ್ತಾ ದೀರ್ಘ ಪಯಣವನ್ನೇ ಮಾಡಿದರು. ಚೀನದ ಸ್ವಾತಂತ್ರ್ಯ ಹೋರಾಟಕ್ಕೆ ನಾಯಕತ್ವವನ್ನು ಕೊಟ್ಟಿದ್ದು ಕಾರ್ಮಿಕ ವರ್ಗದ ಸಿದ್ಧಾಂತ.

ಬ್ರಿಟೀಷ್ ಸಾಮ್ರಾಜ್ಯಶಾಹಿಯು ಇಡೀ ಭಾರತವನ್ನು ತನ್ನ ವಸಾಹತನ್ನಾಗಿ ಆಕ್ರಮಿಸಿಕೊಂಡಿದ್ದಿತು. ಗೋವ, ಡಿಯು, ಡಾಮನ್‌ಗಳು ಪೋರ್ಚುಗೀಸ್ ವಸಾಹತುಶಾಹಿಗಳ ಸ್ವಾಧೀನವೂ, ಮಾಹೆ, ಕಾರೈಕಾಲ್, ಪಾಂಡಿಚೇರಿ, ಚಂದರ್ ನಗರ ಫ್ರೆಂಚ್ ವಸಾಹತುಶಾಹಿಗಳ ಸ್ವಾಧೀನವೂ ಇದ್ದವು.

ಆದರೆ ಚೀನವು ಯಾವ ಒಂದು ಸಾಮ್ರಾಜ್ಯಶಾಹಿಯ ವಸಾಹತುವೂ ಆಗಿರಲಿಲ್ಲ. ವಿವಿಧ ಸಾಮ್ರಾಜ್ಯಶಾಹಿಗಳು ಚೀನದ ವಿವಿಧ ಭಾಗಗಳನ್ನು ತಮ್ಮ ಪ್ರಭಾವೀವಲಯಗಳನ್ನಾಗಿ ಮಾಡಿಕೊಂಡು ವ್ಯವಹರಿಸುತ್ತಿದ್ದವು. ಚೀನವು ಅರೆ ವಸಾಹತು ಆಗಿದ್ದಿತು.

ಭಾರತವು 50 ವರ್ಷಗಳ ಹಿಂದೆ ಬ್ರಿಟೀಷ್ ಸಾಮ್ರಾಜ್ಯಶಾಹಿಗಳಿಂದ ರಾಜಕೀಯ ಅಧಿಕಾರವನ್ನು ಪಡೆದುಕೊಂಡ ನಂತರ ದೇಶದಲ್ಲಿ ಒಂದು ಬಂಡವಾಳಶಾಹಿ ಸಮಾಜವನ್ನು ನಿರ್ಮಿಸುವ ಉದ್ದೇಶದಿಂದ ಬಂಡವಾಳಶಾಹಿ ಬೆಳವಣಿಗೆಯ ಮಾರ್ಗವನ್ನು ಅನುಸರಿಸಿತು. ಅದರ ಪರಿಣಾಮವೇ ಬೆಳೆಯುತ್ತಾ ಬಂದಿರುವ ಬಡತನ, ನಿರುದ್ಯೋಗ, ಅನಕ್ಷರತೆ, ಹಿಂದುಳಿದಿರುವಿಕೆ, ಇನ್ನೊಂದು ಕಡೆ ಬೆಳೆಯುತ್ತಾ ಹೋಗಿರುವ ಶ್ರೀಮಂತರ ಐಶ್ವರ್ಯ.

ಚೀನದಲ್ಲಿ ಕಮ್ಯೂನಿಸ್ಟ್ ಪಕ್ಷವು ಸಶಸ್ತ ಕ್ರಾಂತಿಯ ಯಶಸ್ಸಿನ ನಂತರ ಆ ದೇಶದಲ್ಲಿ ಒಂದು ಸಮಾಜವಾದಿ ಸಮಾಜವನ್ನು ನಿರ್ಮಿಸಬೇಕೆಂದು ಸಮಾಜವಾದಿ ಬೆಳವಣಿಗೆಯ ಪಥವನ್ನು ಅನುಸರಿಸಿತು. ಅದರ ಪರಿಣಾಮ ದಾರಿದ್ರ್ಯವಿಲ್ಲ, ನಿರುದ್ಯೋಗವಿಲ್ಲ., ಅನಕ್ಷರತೆಯಿಲ್ಲ, ದೇಶದ ಸರ್ವಜನರ ಸರ್ವತೋಮುಖವಾದ ಬೆಳವಣಿಗ.

ಜಾಗತಿಕ ವರ್ಗ ಹೋರಾಟದಲ್ಲಿ 1990-91ರಲ್ಲಿ ಸಾಮ್ರಾಜ್ಯಶಾಹಿಗಳದು ಮೇಲ್ಕೈ ಆಗಿ ಪೂರ್ವಯೂರೋಪಿನ ಸಮಾಜವಾದಿ ದೇಶಗಳು ಮತ್ತು ಸೋವಿಯತ್ ಒಕ್ಕೂಟದಲ್ಲಿ ಪ್ರತಿಕ್ರಾಂತಿಗಳಾಗಿ ಸೋವಿಯತ್ ಒಕ್ಕೂಟವು ವಿಘಟನೆಯಾದನಂತರವೂ ಸಹ, "ಹೆಚ್ಚು ಪ್ರಜಾಪ್ರಭುತ್ವಕ್ಕಾಗಿ ವಿದ್ಯಾರ್ಥಿ ಚಳುವಳಿ" ಎಂಬ ಹೆಸರಲ್ಲಿ 'ಟಿಯನ್ ಆನ್ ಮೇನ್' ಘಟನೆಯನ್ನು ನಿಯಂತ್ರಿಸಿದ ಚೀನವು ದೃಢವಾಗಿ ಸಮಾಜವಾದಕ್ಕೆ ಬದ್ಧವಾಗಿರುವುದೂ ಸೇರಿದಂತೆ ಜನರ ಪ್ರಜಾಸತ್ತಾತ್ಮಕ ಸರ್ವಾಧಿಕಾರ, ಕಮ್ಯುನಿಸ್ಟ್ ಪಕ್ಷದ ನಾಯಕತ್ವ, ಮಾರ್ಕ್ಸ್‌ವಾದ-ಲೆನಿನ್ ವಾದ-ಮಾವೊ ತ್ಸೆ ತುಂಗರ ವಿಚಾರಧಾರೆಗಳನ್ನು ಎತ್ತಿ ಹಿಡಿಯಿತು.1987ರ ಅಕ್ಟೋಬರ್ ನಂತರ ಚೀನದ ಕ್ರಾಂತಿಯು ಪ್ರಪಂಚದ ಬಂಡವಾಳಶಾಹಿಗೆ ಪ್ರಪಂಚದ ಕಾಲು ಭಾಗದ ಜನರನ್ನು ಸುಲಿಗಗೆ ಮಾಡುವ ಅವಕಾಶವನ್ನು ನಿರಾಕರಿಸಿತು. ಜಾಗತಿಕ ಬಂಡವಾಳಶಾಹಿ ಮಾರುಕಟ್ಟೆ ಸಂಕುಚಿತವಾಗಿ ಅದರ ಬಿಕ್ಕಟ್ಟು ತೀವ್ರವಾಯಿತು. ತನ್ನ ಅರ್ಥವ್ಯವಸ್ಥೆಯ್ನ ಸಮಾಜವಾದಿ ಆಧುನೀಕರಣವನ್ನು ನಡೆಸಿತು. ಅದರ ಪರಿಣಾಮ ಇಂದು ಚೀನದ ಜಿ.ಡಿ.ಪಿ .(ಒಟ್ಟು ಆಂತರಿಕ ಉತ್ಪನ್ನದ)ಯ ಬೆಳವಣಿಗೆ 12% ಆಗಿದೆ. ಪ್ರಪಂಚದ ಯಾವ ದೇಶದಲ್ಲಿಯೂ ಈ ಪ್ರಮಾಣದ ಬೆಳವಣಿಗ ಇಲ್ಲದಿರುವಾಗ ಚೀನವು ಈ ವಿಚಾರದಲ್ಲಿ ಅಗ್ರಸ್ಥಾನದಲ್ಲಿದೆ.

ಇದರಿಂದ ಮಾನವ ಸಮಾಜದ ವಿಕಾಸದಲ್ಲಿ ಸಮಾಜವಾದವು ಬಂಡವಾಳವಾದಕ್ಕಿಂತಲೂ ಶ್ರೇಷ್ಠವಾದುದು ಎಂದು ಸಾಬೀತಾಗುವುದು.

ಕಳೆದ ಶತಮಾನದಲ್ಲಿ ಬ್ರಿಟೀಷ್ ವಸಾಹತುಶಾಹಿಗಳು ಚೀನಕ್ಕೆ ಅಫೀಮನ್ನು ತೆಗೆದುಕೊಂಡು ಹೋಗಿ ಚೀನೀಯರನ್ನು ಅಫೀಮಿನ ದಾಸರನ್ನಾಗಿ ಮಾಡಿ ತಮ್ಮ ಸುಲಿಗೆಯನ್ನು ನಡೆಸುತ್ತಿದ್ದರು ಇದರ ವಿರುದ್ಧವಾಗಿ ನಡೆದ ಯುದ್ಧವು ಅಫೀಮಿನ ಯುದ್ಧವೆಂದೇ ಹೆಸರಾಗಿದೆ.

ಇಂದೂ ಸಹ ಅಮೆರಿಕ ಸಂಯುಕ್ತ ಸಂಸ್ಥಾನಗಳ ಸಾಮ್ರಾಜ್ಯಶಾಹಿಯು ಚೀನದ ಮೇಲೆ ಆರ್ಥಿಕವಾಗಿ, ರಾಜಕೀಯವಾಗಿ ಅಧಿನಾಯಕತೆಯನ್ನು ಪಡೆಯಲು ಚೀನವನ್ನು ಹಿಮ್ಮೆಟ್ಟಿಸುವ ಪ್ರಯತ್ನವನ್ನು ಮಾಡುತ್ತಿದೆ. ಆದರೆ ಚೀನವು ಪ್ರಬಲವಾದ ಪ್ರತಿರೋಧವನ್ನು ವ್ಯಕ್ತಪಡಿಸುತ್ತಿದೆ.

ಚೀನಾದಲ್ಲಿ ಕ್ರಾಂತಿಯಾಗಿ ಜನರು ರಾಜಕೀಯ ಮತ್ತು ಆರ್ಥಿಕ ಸ್ವಾತಂತ್ರ್ಯವನ್ನು ಗಳಿಸಿದ್ದರೂ ಸಹ, ಫಾರ್ಮೋಸ್ (ಟ್ರೈವಾನ್), ಮಕಾವೊ ಇನ್ನೂ ಚೀನದ ಹೊರಗೇ ಇವೆ. ಈ ವರ್ಷದವರೆಗೆ ಹಾಂಗ್ ಕಾಂಗ್ ಚೀನದ ಹೊರಗೆ ಬ್ರಿಟಿಷ್ ಸಾಮ್ರಾಜ್ಯಶಾಹಿಯ ಸ್ವಾಧೀನದಲ್ಲಿದ್ದಿತು. ಈಗ ಹಾಂಗ್‌ಕಾಂಗ್ ಚೀನದ ಒಂದು ಭಾಗವಾಗಿದೆ. ಒಂದು ದೇಶ-ಎರಡು ಪದ್ಧತಿಗಳು ಎಂಬ ತತ್ವದ ಪ್ರಕಾರ ಹಾಂಗ್‌ಕಾಂಗ್‌ನಲ್ಲಿ ಮೊದಲಿದ್ದ ಬಂಡವಾಳಶಾಹಿ ಪದ್ಧತಿಯನ್ನೇ ಮುಂದುವರಿಯಲು ಬಿಡಲಾಗಿದೆ. ಇದು ಒಂದು ಹೊಸ ಪ್ರಯೋಗವೂ ಹೌದು.

1987ರ ಏಪ್ರಿಲಿನಲ್ಲಿ ಚೀನೀ ಮತ್ತು ಪೋರ್ಚುಗೀಸ್ ಸರ್ಕಾರಗಳು ಒಂದು ಜಂಟಿ ಘೋಷಣೆಗೆ ರುಜು ಮಾಡಿದವು. ಅದರ ಪ್ರಕಾರ ಚೀನದ ಸರ್ಕಾರವು 'ಮಕಾವೊ' ದ್ವೀಪದ ಮೇಲೆ ಸಾರ್ವಭೌಮತ್ವವನ್ನು ಸ್ಥಾಪಿಸುತ್ತದೆ.

ಟೈವಾನಿನೊಂದಿಗೆ ಸಂಬಂಧವನ್ನು ಕುದುರಿಸಿಕೊಳ್ಳುವ ಪ್ರಯತ್ನವು ನಡೆಯುತ್ತಿದೆ. 1996 ರಲ್ಲಿ ಟೈವಾನಿನ 17 ಲಕ್ಷ 20 ಸಾವಿರ ಜನರು ಚೀನದ ಒಳನಾಡಿನ ವಿವಿಧ ಭಾಗಗಳಿಗೆ ಭೇಟಿಕೊಟ್ಟರು. 1949 ರಿಂದಲೂ ಟೈವಾನಿಗೆ ಅಮೇರಿಕ ಸಂಯುಕ್ತ ಸಂಸ್ಥಾನಗಳ ಸಾಮ್ರಾಜ್ಯಶಾಹಿಯ ಕ್ರಿಯಾಶೀಲ ಬೆಂಬಲವಿದ್ದಿತು.

ಭಾರತ ಮತ್ತು ಚೀನಾಗಳ ನಡುವೆ ಸ್ನೇಹ ಸಂಬಂಧವು ಬೆಳೆಯುತ್ತಿದೆ.

ಚೀನದ ಕ್ರಾಂತಿಗೆ ಮತ್ತೂ ಯಶಸ್ಸನ್ನು ಹಾರೈಸೋಣ.

# ಜರ್ಮನಿಯಲ್ಲಿ ಮತ್ತೊಂದು ಹಗೆ ಸಾಧಕ ಕುಕೃತ್ಯ

ಬರ್ಲಿನ್ ಜಿಲ್ಲಾ ನ್ಯಾಯಾಲಯ ಹಿಂದೆ ಜರ್ಮನ್ ಪ್ರಜಾಸತ್ತಾತ್ಮಕ ಗಣತಂತ್ರ (GDR) ನ ಅಧ್ಯಕ್ಷರಾಗಿದ್ದ ಇದನ್ ಕ್ರೆಂರ್ಝ್ಸ್ ಹಾಗೂ ಇಬ್ಬರು ಪಾಲಿಟ್ ಬ್ಯೂರೋ ಸದಸ್ಯರಿಗೆ ಆರೂವರೆ ವರ್ಷಗಳ ಶಿಕ್ಷೆ ವಿಧಿಸಿದೆ. ಅವರ ಅಪರಾಧವೆಂದರೆ ತಮ್ಮ ಸರಕಾರದ ನಿರ್ಧಾರಗಳನ್ನು ಜಾರಿಗೆ ತಂದದ್ದು! ಆಗಿದ್ದ ಬರ್ಲಿನ್ ಗೋಡೆಯನ್ನು ದಾಟಿ ಪಶ್ಚಿಮ ಜರ್ಮನಿಗೆ ಪಲಾಯನ ಮಾಡುತ್ತಿದ್ದ ಕಾನೂನು ಬಾಹಿರ ಚಟುವಟಿಕೆಗಳಲ್ಲಿ ತೊಡಗಿದ್ದವರ ಮೇಲೆ ಗುಂಡುಹಾರಿಸಿದ 'ಅಪರಾಧ'ದ ಮೇಲೆ ಅವರಿಗೆ ಶಿಕ್ಷೆ ವಿಧಿಸಲಾಗಿದೆ.

ಇದನ್ನು ಬಲವಾಗಿ ಖಂಡಿಸುತ್ತಾ ಜರ್ಮನಿಯ ಪ್ರಜಾಸತ್ತಾತ್ಮಕ ಸಮಾಜವಾದಿ ಪಕ್ಷ "ಆಧುನಿಕ ಇತಿಹಾಸದಲ್ಲಿ ಮೊದಲ ಬಾರಿಗೆ ಒಂದು ಜರ್ಮನ್ ಪ್ರಭುತ್ವದ ಮಾಜಿ ಮುಖ್ಯಸ್ಥನ ಮೇಲೆ ತನ್ನ ಕಾರ್ಯಾಂಗದ ಜವಾಬ್ದಾರಿಗಳನ್ನು ನಿರ್ವಹಿಸಿದ್ದಕ್ಕಾಗಿ ಶಿಕ್ಷೆ ವಿಧಿಸಲಾಗಿದೆ- ಖಾಸಗೀ ಚಟುವಟಿಕೆಗಾಗಿ ಅಲ್ಲ. ಖಂಡಿತ ವಾಗಿಯೂ ವಿಶ್ವದ ಜನಗಳ ಮನದಲ್ಲಿ ಶಾಶ್ವತವಾಗಿ ನೆಲೆಯೂರಿರುವ (ಫ್ಯಾಸಿಸ್ಟ್) ಯುದ್ಧ ಪ್ರಯತ್ನಗಳು ಹಾಗೂ ಅಮಾನವೀಯತೆಗೂ ಇದಕ್ಕೂ ಏನೇನೂ ಸಂಬಂಧವಿಲ್ಲ. ವಾಸ್ತವವಾಗಿ ನಾಝಿಗಳ ಈ ಶತಮಾನ ಅಪರಾಧಕ್ಕೆ ಪ್ರತಿರೋಧ ಒಡ್ಡಿದ ಒಬ್ಬ ಮಾಜಿ ಪ್ರಭುತ್ವ ಮುಖ್ಯಸ್ಥನಿಗೆ ವಿಧಿಸಿರುವ ಈ ಶಿಕ್ಷೆಯ ಗಂಭೀರ ಪರಿಣಾಮಗಳನ್ನು ಈಗ ಪೂರ್ಣವಾಗಿ ಅಂದಾಜು ಮಾಡಲು ಸಾಧ್ಯವಿಲ್ಲ" ಎಂದು ಎಚ್ಚರಿಸಿದೆ

ಇಗಾನ್ ಕ್ರೆಂರಝ್‌ರವರು ವಿಚಾರಣೆಯ ಕಾಲದಲ್ಲಿ ನಿರ್ಭಯದಿಂದ "ಅಂಗರಕ್ಷಕರು ಹಾಗೂ ನನ್ನ ಬಂಧಿತ ಗೆಳೆಯರ ವಿರುದ್ಧ ನೀಡಿರುವ ತಪ್ಪು ತೀರ್ಪುಗಳನ್ನು ಬದಲಿಸುವವರೆಗೆ ನನ್ನನ್ನು ದೋಷಮುಕ್ತಗೊಳಿಸಿದರೆ ಅದು ನನಗೆ ನಾಚಿಕೆಯ ಸಂಗತಿ ಎಂದು ಬಗೆಯುತ್ತೇನೆ. ನಾನು ಜೈಲಿಗೆ ಹೋಗಲು ಸಿದ್ಧ, ಮೊಣಕಾಲೂರಿ ನನ್ನನ್ನು ಮಾರಿಕೊಳ್ಳಲು ಸಿದ್ಧವಿಲ್ಲ. ನನ್ನ ಆತ್ಮಗೌರವ ನನಗೆ ಬಹಳ ಪ್ರಿಯ" ಎಂದು ಹೇಳಿದರೆಂದು ನ್ಯೂಯಾರ್ಕ್ ಟೈಮ್ಸ್ ಪತ್ರಿಕೆ ವರದಿ ಮಾಡಿದೆ.

ಶಿಕ್ಷೆಗೊಳಗಾದ ಇತರ ಎರಡು ಪೊಲಿಟ್‌ಬ್ಯೂರೋ ಸದಸ್ಯರೆಂದರೆ ಗುಂಥರ್ ಕಬೊವ್‌ಸ್ಕಿ ಹಾಗೂ ಗುಂಥೆರ್ ಶೈಬರ್. ಇವರು ಮೂವರೂ ಈ ತೀರ್ಪಿನ ವಿರುದ್ಧ ಜರ್ಮನಿಯ ಸಂವಿಧಾನ ನ್ಯಾಯಾಲಯಕ್ಕೆ, ಅದು ತಿರಸ್ಕರಿಸಿದರೆ ಫ್ರಾನ್ಸಿನಲ್ಲಿರುವ ಮಾನವ ಹಕ್ಕುಗಳ ಯುರೋಪಿಯನ್ ನ್ಯಾಯಾಲಯಕ್ಕೆ ಅಪೀಲು ಸಲ್ಲಿಸುವ ಯೋಚನೆಯಲ್ಲಿದ್ದಾರೆ.

(ಐ.ಎನ್.ಎಸ್.)

## ಸಾರ್ವಜನಿಕ ವಲಯದ ರಕ್ಷಣೆಗಾಗಿ

# ಎರಡು ದಿನಗಳ ಮುಷ್ಕರಕ್ಕೆ ಸಿದ್ಧತೆ

ಸಪ್ಟೆಂಬರ್ 19-20 ರಂದು ನವದೆಹಲಿಯಲ್ಲಿ ಸಭೆ ಸೇರಿದ ಸಾರ್ವಜನಿ ಕಾರ್ಮಿಕ ಸಂಘಗಳ ಸಮಿತಿ ಸಿ.ಪಿ.ಎಸ್.ಟಿ.ಯು. ಸಾರ್ವಜನಿಕ ವಲಯದ ಕಾರ್ಯನಿರ್ವಹಣೆಯನ್ನು ಸುಧಾರಿಸಲು ತಾನು ಬದ್ಧ ಎಂದು ಪುನರುಚ್ಚರಿಸುತ್ತಾ ಸರಕಾರದ ಸಾರ್ವಜನಿಕ ವಲಯ ವಿರೋಧಿ ನೀತಿಗಳನ್ನು ಸೋಲಿಸಲು ಹಾಗೂ ಸಾರ್ವಜನಿಕ ವಲಯದ ಕಾರ್ಮಿಕರ ದೀರ್ಘಕಾಲದಿಂದ ಪರಿಹಾರ ಕಾಣದ ತುರ್ತು ಪ್ರಶ್ನೆಗಳ ಈಡೇರಿಕೆಗಾಗಿ ಪ್ರಚಾರ, ಚಳುವಳಿ ಹಾಗೂ ಕಾರ್ಯಾಚರಣೆಯ ಒಂದು ಕಾರ್ಯಕ್ರಮವನ್ನು ಅಂಗೀಕರಿಸಿದೆ.

ದೇಶದ ಎಲ್ಲಾ ಸಾರ್ವಜನಿಕ ವಲಯದ ಉದ್ದಿಮೆಗಳಿಂದ 125 ಪ್ರಮುಖ ಪ್ರತಿನಿಧಿಗಳು ಈ ಸಭೆಯಲ್ಲಿ ಭಾಗವಹಿಸಿದ್ದರು. ಸಿಐಟಿಯುನ ಪಿ.ಕೆ.ಗಂಗೂಲಿ, ಎಐಟಿಯುಸಿಯ ಪಿ.ನಾಗೇಶ್ವರ ರಾವ್, ಹೆಚ್.ಎಂ.ಎಸ್.ನ ಎ.ಡಿ.ನಾಗಪಾಲ್, ಬೆಂಗಳೂರು ಜೆ.ಎ.ಎಫ್.ನ ಮೈಕೆಲ್ ಫರ್ನಾಂಡೀಸ್ ಹಾಗೂ ಹೈದರಾಬಾದಿನ ಸಮನ್ವಯ ಸಮಿತಿಯ ಜಿ.ನರಸಿಂಹರಾವ್ ಇದ್ದ ಅಧ್ಯಕ್ಷ ಮಂಡಳಿ ನಡೆಸಿಕೊಟ್ಟ ಸಭೆಯ ಆರಂಭದಲ್ಲಿ ಮಂಡಿಸಿದ ಹಿನ್ನೆಲೆ ಪ್ರಬಂಧದ ಆಧಾರದಲ್ಲಿ 30 ಕ್ಕೂ ಹೆಚ್ಚು ಮಂದಿ ಚರ್ಚೆಯಲ್ಲಿ ಭಾಗವಹಿಸಿದರು.

**ತುರ್ತು ಬೇಡಿಕೆಗಳು**

ಸಭೆಯಲ್ಲಿ ಪರಿಶೀಲಿಸಿದ ಸಾರ್ವಜನಿಕ ವಲಯದ ಕಾರ್ಮಿಕರ ತುರ್ತುಪ್ರಶ್ನೆಗಳು ಹೀಗಿವೆ -

1. ಎಲ್ಲಾ ರೋಗಗ್ರಸ್ತ ಸಾರ್ವಜನಿಕ ವಲಯದ ಘಟಕಗಳನ್ನು ತ್ವರಿತವಾಗಿ ಪುನರುಜ್ಜೀವನಗೊಳಿಸುವುದು - ಸರಕಾರ ಇದನ್ನು ಪ್ರೋತ್ಸಾಹಿಸಿ, ಅಗತ್ಯ ಹಣಕಾಸು ನೆರವನ್ನು ಕೊಡಬೇಕು.
2. ಸಂಸತ್ತಿನಲ್ಲಿ ಮಂಡಿಸಿರುವ SICA ತಿದ್ದುಪಡಿ ಕಾನೂನನ್ನು ರದ್ದು ಮಾಡುವುದು.
3. ಬಿ.ಐ.ಎಫ್.ಆರ್.ನ ಮುಂದಿಟ್ಟ ಸಾರ್ವಜನಿಕ ವಲಯದ ಘಟಕಗಳಲ್ಲಿ ವೇತನ ಪರಿಷ್ಕರಣ ಹಾಗೂ ಸ್ಲಾಬ್ ಪದ್ಧತಿಯಂತೆ ಪಿ.ಡಿ.ಎ. ಪಾವತಿಯ ಮೇಲೆ ಹಾಕಿರುವ ನಿರ್ಬಂಧವನ್ನು ಹಿಂತೆಗೆದು ಕೊಳ್ಳಬೇಕು.
4. ಈಗಾಗಲೇ ಹಿಂದಿನ ವೇತನ ಒಪ್ಪಂದಗಳ ಅವಧಿ ಮುಗಿದಿರುವಲ್ಲಿ ಯಾವುದೇ ಪೂರ್ವ ಶರತ್ತುಗಳಿಲ್ಲದೆ ತಕ್ಷಣ ಮಾತುಕತೆಗಳನ್ನು ಆರಂಭಿಸುವಂತೆ ಮುತುವರ್ಜಿ.
5. ಸಾರ್ವಜನಿಕ ವಲಯದ ಘಟಕಗಳ ಖಾಸಗೀಕರಣ ಸಲ್ಲದು.
6. ಸಾರ್ವಜನಿಕ ವಲಯ ಘಟಕಗಳ ಶೇರುಗಳ ಮಾರಾಟ ನಿಲ್ಲಿಸಬೇಕು. ಶೇರು ಮಾರಾಟ ಆಯೋಗವನ್ನು ರದ್ದು ಮಾಡಬೇಕು.
7. ಶಾಶ್ವತ ಸ್ವರೂಪದ ಕೆಲಸಗಳಲ್ಲಿ ಕಾಂಟ್ರಾಕ್ಟ್ ಕಾರ್ಮಿಕರ ನೇಮಕ ಸಲ್ಲದು. ನಿಯಮಿತ ಕೆಲಸಗಳಲ್ಲಿ ಕಾಂಟ್ರಾಕ್ಟ್ ಕಾರ್ಮಿಕರನ್ನು ಖಾಯಂಗೊಳಿಸಬೇಕು.
8. ಬೋನಸ್ ಪಾವತಿ ಕಾನೂನನ್ನು ತಿದ್ದುಪಡಿ ಮಾಡಿ ಬೋನಸ್ ಮೇಲಿನ ಮಿತಿಯನ್ನು ತೆಗೆಯಬೇಕು. ಆದಾಯ ತೆರಿಗೆ ವಿನಾಯ್ತಿಯ ಮಿತಿಯನ್ನು ಏರಿಸಬೇಕು.
9. ಗ್ರಾಚ್ಯುಟಿಯ ಮೇಲಿನ ಮಿತಿಯನ್ನು 3.5 ಲಕ್ಷಕ್ಕೆ ಏರಿಸಬೇಕು
10. ಇ.ಎಸ್.ಐ. ಸೌಲಭ್ಯದ ವಿಸ್ತರಣೆಯ ಹೆಸರಲ್ಲಿ ಕಡಿತ ಮಾಡಬಾರದು/ಹಿಂತೆಗೆದು ಕೊಳ್ಳಬಾರದು. ಸಂಬಳದಿಂದ ಈ ಬಗ್ಗೆ ಮುರಕೊಳ್ಳಬಾರದು.
11. ಭವಿಷ್ಯ ನಿಧಿ ಯೋಜನೆಯಿಂದ ಹಣವನ್ನು ಕಡ್ಡಾಯವಾಗಿ ಪಡೆಯದೇ ಪ್ರತ್ಯೇಕವಾದ ಪೆನ್ಶನ್ ಯೋಜನೆಗಳನ್ನು ರೂಪಿಸಲು ಸಾರ್ವಜನಿಕ ವಲಯದ ಘಟಕಗಳಿಗೆ ಅವಕಾಶ ಕೊಡಬೇಕು.

**ನೇರ ಕಾರ್ಯಾಚರಣೆಯ ಕಾರ್ಯಕ್ರಮ**

ಈ ಬೇಡಿಕೆಗಳ ಈಡೇರಿಕೆಗಾಗಿ ಸಂಸತ್ತಿನ ಬಜೆಟ್ ಅಧಿವೇಶನದ ವೇಳೆಗೆ ಎಲ್ಲಾ ಸಾರ್ವಜನಿಕ ವಲಯದ ಉದ್ದಿಮೆಗಳ ಕಾರ್ಮಿಕರು ಎರಡು ದಿನಗಳ ಮುಷ್ಕರ ನಡೆಸಬೇಕು ಎಂದು ಈ ಸಭೆ ಕರೆ ನೀಡಿದೆ.

ಈ ಮುಷ್ಕರಕ್ಕೆ ಸಿದ್ಧತೆಯಾಗಿ ಈ ಕೆಳಗಿನ ಪ್ರಚಾರ-ಪ್ರಕ್ಷೋಭೆ, ಚಳುವಳಿಗಳನ್ನು ನಡೆಸಬೇಕು ಎಂದು ಸಭೆ ನಿರ್ಧರಿಸಿತು.

1. ಅಕ್ಟೋಬರ್ ಮೊದಲ ವಾರದಲ್ಲಿ ಸಿಪಿಎಸ್‌ಟಿಯು - ಸಭೆಯ ನಿರ್ಣಯ ಗಳನ್ನು ವಿವರಿಸುವ ಗೇಟ್ ಮೀಟಿಂಗ್‌ಗಳು.
2. ಅಕ್ಟೋಬರ್ ಕೊನೆಯ ವಾರದಿಂದ ನವಂಬರ್ ಮೊದಲ ವಾರದವರೆಗೆ ಘಟಕಗಳ ಮಟ್ಟದಲ್ಲಿ ಜಂಟಿ ಸಮಾವೇಶ ಗಳು ಹಾಗೂ ಬೃಹತ್ ಮತ ಪ್ರದರ್ಶನಗಳು.
3. ಶೇರು ಮಾರಾಟ ಆಯೋಗದಲ್ಲಿ ನಮೂದಿಸಿದ ಉದ್ದಿಮೆಗಳ ಕಾರ್ಮಿಕ ಸಂಘಗಳ ರಾಷ್ಟ್ರೀಯ ಸಭೆ-ಬೆಂಗಳೂರಿನಲ್ಲಿ ಕಾರ್ಯಕ್ರಮವನ್ನು ಎಲ್ಲಾ ಕೇಂದ್ರ ಕಾರ್ಮಿಕ ಸಂಘಗಳ ಆಶ್ರಯದಲ್ಲಿ ನಡೆಸಬಹುದು)
4. ನವೆಂಬರ್ - ಡಿಸೆಂಬರ್ ತಿಂಗಳುಗಳಲ್ಲಿ ರಾಜ್ಯಗಳ ರಾಜಧಾನಿಗಳಲ್ಲಿ ಹಾಗೂ ಪ್ರಮುಖ ಸಾರ್ವಜನಿಕ ವಲಯದ ಘಟಕಗಳ ಕೇಂದ್ರಗಳಲ್ಲಿ ರಾಜ್ಯ/ಪ್ರಾದೇಶಿಕ ಮಟ್ಟದ ಜಂಟಿ ಸಮಾವೇಶಗಳು.
5. ಜನವರಿ 6, 1998 ರಂದು ಬ್ಯಾಡ್ಜ್ ಧಾರಣೆ, ಮತಪ್ರದರ್ಶನ, ಮೆರವಣಿಗೆಗಳ ಮೂಲಕ 'ಸಾರ್ವಜನಿಕ ವಲಯ ರಕ್ಷಿಸಿ ದಿನ'ದ ಆಚರಣೆ.
6. ಜನವರಿ 27, 1998 ರಾಜಭವನಗಳ ಮುಂದೆ ದಿನವಿಡೀ ಧರಣೆ-ರಾಜ್ಯಪಾಲರುಗಳಿಗೆ ಮನವಿ ಸಲ್ಲಿಕೆ (ಮನವಿಯ ಕರಡನ್ನು ಸಿಪಿಎಸ್‌ಟಿಯು ಸಿದ್ಧಪಡಿಸಲಿದೆ)

ರಾಜ್ಯಗಳ ರಾಜ್ಯಧಾನಿಗಳಿಂದ ದೂರ ವಿರುವ ಎಲ್ಲಾ ಪ್ರಮುಖ ಸಾರ್ವಜನಿಕ ವಲಯದ ಕೇಂದ್ರಗಳಲ್ಲೂ ಧರಣೆ.

ಸಿಪಿಎಸ್‌ಟಿಯುನ ಉನ್ನತ ಗುಂಪಿನ ವಿಸ್ತೃತ ಸಭೆ ಡಿಸೆಂಬರ್ ಕೊನೆಯ ವಾರದಲ್ಲಿ ಸಭೆ ಸೇರಿ ಮುಷ್ಕರದ ದಿನಾಂಕಗಳನ್ನು ನಿರ್ಧರಿಸುವುದಲ್ಲದೇ ಫೆಬ್ರವರಿ ಮಾರ್ಚ್ ತಿಂಗಳಲ್ಲಿ ನಡೆಸಬೇಕಾದ ಕಾರ್ಯಕ್ರಮಗಳನ್ನೂ ನಿರ್ಧರಿಸುತ್ತದೆ.

**ರಸಗೊಬ್ಬರ ಕಾರ್ಮಿಕರ ಮುಷ್ಕರಕ್ಕೆ ಬೆಂಬಲ**

ನವೆಂಬರ್ 11 ರಂದು ಭಾರತ ರಸಗೊಬ್ಬರ ನಿಗಮ ಮತ್ತು ಹಿಂದುಸ್ತಾನ್ ರಸಗೊಬ್ಬರ ನಿಗಮದ ಕಾರ್ಮಿಕರ ಮುಷ್ಕರಕ್ಕೆ ಬೆಂಬಲ ವ್ಯಕ್ತಪಡಿಸಿರುವ ಸಿ.ಪಿ.ಎಸ್.ಟಿ.ಯು. ಆ ದಿನ ರಸಗೊಬ್ಬರ ಕಾರ್ಮಿಕರ ಮುಷ್ಕರಕ್ಕೆ ಸಕಲ ಬೆಂಬಲ ನಾಡಬೇಕು., ಬಿ.ಐ.ಎಫ್. ಆರ್. ಮುಂದಿಟ್ಟಿರುವ ರಸಗೊಬ್ಬರ ಘಟಕಗಳನ್ನು ಪುನರುಜ್ಜೀವನ ಗೊಳಿಸಬೇಕು ಎಂಬ ಒಕ್ಕಣೆಯಿರುವ ತಂತಿ ಸಂದೇಶಗಳನ್ನು ಎಲ್ಲಾ ಸಾರ್ವಜನಿಕ ವಲಯದ ಕಾರ್ಮಿಕ ಸಂಘಗಳು ಪ್ರಧಾನ ಮಂತ್ರಿಗಳಿಗೆ ಕಳಿಸಬೇಕು ಎಂದೂ ನಿರ್ಧರಿಸಲಾಯಿತು.

ಈ ಎಲ್ಲಾ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಿ ದೇಶವ್ಯಾಪಿ ಮುಷ್ಕರಕ್ಕೆ ಸಿದ್ಧತೆ ನಡೆಸಿ ಸಾರ್ವಜನಿಕ ವಲಯವನ್ನು ರಕ್ಷಿಸಬೇಕು ಹಾಗೂ ಆ ಮೂಲಕ ದೇಶದ ಸ್ವಾವಲಂಬೀ ಅಭಿವೃದ್ಧಿಯನ್ನು ಹಾಗೂ ಕಾರ್ಮಿಕರ ಕಲ್ಯಾಣವನ್ನು ಬಲಪಡಿಸಬೇಕು ಎಂದು ಸಿಪಿಎಸ್‌ಟಿಯು ಎಲ್ಲಾ ಸಾರ್ವಜನಿ ವಲಯದ ಕಾರ್ಮಿಕರಿಗೆ ಮನವಿ ಮಾಡಿದೆ. ○



## ಭಾರತೀಯ ವಿಮೋಚನಾ ಸಮರ

ಪುಟ 4 ರಿಂದ

ಭೇಟಿಯಿತ್ತಿದ್ದ ವೈಸರಾಯ್ ಲಾರ್ಡ್ ಮೇಯೋನನ್ನು ಇರಿದು ಕೊಂದ. ಆತನಿಗೆ ಮರಣದಂಡನೆ ವಿಧಿಸಿದಾಗ ಆತ ಸಾರಿದ -"ನನಗೆ ಇನಿತೂ ಬೇಸರವಿಲ್ಲ, ನಿಜವಾದ ಪಠಾಣನಂತೆ ಸಾವನ್ನು ಎದುರಿಸುತ್ತೇನೆ. ನನಗೆ ಹೆಮ್ಮೆಯೆನಿಸುತ್ತದೆ"

**ಪಾಬ್ನಾ ದಂಗೆ (1873)** ಉತ್ತರ ಬಂಗಾಲದ ಪಾಬ್ನಾದಲ್ಲಿ ಜಮೀನುದಾರರು ಗೇಣಿ ವಿಪರೀತ ಹೆಚ್ಚಿಸಿದಾಗ ಕೃಷಿಕ ಸಮಿತಿಗಳನ್ನು ರಚಿಸಿಕೊಂಡು ರೈತರು ಗೇಣಿ ಹಕ್ಕುಗಳಿಗಾಗಿ ಹೋರಾಟಕ್ಕಿಳಿದರು. ಕೊನೆಗೂ 1875 ರಲ್ಲಿ ಬ್ರಿಟಿಶ್ ಸರ್ಕಾರ ಭಾಗಶಃವಾದರೂ ರೈತರ ಹಕ್ಕುಗಳನ್ನು ಮಾನ್ಯ ಮಾಡುವ ಶಾಸನವನ್ನು ತರಬೇಕಾಯಿತು. **ಮಹಾರಾಷ್ಟ್ರದಲ್ಲಿ** 1874-75, 1878-79) **ಆಂಧ್ರದ ರಾಂಪಾಲ್ಲಿ**(1879-80) ಕೂಡಾ ರೈತ ಬಂಡಾಯಗಳು ನಡೆದವು.



1879 ರಲ್ಲಿ ಮಹಾರಾಷ್ಟ್ರದಲ್ಲಿ ಸರಕಾರೀ ನೌಕರನಾಗಿದ್ದ ವಸುದೇವ್ ಬಲವಂತ ಫಡ್ಕೆ 300 ಬುಡಕಟ್ಟು ಹಾಗೂ ಮುಸ್ಲಿಂ ಯುವಜನರನ್ನು ಸಂಘಟಿಸಿ ಮೊದಲು ಲೇವಾದೇವಿದಾರರು, ನಂತರ ಬ್ರಿಟಿಶರ ವಿರುದ್ಧ ದಂಗೆಯೆದ್ದು ಯಶಸ್ವಿ ಗೆರಿಲ್ಲಾ ಯುದ್ಧ ನಡೆಸಿದ. 1880 ರಲ್ಲಿ ಆತನನ್ನು ಬಂಧಿಸಿ ಏಡನ್‌ಗೆ ಗಡೀಪಾರು ಮಾಡಲಾಯಿತು. ಅಲ್ಲಿ ವಿಪರೀತ ಚಿತ್ರಹಿಂಸೆಯಿದಾಗಿ ತನ್ನ 35ನೇ ವಯಸ್ಸಿನಲ್ಲಿ 1883 ರಲ್ಲಿ ಜೀವ ತೆತ್ತ. "ನನ್ನ ಗುರಿಯಿದ್ದದ್ದು ಬ್ರಿಟಿಶರನ್ನು ಹೊಡೆದೋಡಿಸಿ ಒಂದು ಸ್ವತಂತ್ರ ಭಾರತೀಯ ಗಣತಂತ್ರವನ್ನು ಸ್ಥಾಪಿಸುವುದು. ದೇಶಬಾಂಧವರೇ, ಇದರಲ್ಲಿ ನಾನು ವಿಫಲನಾದೆ. ನನ್ನನ್ನು ಕ್ಷಮಿಸಿ" ಎಂದು ವಿಚಾರಣೆಯ ಕಾಲದಲ್ಲಿ ಆತ ಹೇಳಿದ.



1891 ರಲ್ಲಿ ಈಶಾನ್ಯದಲ್ಲಿ ಮಣಿಪುರದಲ್ಲಿ **ತಿಕೇಂದ್ರಜಿತ್** ನೇತೃತ್ವದಲ್ಲಿ ಬ್ರಿಟಿಶ್ ವಿರೋಧಿ ಬಂಡಾಯ ನಡೆಯಿತು. ಆದರೆ ಅದು ವಿಫಲವಾಗಿ ತಿಕೇಂದ್ರಜಿತ್‌ನನ್ನು ಗಲ್ಲಿಗೇರಿಸಲಾಯಿತು. ವಾಯುವ್ಯ ಭಾರತದಲ್ಲಿ ಪಠಾಣರು 1890 ರ ದಶಕವಿಡೀ ಬ್ರಿಟಿಶರ ವಿರುದ್ಧ ಸೆಣಸಾಡಿದರು.

**ಮುಂಡಾ ಬುಡಕಟ್ಟು ಜನರ ದಂಗೆ:** ಬಿಹಾರದ ರಾಂಚಿ, ಚೈಬಾಸಾ, ಛೋಟಾನಾಗ್ಪುರಗಳಲ್ಲಿ ಭೂ ಮಾಲಕರು, ಲೇವಾದೇವಿದಾರರು, ಮಿಶನರಿಗಳು, ಸರ್ಕಾರಿ ಅಧಿಕಾರಿಗಳು, ಎಲ್ಲಕ್ಕೂ ಹೆಚ್ಚಾಗಿ ಯುರೋಪಿಯನ್ ಅಧಿಕಾರಿಗಳು ಬಡ ಬುಡಕಟ್ಟುಜನಗಳ ನಿರ್ದಯ ದಮನ ನಡೆಸಿದ್ದರು. ಇದನ್ನು ಪ್ರತಿಭಟಿಸಿ ಮುಂಡ ಬುಡಕಟ್ಟಿನ ಒಬ್ಬ ಬಡ ವ್ಯಕ್ತಿ ಬಿರ್ಸಾ ಭಗವಾನ್ ಮುಂಡಾ ಆಂದೋಲನ ಪ್ರಾರಂಭಿಸಿದ. 1895 ರಲ್ಲಿ ಬ್ರಿಟಿಶರು ಆತನನ್ನು ಬಂಧಿಸಿ ಎರಡು ವರ್ಷಗಳ ಶಿಕ್ಷೆ ವಿಧಿಸಿದರು. ಬಿಡುಗಡೆಯಾದ ಮೇಲೆ ಮತ್ತೆ ಬಿರ್ಸಾ ತನ್ನ ಚಳುವಳಿಯನ್ನು ಮುಂದುವರಿಸಿದ. 1889-90 ರಲ್ಲಿ ಮುಂಡಾ ಬಂಡಾಯ ತೀವ್ರಗೊಂಡಿತು. ಬ್ರಿಟಿಶರು ಒಂದು ದೊಡ್ಡ ಸೇನಾ ತುಕಡಿಯನ್ನೇ ತಂದು ಆತನನ್ನು ಬಂಧಿಸಿದರು. 4 ತಿಂಗಳ ನಂತರ ಜೈಲಿನಲ್ಲೇ ಆತ ಸಾವನ್ನಪ್ಪಿದ. ಬಹುಶಃ ವಿಷ ಹಾಕಿ ಕೊಂದಿರಬಹುದೆಂಬ ಸಂದೇಹವಿದೆ. ಬ್ರಿಟಿಶ್ ಜೇಲಿನಲ್ಲಿ ಎಷ್ಟೊಂದು ಬುಡಕಟ್ಟು ಜನ ಸತ್ತರು, ಎಷ್ಟು ಜನರನ್ನು ಗುಂಡಿಕ್ಕಿ ಕೊಂದರು ಎಂಬುದರ ಲೆಕ್ಕವೇ ಸಿಕ್ಕಿಲ್ಲ.



ಈ ಎಲ್ಲಾ ಬಂಡಾಯಗಳು ಸ್ವಯಂ ಸ್ಫೂರ್ತಿಯಿಂದ ಸೀಮಿತ ಪ್ರದೇಶಗಳಲ್ಲಿ ನಡೆದ ದಂಗೆಗಳು. ಈ ದಂಗೆಗಳ, ಬಂಡಾಯಗಳ ಜೊತೆಗೇ ಹೊಸ ರಾಜಕೀಯ ಶಕ್ತಿಗಳು ಮೂಡಿ ಬರುತ್ತಿದ್ದವು. ಹೊಸ ಸಂಸ್ಥೆಗಳು ರಚನೆಗೊಳ್ಳುತ್ತಿದ್ದವು. ರಾಷ್ಟ್ರೀಯ ವಿಮೋಚನೆಗೆ ಒಂದು ದೇಶವ್ಯಾಪಿ ಆಂದೋಲನ ಉದಯವಾಗುತ್ತಿತ್ತು.

(ಮುಂದುವರಿಯುವುದು)

## .... ಮೊದಲ ಹಾಗೂ ಏಕೈಕ ಪ್ರತಿಪಕ್ಷ ನಾಯಕ

ಪುಟ 4 ರಿಂದ

ಸಮೂಹವಾಗುಳಿಯದೆ ಅವರೆಲ್ಲಾ ಸ್ವಾರ್ಥಪರ ಆಳರಸರಾಗಿ ಪರಿವರ್ತನೆಗೊಂಡರು. ತಾನು ನೇತೃತ್ವ ವಹಿಸಿದ ಕಾಂಗ್ರೆಸ್ ಕ್ರಿಮಿನಲ್‌ಗಳ, ವಂಚಕರ ತಂಡವಾಗಬಹುದು, ಕ್ರಿಮಿನಲ್ ಮೊಕದ್ದಮೆಗಳಲ್ಲಿ ನ್ಯಾಯಾಲಯದಲ್ಲಿ ಕಟಕಟೆಗಳಲ್ಲಿ ಆಪಾದನೆ ಹೊತ್ತು ನಿಲ್ಲಬಹುದು ಎಂದು ಆ ಸಂತ ಮಹಾತ್ಮ ಎಂದೂ ಕನಸಿನಲ್ಲೂ ಎಣಿಸಿರಲಿಕ್ಕಿಲ್ಲ ಎನ್ನುತ್ತಾ "ಸ್ವಾತಂತ್ರ್ಯದ ಈ 50ನೇ ವಾರ್ಷಿಕೋತ್ಸವದ ವರ್ಷದಲ್ಲಿ 'ಗಾಂಧಿವಾದ ಜಯಶಾಲಿಯಾಗಿದೆ' ಎಂದು ಎನ್ನುತ್ತಾರೆ ಅವರ ಅನುಯಾಯಿಗಳೆಂದು ಹೇಳಿಕೊಳ್ಳುವವರು. ಆದರೆ ವಾಸ್ತವಿಕವಾಗಿ ನಾವು ಕಾಣುತ್ತಿರುವುದು ಗಾಂಧೀಜಿಯ ನೈತಿಕ ಮತ್ತು ರಾಜಕೀಯ ನೀತಿಗಳ ಸೋಲನ್ನು" ಎಂದು ಇ.ಎಂ.ಎಸ್. ಅಭಿಪ್ರಾಯ ಪಡುತ್ತಾರೆ.

**ಬೂರ್ಜ್ವಾ ರಾಜಕಾರಣಿಯೋ, ಸಂತನೋ?**

ಕಳೆದ ಐವತ್ತು ವರ್ಷಗಳ ಅನುಭವದಿಂದ ಕಲಿಯಬೇಕಾದ ಪಾಠ ಎಂದರೆ ಮಹಾತ್ಮಗಾಂಧೀಜಿಯ ಬೂರ್ಜ್ವಾ ರಾಜಕಾರಣಿಯ ವ್ಯಕ್ತಿತ್ವ ಮತ್ತು ಸಂತ ಸ್ವರೂಪದ ವ್ಯಕ್ತಿತ್ವ ಇವೆರಡರಲ್ಲಿ ಮೂಲಭೂತ ವ್ಯತ್ಯಾಸವಿದೆ. ಬೂರ್ಜ್ವಾ ರಾಜಕಾರಣಿಯಾಗಿ ಅವರು ಭಾರತದ ಬಂಡವಾಳಶಾಹಿ-ಭೂಮಾಲಕರಿಗೆ ನೇತೃತ್ವ ನೀಡಿ ಅವರು ಈಗ ಪಡೆದಿರುವ ಆಳುವ ವರ್ಗದ ಸ್ಥಾನಮಾನವನ್ನು ಕೊಡಿಸಿದರು. ಅಷ್ಟರ ಮಟ್ಟಿಗೆ ಅವರ ಜೀವನದ ಗುರಿ ವಿಜಯಶಾಲಿಯಾಯಿತು.

ಆದರೆ ಸಂತನಾಗಿ ಸ್ವತಃ ತನಗೆ ಹಾಗೂ ತನ್ನ ನೀತಿಗಳ ಮಟ್ಟಿಗೆ ಸ್ವಾತಂತ್ರ್ಯ ಹೋರಾಟಕ್ಕೆ ತಾನು ನೀಡಿದ ನೇತೃತ್ವದ ಅರ್ಥವಾದರೂ ಏನು ಎಂದು ಅವರು ಆಶ್ಚರ್ಯಪಡುವಂತಾಯಿತು.

ಬೂರ್ಜ್ವಾ ಮುಖಂಡ ಗಾಂಧಿ ಭಾರತಕ್ಕೆ ಒಂದು ಬಂಡವಾಳಶಾಹಿ ನೇತೃತ್ವದ ಆರ್ಥಿಕವನ್ನು, ರಾಜಕೀಯ ವ್ಯವಸ್ಥೆಯನ್ನು ಹಾಗೂ ಸಂಸ್ಕೃತಿಯನ್ನು ಪಡೆಯುವಲ್ಲಿ ಯಶಸ್ವಿಯಾದರು. ಆದರೆ ಇದು ಅವರು ಪ್ರತಿಪಾದಿಸುತ್ತಿದ್ದ ದರಿದ್ರನಾರಾಯಣನ ಸೇವೆ, ಹಿಂದೂ-ಮುಸ್ಲಿಂ ಐಕ್ಯತೆ, ಜನಗಳ ಒಳಿತು ಇತ್ಯಾದಿಗಳನ್ನೆಲ್ಲಾ ನಿರಾಕರಿಸುವ ಆರ್ಥಿಕ, ರಾಜಕೀಯ ವ್ಯವಸ್ಥೆಯಾಗಿತ್ತು.

ತನ್ನ ಕಾಲು ಶತಮಾನದ ಚಟುವಟಿಕೆಗಳ ಒಟ್ಟು ಫಲಿತಾಂಶವನ್ನು ಕಂಡು ನಿರಾಶರಾಗಿದ್ದ ಅವರು ನಾಥುರಾಂ ಗೋಡ್ಸೆ ದೈಹಿಕವಾಗಿ ಕೊಲ್ಲುವ ಮೊದಲೇ ಆಧ್ಯಾತ್ಮಿಕವಾಗಿ ಸತ್ತಿದ್ದರು ಎಂದು ಇ.ಎಂ.ಎಸ್. ಅಭಿಪ್ರಾಯ ಪಟ್ಟಿದ್ದಾರೆ.

## ಮಹಿಳೆ- ಆರೋಗ್ಯ-ಸಂಶೋಧನೆ ಕುರಿತು ಚರ್ಚೆ

**ವರದಿ : ಎಸ್.ಪ್ರಭಾ**

1920 ರಿಂದ 30 ರವರೆಗೆ ಮಲೇರಿಯಾ ರೋಗ ನಿರೋಧಕವಾಗಿ ಬಳಸುತ್ತಿದ್ದ "ಕ್ವಿನ ಕ್ರೆನ್" ಎಂಬ ಔಷಧಿಯನ್ನು, ಯಾವುದೇ ರೀತಿಯ ಪ್ರಯೋಗಕ್ಕೆ ಒಳಪಡಿಸದೆ, ಉತ್ತಮ ಔಷಧಿಯೆಂದು ಸಾಬೀತು ಪಡಿಸುವ ಗೋಜಿಗೂ ಹೋಗದೆ ಕಾನೂನು ಬಾಹಿರವಾಗಿ ಗರ್ಭನಿರೋಧಕವಾಗಿ ಬಳಸಲಾಗುತ್ತಿದೆ. ಇತ್ತೀಚಿಗೆ ಕೆಲವು ವೈದ್ಯರುಗಳು ರೋಗಿಗಳ ಗಮನಕ್ಕೆ ಬಾರದಂತಯೇ ಈ ಗರ್ಭ ನಿರೋಧಕವನ್ನು ಅಳವಡಿಸುತ್ತಿದ್ದು (ಇದರ ಅಡ್ಡ ಪರಿಣಾಮಗಳನ್ನು ಲೆಕ್ಕಿಸದೆಯೆ) ಈ ಔಷಧಿಯ ಬಳಕೆಯನ್ನು ಕುರಿತಂತೆ ಸ್ಪಷ್ಟ ತಿಳುವಳಿಕೆಯನ್ನು ಪಡೆಯುವ ಸಲುವಾಗಿ ಸೆಪ್ಟೆಂಬರ್ 28 ರಂದು ಬೆಂಗಳೂರಿನಲ್ಲಿ "ಮಹಿಳೆ-ಆರೋಗ್ಯ-ಸಂಶೋಧನೆ" ಎಂಬ ಚರ್ಚೆ ನಡೆಯಿತು. ವಿವಿಧ ಸಂಘಟನೆಗಳು ಕೂಡಿ ರಚಿಸಿಕೊಂಡಿರುವ ಮಹಿಳಾ ಆರೋಗ್ಯ ರಕ್ಷಣಾ ಸಮಿತಿ (MARS) ಈ ಕಾರ್ಯಕ್ರಮವನ್ನು ಸಂಘಟಿಸಿತ್ತು.

ಕಾರ್ಯಕ್ರಮದಲ್ಲಿ ಪ್ರಮುಖರಾಗಿ ಪಾಲ್ಗೊಂಡಿದ್ದ ಡಾ|| ಹೇಮಲತಾ ಮಹಿಷಿಯವರು ಮಹಿಳಾ ಆರೋಗ್ಯ ರಕ್ಷಣಾ ಸಮಿತಿಯನ್ನು ಉದ್ಘಾಟಿಸುವುದರೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು. MARS ಹೊರತಂದ "ಕ್ವಿನ ಕ್ರೆನ್ ಭಯಾನಕ ಗರ್ಭ ನಿರೋಧಕ" ಕಿರುಹೊತ್ತಿಗೆಯನ್ನು ಡಾ. ಗಿರಿಜಮ್ಮ ಬಿಡುಗಡೆ ಮಾಡಿದರು.

ಫ್ರಂಟಲೈನ್ ಇಂಗ್ಲೀಷ್ ಪತ್ರಿಕೆಯ ಶ್ರೀಮತಿ ಪಾರ್ವತಿ ಮೆನನ್ ಮತ್ತು ಡಾ. ಪ್ರಕಾಶ್ ಸಿ. ರಾವ್ ವಿಚಾರಮಂಡನೆ ಮಾಡಿದರು.

ಡಾ. ಪ್ರಕಾಶ್.ಸಿ.ರಾವ್. ಈ ವಿಧಾನದ ಬಗ್ಗೆ ವಿವರಿಸುತ್ತಾ "ಈ ಔಷಧಕ್ಕೆ ಯಾವುದೇ ಸಂಬಂಧಪಟ್ಟ ಇಲಾಖೆಗಳು ಅನುಮತಿ ನೀಡಿಲ್ಲ, ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ನಿಷೇಧಿಸಿರುವ ಔಷಧಿ ಭಾರತದಲ್ಲಿ ಮಹಿಳೆಯರ ಮೇಲೆ ಪ್ರಯೋಗಿಸಲ್ಪಡುತ್ತಿದೆ. ಇದರಿಂದ ಜೀವಕ್ಕೆ ಅಪಾಯವಾಗುವಂತಹ ಅಡ್ಡ ಪರಿಣಾಮಗಳುಂಟು, ಭಾರತದ ಔಷಧ ನಿಯಂತ್ರಣ ಮಂಡಳಿ ಈ ಔಷಧಿಯನ್ನು ನಿಷೇಧಿಸುವುದಕ್ಕೆ ಬದಲಾಗಿ ಅಸಹಾಯಕತೆಯನ್ನು ಪ್ರದರ್ಶಿಸುತ್ತಿದೆ. ಈ ಔಷಧ ಕಳ್ಳ ಸಾಗಣಿಕೆಯ ಮೂಲಕ ನಮ್ಮ ದೇಶಕ್ಕೆ ಬರುತ್ತಿದೆ" ಎನ್ನುತ್ತಾ ಹಲವಾರು ಉಪಯುಕ್ತ ಮಾಹಿತಿಗಳನ್ನು ಸ್ಲೈಡ್ ಪ್ರದರ್ಶನದ ಮೂಲಕ ಒದಗಿಸಿದರು.

ವಿಚಾರ ಮಂಡನೆ ಮಾಡಿದ ಎಲ್ಲರೂ ಮಹಿಳೆಯ ಆರೋಗ್ಯವೆಂದರೆ 'ಸುರಕ್ಷಿತ ತಾಯ್ತತನ' ಮಾತ್ರವಲ್ಲ. ಕುಟುಂಬ ಕಲ್ಯಾಣವೆಂದರೆ ಮಹಿಳೆಯನ್ನೇ ಹೊಣೆ ಮಾಡುವುದು ಸರಿಯಲ್ಲ, ಮಹಿಳೆಯ ಆರೋಗ್ಯದ ಕುರಿತು ಸ್ವತ: ಮಹಿಳೆಯನ್ನು ಸೇರಿಸಿಕೊಂಡಂತೆ ಸಮಾಜದ ಕಾಳಜಿ ಬೇಕು, ಮಹಿಳೆಯರ ಆರೋಗ್ಯವನ್ನು ನಿರ್ಲಕ್ಷಿಸುವುದು ತರವಲ್ಲ ಎಂದರು. ಮಹಿಳೆಯರ ಮೇಲೆ ಪ್ರಯೋಗವಾಗುತ್ತಿರುವ ಕ್ವಿನ ಕ್ರೇನ್ ಔಷಧಿಯು ಅಪಾಯಕಾರಿಯಾದ್ದರಿಂದ ಇದನ್ನು ನಿಷೇಧಿಸಬೇಕು ಎಂದರು.

ಇದೇ ಸಂದರ್ಭದಲ್ಲಿ ಕುಟುಂಬ ಕಲ್ಯಾಣಕ್ಕಾಗಿ ಈ ವಿಧಾನವನ್ನು ಬಳಸಿ ಬೇರೆ ಬೇರೆ ರೀತಿಯ ತೀವ್ರ ಪರಿಣಾಮಗಳನ್ನೇ ದುರಿಸುತ್ತಿರುವ ಮಹಿಳೆಯರ ಅಭಿಪ್ರಾಯಗಳನ್ನು ಸೇರಿಸಿ ಸಂಗ್ರಹಿಸಿದ್ದ ವಿಡಿಯೋ ಪ್ರದರ್ಶನವನ್ನು ಮಾಡಲಾಯಿತು.

ಜಾಗೃತಿ ಮಹಿಳಾ ಅಧ್ಯಯನ ಕೇಂದ್ರದ ಶ್ರೀಮತಿ ಸುಮಿತ್ರಾಭಾಯಿ ಅಧ್ಯಕ್ಷತೆ ವಹಿಸಿದ್ದ ಕಾರ್ಯಕ್ರಮದ ಪ್ರಸ್ತಾವಿಕ ಭಾಷಣವನ್ನು ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಅಧ್ಯಕ್ಷರಾದ ಕೆ.ಎಸ್. ವಿಮಲಾ ಮಾಡಿದರು. 'ಅಚಲ' ಪತ್ರಿಕೆಯ ಎಸ್. ಗಾಯಿತ್ರಿ ಕಾರ್ಯಕ್ರಮ ನಿರ್ವಹಣೆ ಮಾಡಿದರು, ಎನ್. ಪ್ರಭಾ ವಂದಿಸಿದರು. ○

KRNM/BGS-405 MAG(2) PRB DECR 319-79/79

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ. ರಾಮಚಂದ್ರರಾವ್ ಸಂಪಾದಕರು: ಪಿ.ರಾಮಚಂದ್ರರಾವ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ ಸಂಪಂಗಿರಾಮನಗರ, ಬೆಂಗಳೂರು - 27 ಫೋನ್ ನಂ. 2236462, ವ್ಯವಸ್ಥಾಪಕ ಕಛೇರಿ: ನಂ.24, 5ನೇ ಮುಖ್ಯ ರಸ್ತೆ ಗಾಂಧಿನಗರ, ಬೆಂಗಳೂರು-9 ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ಸ್ ರಸ್ತೆ ಬೆಂಗಳೂರು